ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 21 ಸಂಚಿಕೆ 22 ಮೇ 25-31, 1998 ರೂ. 2.00

ಭದ್ರತೆಗಾಗಿ ಪರಮಾಣು ಸ್ಫೋಟ ಎಂಬ ನೆಪ-ರಾಷ್ಟ್ರವಿರೋಧಿ ಆರ್ಥಿಕ ನೀತಿಗಳ ಜ್ಯಾರಿ!

ಪ್ರಧಾನಮಂತ್ರಿ ಅಟಲ್ ಬಿಹಾರಿ ವಾಜಪೇಯಿಯವರು ಭಾರತ ಪರಮಾಣು ಶಸ್ತ್ರಾಸ್ತ್ರಗಳನ್ನು ತನ್ನ ಶಸ್ತ್ರಾಗಾರದಲ್ಲಿ ಹೊಂದಬೇಕೆಂದು ತನ್ನ ಸರಕಾರ ನಿರ್ಧರಿಸಿದೆ ಎಂದು ಬಹಿರಂಗವಾಗಿಯೇ ಸಾರಿದ್ದಾರೆ; ಭಾರತ ಈಗ ಒಂದು ಪರಮಾಣು ಶಸ್ತ್ರಾಸ್ತ್ರ ಸಜ್ಜಿತ ದೇಶ ಎಂದೂ ಅವರು ಹೇಳಿಕೊಂಡಿದ್ದಾರೆ.ಇದು ಗಂಭೀರ ದುಷ್ಪರಿಣಾಮ ಬೀರಬಲ್ಲ ಒಂದು ಪ್ರಮುಖ ಧೋರಣೆಯ ಘೋಷಣೆ ಎಂದು ಎಡಪಕ್ಷಗಳು ಇದನ್ನು ಬಲವಾಗಿ ಖಂಡಿಸಿವೆ.

ಶ್ರಮಿಕ ವರ್ಗಕ್ಕೆ ಮಾರಕವಾದ ಜಾಗತೀಕರಣ ವಿರುದ್ಧ ಐಕ್ಯ ಹೋರಾಟ

ರೈತ-ಕೂಲಿಕಾರರ ಜಂಟಿ ಸಮಾವೇಶದ ಕರೆ



ರೈತ-ಕೃಷಿಕೂಲಿಕಾರರ ಆತ್ಮಹತ್ಯೆಗೆ ಕಾರಣವಾದ, ಶ್ರಮಿಕ ವರ್ಗದ ಕಡು ವಿರೋಧಿ ಉದಾರೀಕರಣ, ಖಾಸಗೀಕರಣ ಹಾಗೂ ಜಾಗತೀಕರಣದ ವಿರುದ್ಧ ರೈತ-ಕೃಷಿ ಕೂಲಿಕಾರ ಹಾಗೂ ಕಾರ್ಮಿಕರು ಒಂದು ರಾಷ್ಟ್ರವ್ಯಾಪಿ ಐಕ್ಯಹೋರಾಟ ನಡೆಸಬೇಕಾಗಿದೆ ಎಂದು ಅಖಿಲ ಭಾರತ ಕಿಸಾನ್ ಸಭಾದ ಪ್ರಧಾನ ಕಾರ್ಯದರ್ಶಿ ಸಿಪಿಐ(ಎಂ) ನ ಪೊಲಿಟ್‌ಬ್ಯೂರೋ ಸದಸ್ಯರು ಹಾಗೂ ಸಂಸತ್ ಸದಸ್ಯರಾದ ಎಸ್.ರಾಮಚಂದ್ರನ್ ಪಿಳ್ಳೈ ಕರೆ ನೀಡಿದರು.

ಬೆಂಗಳೂರಿನ ಪುರಭವನದಲ್ಲಿ ಮೇ 18 ರಂದು ಪ್ರಾಂತ ರೈತ ಸಂಘ, ರಾಜ್ಯ ರೈತ ಸಂಘ ಹಾಗೂ ಪ್ರಾಂತ ಕೃಷಿ ಕೂಲಿಕಾರರ ಸಂಘಟನೆಗಳು ಜಂಟಿಯಾಗಿ ಏರ್ಪಡಿಸಿದ್ದ ರೈತ-ಕೂಲಿಕಾರರ ಸಮಾವೇಶ ಉದ್ಘಾಟಿಸಿ ಮಾತನಾಡಿದ ಎಸ್.ರಾಮಚಂದ್ರ ಪಿಳ್ಳೆಯವರು ಶ್ರೀಮಂತ ವರ್ಗದ ಪರವಾದ ಆರ್ಥಿಕ ನೀತಿ ಜಾರಿಗೆ ತಂದ್ದಿದ್ದರ ಪರಿಣಾಮವೇ ಕರ್ನಾಟಕ, ಆಂಧ್ರಪ್ರದೇಶ, ರಾಜಸ್ತಾನ, ಹರ್‍ಯಾಣ, ಒರಿಸ್ಸಾ ಹಾಗೂ ಆಹಾರ ಉತ್ಪಾದನೆಗಳ ತವರು ಪಂಜಾಬ್ ರಾಜ್ಯಗಳಲ್ಲಿ ಸಣ್ಣ ಹಾಗೂ ಮಧ್ಯಮ ರೈತರು ಆತ್ಮಹತ್ಯೆಯತ್ತ ಸಾಗಿರುವುದೆಂದರು.

ಭಾರತ ಸರ್ಕಾರವು 6-7 ವರ್ಷಗಳಿಂದ ವಿಶ್ವ ಬ್ಯಾಂಕ್ ಮತ್ತು ವಿಶ್ವ ವ್ಯಾಪಾರ ಸಂಘಟನೆ ನಿರ್ದೇಶಿಸಿದ ಆರ್ಥಿಕ ನೀತಿ ಜಾರಿಗೆ ತಂದು ಕೃಷಿ ಕ್ಷೇತ್ರಕ್ಕೆ ಅಪಾರವಾದ ವಿದೇಶಿ ಬಂಡವಾಳ ಹರಿದುಬಂದು ಭಾರತ ದೇಶದ ರೈತ-ಕೂಲಿಕಾರರ ಸಮುದಾಯ ಶ್ರೀಮಂತಗೊಳ್ಳುವುದೆಂಬ ಭ್ರಮೆ ಹುಟ್ಟಿಸಿ, ಪ್ರಾದೇಶಿಕ ವೈವಿಧ್ಯತೆ, ಹವಾಗುಣ ಮರೆತು ಎಲ್ಲಾ ರೈತರು ಒಂದೇ ಬೆಳೆ ಬೆಳೆಯುವಂತೆ ಪ್ರೇರೇಪಿಸಿದ್ದೇ ಇಂದಿನ ರೈತರ ಆತ್ಮಹತ್ಯೆಗೆ ಕಾರಣವಾಗಿ ರೈತರ ಬದುಕಿಗೆ ಮಾರಕವಾಗಿದೆಯೆಂದರು.

ಬಂಡವಾಳ ಶಾಹಿಯ ಅಂತರ್‍ರಾಷ್ಟ್ರೀಯ ಸಂಸ್ಥೆಗಳು ವಿಶ್ವದ ದುಡಿಯುವ ವರ್ಗವನ್ನು ಒಡೆಯುವುದು, ಬೆಳೆಗಳ ನಡುವೆ ವಿಭಜನೆ, ಬೆಲೆಗಳನ್ನು ಇಳಿಸುವುದು ಆಮದು ಮತ್ತು ರಫ್ತು ಮೇಲಿನ ನಿರ್ಬಂಧ ತೆಗೆದು ಹಾಕುವಂತೆ ಒತ್ತಡ ತಂದು ಭಾರತದಂತಹ ತೃತೀಯ ಜಗತ್ತಿನ ರಾಷ್ಟ್ರಗಳ ರೈತರ ಬೆಳೆನಾಶ ಮಾಡತೊಡಗಿವೆ ಎಂದರು.

ಹೆಚ್ಚುಲಾಭಕ್ಕಾಗಿ ಒಂದೇ ಬೆಳೆ:

ರೈತರು ಒಂದೇ ಬೆಳೆಯನ್ನು ಬೆಳೆಯ ಹೊರಟರೆ ಹೆಚ್ಚು ಲಾಭಗೊಳಿಸಬಹುದೆಂಬ ಭ್ರಮೆ ಸೃಷ್ಟಿಸಿ(ಉದಾ: ಹತ್ತಿ, ಗುಲಾಬಿ, ಕಬ್ಬು ಗೋದಿ) ಸಣ್ಣ ಮಧ್ಯಮ ರೈತರಿಗೆ ಸರ್ಕಾರಿ ಸಾಲ ಕಡಿತಗೊಳಿಸಿ ಕಂಪನಿಗಳಿಂದ ಕಳಪೆ ಬೀಜ, ಗೊಬ್ಬರ, ಕ್ರಿಮಿನಾಶಕ ನೀಡುವ ಮೂಲಕ ಈ ವರ್ಷಗಳಲ್ಲಿ ಪ್ರತಿ ಎಕ್ಟೇರ್‌ಗಳಲ್ಲಿ ಇಳುವರಿ ಕಡಿಮೆಯಾಗತೊಡಗಿದೆ. ಪ್ರಾದೇಶಿಕ ಅಸಮಾನತೆ ಕೂಡ ರೈತರ ಆತ್ಮಹತ್ಯೆಗೆ ಕಾರಣಗಳಾಗಿವೆ ಎಂದು ವಿವರಿಸಿದರು.

ಅಂತರ್‍ರಾಷ್ಟ್ರೀಯ ಮಾರುಕಟ್ಟೆಗೆ ಬನ್ನಿ!

ನಿಮ್ಮ ದೇಶದ ಮಾರುಕಟ್ಟೆಯಲ್ಲಿ ನಿಮ್ಮ ಉತ್ಪಾದನೆಗಳಿಗೆ ಕಡಿಮೆ ಬೆಲೆ ಇದೆ. ಅಂತರ್‍ರಾಷ್ಟ್ರೀಯ ಮಾರುಕಟ್ಟೆಗೆ ತನ್ನಿ ಹೆಚ್ಚಿನ ಲಾಭ ಪಡೆಯಿರಿ. ನಮ್ಮ ಎಲ್ಲಾ ಸರಕುಗಳಿಗೂ ರಫ್ತ ನಿರ್ಬಂಧ ತೆಗೆಯಿರಿ ಎಂದ ಅಂತರ್‍ರಾಷ್ಟ್ರೀಯ ಸಂಸ್ಥೆಗಳು ಕ್ರಮೇಣ ನಮ್ಮ ವಸ್ತುಗಳ ಮೇಲೆ ನಿರ್ಬಂಧ ಹೇರತೊಡಗಿವೆ. (ಉದಾ: ಮೀನು ಮತ್ತು ಸೀಗಡಿ) ನೀವು ಬಳಸುವ ಬಲೆಗಳು ತುಂಬಾ ಸಣ್ಣದಿದೆ, ಸಮುದ್ರದ ಸಣ್ಣ ಸಣ್ಣ ಜಂತುಗಳು ಇದರಿಂದ ನಾಶವಾಗುತ್ತದೆ. ಸೀಗಡಿ ಮುಟ್ಟುವ ನಿಮ್ಮ ಕೈಗಳು ಶುದ್ಧವಾಗಿಲ್ಲ, ನೀವು ಬಳಸುವ ಸಾಬೂನು, ಟೂತ್‌ಪೇಸ್ಟ್ ಸರಿಯಾದುದಲ್ಲ, ಕೈಗಾರಿಗಾ ಉತ್ಪನ್ನಗಳಿಗೆ ಬಾಲ ಕಾರ್ಮಿಕರಿಂದ ಉತ್ಪಾದನೆ ಮಾಡಿಸಿದ್ದೀರಿ ಕಡಿಮೆ ಸಂಬಳದಿಂದ ತಯಾರಿಸಿದ್ದೀರಿ ಎಂಬಿತ್ಯಾದಿ) ತಮ್ಮ ಸರಕು ವಿಶ್ವ ಮಾರುಕಟ್ಟೆಯಲ್ಲಿ ಮಾರಾಟವಾಗುವಂತೆ ಮಾಡಿರುವ ಅವರ ಹುನ್ನಾರವನ್ನು ಎಸ್.ಆರ್.ಪಿ. ವಿವರಿಸಿದರು.

ಇತ್ತೀಚಿಗೆ ಕೇಂದ್ರ ಸರಕಾರ ರಫ್ತ ಮತ್ತು ಆಮದು ನೀತಿಯ ಮೇಲಿನ ನಿರ್ಭಂಧ ತೆಗೆದು ಹಾಕಿ ಭಾರತದ ಬಡ ಜನತೆಯನ್ನು ಭಾದಕಕ್ಕೆ ನೂಕಿರುವ ಕ್ರಮವನ್ನು ಖಂಡಿಸಿದರು. ಮಾರುಕಟ್ಟೆಯೇ ಎಲ್ಲವನ್ನು ನಿರ್ಧರಿಸುವುದಾದರೆ, ಸರ್ಕಾರಗಳು ಅನಾವಶ್ಯಕವೆಂದ ಅವರು ಮಾರುಕಟ್ಟೆ ಇರುವುದು ಶ್ರೀಮಂತರ ರಕ್ಷಣೆಗಾಗಿ, ಸರ್ಕಾರ ಮಧ್ಯ ಪ್ರವೇಶಿಸಿದರೆ ಹೆಚ್ಚಿನ ಲಾಭ ಸಿಗುವುದಿಲ್ಲವೆಂಬುದು ಬಹುರಾಷ್ಟ್ರೀಯ ಸಂಸ್ಥೆಗಳ ತಂತ್ರವಾಗಿದೆ ಎಂದರು.

ವಿಶ್ವ ಬ್ಯಾಂಕ್ ಹಾಗೂ ವಿಶ್ವ ವ್ಯಾಪಾರ ಸಂಘಟನೆಯ ಆದೇಶದಂತೆ ಈಗಿನ ಕೇಂದ್ರ ಸರ್ಕಾರವು ಭೂಮಿತಿ ಕಾಯಿದೆ ರದ್ದುಗೊಳಿಸಿ ರೈತರಿಗೆ ಕೊಡುವ ಸಹಾಯಧನ ನಿಲ್ಲಿಸಿ ಹಾಗೂ ಸಣ್ಣ ಮತ್ತು ಮಧ್ಯಮ ರೈತರಿಗೆ ಸಹಾಯವಾಗಿದ್ದ ವಿದ್ಯುತ್ ಪೂರೈಕೆಯನ್ನು ನಿಲ್ಲಿಸಿ ರೈತರನ್ನು ಮತ್ತಷ್ಟು ಬರದತ್ತ ದೂಡುತ್ತದೆ ಎಂದರು.

ಸದ್ಯದ ಪರಿಹಾರ

ರೈತರು ಇಂದು ಎದುರಿಸುತ್ತಿರುವ ಸಂಕಷ್ಟಗಳನ್ನು ದೂರ ಮಾಡಲು ಮತ್ತು ಅವರ ಹಡಗಿದ ಆತ್ಮಸ್ಥೈರ್ಯವನ್ನು ಹುರಿದುಂಬಿಸಬೇಕಾದರೆ ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ಹೆಚ್ಚಿನ ಹಣ ನೀಡಬೇಕಾಗಿದೆ. ರೈತರಿಗೆ ಸರ್ಕಾರ ಸಾಲ ನೀಡಬೇಕಾಗಿದೆ. ಸಮಗ್ರವಾದ ಬೆಳೆ ವಿಮೆ ಜಾರಿಗೆ ಬರಬೇಕಾಗಿದೆ. ಎಲ್ಲಾ ಪ್ರದೇಶಗಳ ಎಲ್ಲಾ ಬೆಳೆಗಳಿಗೂ ಬೆಳೆ ವಿಮೆ ತರಬೇಕು. ಒಳ್ಳೆಯ ಗೊಬ್ಬರ, ಬೀಜ ನೀಡಬೇಕಾಗಿದೆ ಎಂದ ಪಿಳ್ಳೈಯವರು ಸರ್ಕಾರ ಕೂಡಲೇ ಮಧ್ಯಪ್ರವೇಶಿಸುವಂತೆ ಆಗ್ರಹಿಸಿದರು.

ರಾಷ್ಟ್ರೀಯ ಕೂಗಾಗಬೇಕು

ರೈತ-ಕೃಷಿಕೂಲಿಕಾರ ಹಾಗೂ ದುಡಿಯುವ ಜನತೆಯ ನಿತ್ಯ ಬದುಕಿಗೆ ಮಾರಕವಾದ ಈ ಉದಾರೀಕರಣ-ಖಾಸಗೀಕರಣ-ಜಾಗತೀಕರಣ ವಿರುದ್ಧ ತೊಂದರೆಗೊಳಗಾದ ದೇಶದ ದೊಡ್ಡ ಸಮೂಹವಾದ ರೈತ ಸಮುದಾಯ ಸಂಘಟಿತ ಒಂದು ಐಕ್ಯ ಹೋರಾಟ ನಡೆಸಬೇಕಾಗಿದೆ ಎಂದರು. ಈ ಪ್ರಯತ್ನ ಆಂಧ್ರದಲ್ಲಿ ಈಗಾಗಲೇ ನಡೆದಿದ್ದು, ಮಹಾರಾಷ್ಟ್ರದಲ್ಲಿಯೂ ಮುಂದುವರಿದಿದೆ. ಈ ಯತ್ನ ಎಲ್ಲಾ ಕಡೆ ನಡೆಯಬೇಕಾಗಿದೆ. ಈ ರಾಷ್ಟ್ರೀಯ ಕೂಗು ದೇಶದ ಕಾರ್ಮಿಕ ವರ್ಗವು ಕೂಡಿಕೊಳ್ಳುವ ನಿಟ್ಟಿನಲ್ಲಿ ನವ ದೆಹಲಿಯಲ್ಲಿ ಒಂದು ರಾಷ್ಟ್ರೀಯ ವಿಚಾರ ಸಂಕಿರಣ ನಡೆಯಲಿದೆ ಎಂದು ಕಿಸಾನ್ ಸಭಾದ ಮುಖಂಡರು ತಿಳಿಸಿದರು.

ಮೂರ್ಖ ಪೆಟ್ಟಿಗೆ ಮುಂದೆ ರೈತ!

ಸಮಾವೇಶದಲ್ಲಿ ಮಾತನಾಡಿದ ಪ್ರಾಂತ ರೈತ ಸಂಘದ ಮುಖಂಡರು ಶಾಸಕರೂ ಆದ ಶ್ರೀರಾಮರೆಡ್ಡಿ ಹಿಂದೆ ಊರಿನ ಮುಂದಿನ ಹರಳಿಕಟ್ಟೆಯ ಮುಂದೆ ಕೂತು ಬಿತ್ತಬೇಕಾದ ವ್ಯವಸಾಯದ ಬಗ್ಗೆ ಮಾತನಾಡಿದರೆ ಇಂದು ಮೂರ್ಖ ಪೆಟ್ಟಿಗೆ ಟಿ.ವಿ. ಮುಂದೆ ಕೂತು ಬಹುರಾಷ್ಟ್ರೀಯ ಕಂಪನಿಗಳ ಕಳಪೆ ಗೊಬ್ಬರ, ಬೀಜ, ಕ್ರಿಮಿನಾಶಕಗಳ ಬಗ್ಗೆ ವಿವರ ಪಡೆಯುತ್ತಿದ್ದಾನೆ ಎಂದ ಅವರು ರಾಜ್ಯ ಸರ್ಕಾರಗಳು ರೈತರ ಆತ್ಮಹತ್ಯೆಯನ್ನು ಗಂಭೀರವಾಗಿ ಪರಿಗಣಿಸದಿರುವುದನ್ನು ಶಾಸಕರು ಖಂಡಿಸಿ, ಹೋರಾಟದ ಮುಖ್ಯ ವಾಹಿನಿಯಲ್ಲಿ ಕೋಮುವಾದಿ ಜಾತಿವಾದಿಗಳನ್ನು ದೂರವಿಟ್ಟು ದೊಡ್ಡ ರೀತಿಯಲ್ಲಿ ಐಕ್ಯಹೋರಾಟ ನಡೆಸಬೇಕಾಗಿದೆ ಎಂದು ಕರೆ ನೀಡಿದರು.

ಸಿಪಿಐನ ಎಂ.ಸಿ.ವೆಂಕಟರಾಮು ಮಾತನಾಡಿ ಬಂಡವಾಳ ರಾಷ್ಟ್ರಗಳು

ಪುಟ 7 ಕ್ಕೆ

ಮೇ16ರಂದು ಸಿಪಿಐ(ಎಂ), ಸಿಪಿಐ, ಆರ್‌ಎಸ್‌ಪಿ ಮತ್ತು ಫಾರ್ವರ್ಡ್‌ಬ್ಲಾಕಿನ ಮುಖಂಡರ ಒಂದು ಸಭೆಯ ನಂತರ ನೀಡಿರುವ ಜಂಟಿ ಹೇಳಿಕೆ "ಬಿಜೆಪಿ ಈ ದುಸ್ಸಾಹಸದ ಧೋರಣೆಯತ್ತ ಧಾವಿಸಿರುವುದು ಸಂಕುಚಿತ ಭಾವೋದ್ರೇಕ ಹಾಗೂ ದುರಭಿಮಾನದ ಅಲೆ ಎಬ್ಬಿಸಿ ಕ್ಷಯರೋಗ ಪೀಡಿತವಾದಂತಿರುವ ತನ್ನ ಸಮಿಶ್ರ ಸರಕಾರ ವನ್ನು ನಡೆಸುವಲ್ಲಿ ಎದುರಿಸುತ್ತಿರುವ ತೊಂದರೆಗಳನ್ನು, ದೇಶದ ಗಂಭೀರ ಸಮಸ್ಯೆಗಳನ್ನು ಎದುರಿಸುವಲ್ಲಿ ತನ್ನ ವಿಫಲತೆಗಳನ್ನು ಮುಚ್ಚಿಹಾಕಲು. ಅಮೆರಿಕಾ ಮತ್ತಿತರ ಕೆಲವು ದೇಶಗಳು ಹಾಕಿರುವ ನಿರ್ಬಂಧಗಳನ್ನು ಖಂಡಿಸುತ್ತಲೇ ಎಡಪಕ್ಷಗಳು ಬಿಜೆಪಿ ಸರಕಾರದ ಈ ಧೋರಣೆಯ ಇನ್ನೊಂದು ಮಗ್ಗುಲಾದ ದೇಶದ ಆರ್ಥಿಕದ ಎಲ್ಲಾ ವಲಯಗಳನ್ನು ಬಹುರಾಷ್ಟ್ರೀಯ ಕಮುಪನಿಗಳಿಗೆ ಇನ್ನಷ್ಟು ತೆರೆದಿಡುವ ಧೋರಣೆಯನ್ನು ಎಡಪಕ್ಷಗಳು ಖಂಡಿಸುತ್ತವೆ. ಈ ರಾಷ್ಟ್ರವಿರೋಧಿ ಧೋರಣೆ ಜನಗಳ ಸಂಕಟಗಳನ್ನು ಇನ್ನಷ್ಟು ಹೆಚ್ಚಿಸುತ್ತವಷ್ಟೆ"ಎಂದು ಸ್ಪಷ್ಟವಾಗಿ ಹೇಳಿವೆ. (ಈ ಸಂಚಿಕೆ ಮುದ್ರಣಕ್ಕೆ ಹೋಗುವ ವೇಳೆಗೆ ವಾಜಪೇಯಿ ಸಂಪುಟದ ಇನ್ನೊಬ್ಬ ಮಂತ್ರಿ ರಾಜೀನಾಮೆ ನೀಡಿರುವ ಸುದ್ದಿ ಬಂದಿದೆ.)

ಸರಿಯಾದ ಬಹುಮತವಿಲ್ಲದ ಬಿಜೆಪಿ ನೇತೃತ್ವದ ಸರಕಾರ ಇಂತಹ ಒಂದು ಮಹತ್ವದ ವಿಷಯದಲ್ಲಿ ಇತರ ರಾಷ್ಟ್ರೀಯ ಪಕ್ಷಗಳೊಡನೆ ಮಾತ್ರವಲ್ಲ, ತನ್ನ ಮಿತ್ರಪಕ್ಷ ಗಳೊಡನೆಯೂ ಸಮಾಲೋಚಿಸುವ ಒಂದು ಕನಿಷ್ಟ ಪ್ರಜಾಸತ್ತಾತ್ಮಕ ನಿಲುವನ್ನೂ ತೋರಿಲ್ಲ. ಬಿಜೆಪಿಯ ಧೋರಣೆಯನ್ನು ಸರಕಾರದ ಧೋರಣೆಯಾಗಿಸಿ ಎಲ್ಲಾ ಮುಗಿಸಿದ ನಂತರವೇ ಸಂಸತ್ತಿನ ಬಜೆಟ್ ಅಧಿವೇಶನದ ಮೊದಲು ಪ್ರತಿಪಕ್ಷಗಳ ಮುಂಖಡರ ಸಭೆ ಕರೆದಿದ್ದಾರೆ. ಭಾರತದ ಜನತೆಯನ್ನು ವಿಶ್ವಾಸಕ್ಕೆ ತಗೊಳ್ಳದೆ ವಾಜಪೇಯಿ ಸರಕಾರ ಅಮೇರಿಕದ ಅಧ್ಯಕ್ಷ ಕ್ಲಿಂಟನ್‌ಗೆ ಮಾತ್ರ ತಡಮಾಡದೆ ಈ ಬಗ್ಗೆ ಪತ್ರ ಬರೆಯಲು ಮರೆಯಲಿಲ್ಲ. ಇದು ಭಾರತೀಯ ಜನತೆಗೆ ಈ ಸರಕಾರ ತೋರಿರುವ ತಿರಸ್ಕಾರ ಎಂದು ಎಡ ಪಕ್ಷಗಳು ಖಂಡಿಸಿವೆ. ವಿದೇಶಿ ಸರಕಾರದ ಮುಖ್ಯಸ್ಥರೊಬ್ಬರಿಗೆ ಬರೆದ ಈ ಪತ್ರದಲ್ಲಿ ನಮ್ಮ ಪ್ರಧಾನ ಮಂತ್ರಿಗಳು ಚೀಣಾದಿಂದ ಭಾರತಕ್ಕಿರುವ ಬೆದರಿಕೆಯಿಂದಾಗಿ ಹೀಗೆ ಮಾಡಿದೆವು ಎಂದು ಅವರನ್ನು ಸಂತೈಸಲು ಪ್ರಯತ್ನಿಸಿದ್ದಾರೆ. ಈ ಬೆದರಿಕೆಯೇನು ಎಂದು ತನ್ನ ದೇಶಬಾಂಧವರಿಗೆ ಇನ್ನೂ ಸ್ಪಷ್ಟವಾಗಿ ತಿಳಿಸಿಲ್ಲ ಈ ಪ್ರಖರ 'ದೇಶಪ್ರೇಮಿ'!

ಪ್ರಸ್ತುತ ಘಟ್ಟದಲ್ಲಿ ಪರಮಾಣು ಬಾಂಬುಗಳನ್ನು, ಶಸ್ತ್ರಾಸ್ತ್ರಗಳ್ನು ತಯಾರಿಸುವ ಅಗತ್ಯವೇ ಇರಲಿಲ್ಲ, ಮಾತ್ರವಲ್ಲ, ಇದು ದೇಶದ ಹಿತಾಸಕ್ತಿಗಳಿಗೆ ವಿರುದ್ಧವಾದದ್ದು ಎಂಬುದು ತಮ್ಮ ದೃಢ ಅಭಿಪ್ರಾಯ ಎಂದು ಎಡಪಕ್ಷಗಳ ಈ ಹೇಳಿಕೆ ಒತ್ತಿ ಹೇಳಿದೆ. ಭಾರತದ ವಿರುದ್ಧ ಯಾವುದೇ ದೇಶ ಈಗ ನೇರ ಪರಮಾಣು ಬೆದರಿಕೆ ಹಾಕಿಲ್ಲ ಎಂದು ಅವರು ಸ್ಪಷ್ಟವಾಗಿ ಅಭಿಪ್ರಾಯ ಪಟ್ಟಿದ್ದಾರೆ. ಬಿಜೆಪಿ ಸರಕಾರ ತನ್ನ ಈ ಮಂದದೃಷ್ಟಿಯ ಹಾಗೂ ನಮ್ಮ ರಾಷ್ಟ್ರೀಯ ಹಿತಾಸಕ್ತಿಗಳಿಗೆ ವಿರುದ್ಧವಾದ ಇಂತಹ ಧೋರಣೆಯಿಂದಾಗಿ ಒಂದು ದಶಕದಿಂದ ನಡೆದುಬಂದ ಸುಧಾರಣೆಗಳನ್ನು ತಡೆದು ಚೀಣಾದೊಂದಿಗೆ ಸಂಘರ್ಷವನ್ನು ಮತ್ತೆ ಬೆಳೆಸಲು ಪ್ರಯತ್ನಿಸುತ್ತಿದೆ ಎಂದಿರುವ ಎಡಪಕ್ಷಗಳು ಈ ಏಕಪಕ್ಷೀಯ ಧೋರಣೆಯಿಂದಾಗಿ ವಾಜಪೇಯಿ ಸರಕಾರ ಹಲವು ವರ್ಷ ಗಳಿಂದ ನೆರೆಕೆರೆ ದೇಶಗಳೊಂದಿಗೆ ಉಳಿಸಿ ಕೊಂಡು ಬಂದಿದ್ದ, ಸಂಯುಕ್ತ ರಂಗ ಸರಕಾರ ಮುಂದುವರೆಸಿದ್ದ ಸಂಬಂಧ ಸುಧಾರಣೆ ಗಳಿಗೆ ಗಂಭೀರ ತೊಂದರೆಯುಂಟುಮಾಡಿದೆ ಎಂದು ಖೇದ ವ್ಯಕ್ತಪಡಿಸಿವೆ.

ಈ ಎಚ್ಚರಗೇಡಿ ಪರಮಾಣು ನೀತಿ ಯಿಂದಾಗಿ ಭಾರತ ಮತ್ತು ಪಾಕಿಸ್ತಾನಗಳ ನಡುವೆ ಒಂದು ಕೆಟ್ಟ ಶಸ್ತ್ರಾಸ್ತ್ರ ಪೈಪೋಟಿ ಆರಂಭವಾಗಲಿದೆ, ಇದರಿಂದಾಗಿ ದೇಶದ ಸಂಪನ್ಮೂಲವನ್ನು ವೆಚ್ಚದಾಯಕ ಹಾಗೂ ನಿರರ್ಥಕವಾದ ಪರಮಾಣು ಶಸ್ತ್ರಾಸ್ತ್ರಗಳನ್ನು ಪೇರಿಸಿಕೊಳ್ಳುವತ್ತ ತಿರುಗಿಸಬೇಕಾಗುತ್ತದೆ. ಬದುಕಿನಲ್ಲಿ ತೀವ್ರ ಸಮಸ್ಯೆಗಳನ್ನು ಎದುರಿ ಸುತ್ತಿರುವ ಭಾರತೀಯ ಜನತೆಗೆ ಈ ಶಸ್ತ್ರಾಸ್ತ್ರ ಭಂಡಾರದಿಂದ ಏನೂ ಪ್ರಯೋಜನವಿಲ್ಲ ಎಂದು ಎಡಪಕ್ಷಗಳು ಹೇಳಿವೆ.

"ಬಿಜೆಪಿ ನೇತೃತ್ವದ ಸರಕಾರ ತಕ್ಷಣ ಪರಮಾಣು ಶಸ್ತ್ರಾಸ್ತ್ರಗಳನ್ನು ಹೊಂದುವ ಮಾತನ್ನು ನಿಲ್ಲಿಸಬೇಕು-ನಮ್ಮ ನೆರೆಕರೆ ದೇಶ ಗಳೊಂದಿಗೆ ಸಂಬಂಧಗಳ ಸುಧಾರಣೆಯ

ಪುಟ 7 ಕ್ಕೆ

ದುಡಿಯುವ ಜನತೆಯ ಜೀವನಕ್ಕೆ ಬಾಧೆಯಾದ ಗುತ್ತಿಗೆ ಕಾರ್ಮಿಕ ಪದ್ಧತಿಯನ್ನು ರದ್ದು ಗೊಳಿಸುವಂತೆ ಒತ್ತಾಯಿಸಿ ಸಿಐಟಿಯು ನೇತೃತ್ವದಲ್ಲಿ ಸಾವಿರಾರು ಕಾರ್ಮಿಕರು ನಗರದ ಪುರಭವನದಿಂದ ಮೆರವಣಿಗೆ ನಡೆಸಿ ಕಾರ್ಮಿಕ ಆಯುಕ್ತರ ಕಛೇರಿ ಮುಂದೆ ಧರಣಿ ನಡೆಸಿದರು.





ಹೈಡ್ರೋಜನ್ ಬಾಂಬ್ ತಿನ್ನಿ-ಕೋಕಾಕೋಲಾ ಕುಡಿಯಿರಿ

'ಪಾಶ್ಚಿಮಾತ್ಯರಿಗೆ ನಮ್ಮ ಆರ್ಥಿಕದಲ್ಲಿ ಆಟವಾಡಲು ಇನ್ನಷ್ಟು 'ಉದಾರ' ಅವಕಾಶ ನೀಡಿ - ಇದು ಸಂಘ ಪರಿವಾರದ ದೇಶಭಕ್ತಿಯ ಹೊಸ ಮಾಡೆಲ್. ಒಂದೆಡೆ ಪಾಶ್ಚಿಮಾತ್ಯರ ನಿರ್ಬಂಧಗಳಿಗೆ ನಾವು ಹೆದರುವುದಿಲ್ಲ, ಸರಿಯಾದ ಉತ್ತರ ಕೊಡುತ್ತೇವೆ ಎಂಬೆಲ್ಲಾ ಮಾತಿನ ಮಂಟಪ, ಇನ್ನೊಂದೆಡೆ ಅಲ್ಲಿಯ ಬಂಡವಾಳಶಾಹಿಗಳಿಗೆ ಇನ್ನಷ್ಟು ರಿಯಾಯ್ತಿಗಳನ್ನು ನೀಡಿ ಅವರ ಕೈಕಾಲು ಹಿಡಿಯುವುದು - ಇದು ನಾವೀಗ ಪರಮಾಣು ಶಸ್ತ್ರಾಸ್ತ್ರ ಪ್ರಭುತ್ವವೆಂದು ಎದೆ ತಟ್ಟಿಕೊಳ್ಳುವ ದೇಶದ ಆರ್ಥಿಕ ರಂಗದಲ್ಲಿನ ಅಭಿಮಾನಶೂನ್ಯ ಚಟುವಟಿಕೆಗಳು.

ಪರಮಾಣು ಬಾಂಬು ಸಾಮರ್ಥ್ಯ ಪಡೆದ ಭಾವೋದ್ರೇಕದ ಅವಕಾಶವನ್ನೇ ಬಳಸಿ ಆರ್ಥಿಕದಲ್ಲಿ ಸುಲಿಗೆಕೋರರ ಮೇಲಿದ್ದ ಅಳಿದುಳಿದ ಹತೋಟಿಗಳನ್ನೆಲ್ಲಾ ತೆಗೆದುಹಾಕಿ ಉದಾರೀಕರಣ, ಜಾಗತೀಕರಣವನ್ನು ತೀವ್ರಗೊಳಿಸಿ - ಇದು 'ಇಂಡಿಯಾ ಟುಡೇ'ಯ ಸಂಪಾದಕೀಯ ನಮ್ಮ ಹೊಸ ಆಳರಸರಿಗೆ ನೀಡಿರುವ ಅಮೂಲ್ಯ ಸಲಹೆ. ಆದರೆ ಇವರಿಗೆ ಇದರ ಅಗತ್ಯವಿದ್ದಂತಿಲ್ಲ. ವಾಸ್ತವವಾಗಿ ವಿಜ್ಞಾನಿಗಳಿಂದ ತರಾತುರಿಯಿಂದ ಪರೀಕ್ಷೆ ನಡೆಸಿದ್ದೇ ಜನರ 'ಹೊಟ್ಟೆ-ಕಟ್ಟೆ' ಆರ್ಥಿಕವನ್ನು ಇನ್ನಷ್ಟು 'ಉದಾರೀಕರಿಸಿ' ಪಾಶ್ಚಿಮಾತ್ಯರಿಗೆ ಕೃತಜ್ಞರಾಗಿರಲು ಇರಬಹುದೇನೋ ಎಂಬ ಅನುಮಾನ ಮೂಡಿಸುವಂತಿದೆ ಕಳೆದ ಕೆಲವು ದಿನಗಳ ಚಟುವಟಿಕೆಗಳು.

ಟೈಂಸ್ ಆಫ್ ಇಂಡಿಯಾದಲ್ಲಿ ಆರ್.ಕೆ.ಲಕ್ಷ್ಮಣ್ ವ್ಯಂಗ್ಯ



ಸಾರ್, ನೀವು ಭಾಷಣ ಮಾಡುತ್ತೀರಾ? "ನಿರ್ಬಂಧಗಳು ನಮಗೇನೂ ಮಾಡವು" ಎಂಬುದನ್ನೋ ಅಥವಾ "ಮುಂದೆ ನಾವು ಕಷ್ಟಕರ ದಿನಗಳನ್ು ಎದುರಿಸಬೇಕು" ಎಂಬುದನ್ನೋ?

\+ \+ \+

ಪಾಶ್ಚಿಮಾತ್ಯ ದೇಶಗಳಿಂದ ಆರ್ಥಿಕ ನಿರ್ಬಂಧದ ಸುದ್ದಿ ಬರುತ್ತಿದ್ದಂತೆ ಇಲ್ಲಿ ಶೇರು ಮಾರುಕಟ್ಟೆ ಕುಸಿಯಿತು. ರೂಪಾಯಿ ಬೆಲೆ ಇನ್ನಷ್ಟು ಇಳಿಯಿತು. ಎರಡನೇ ಸುತ್ತಿನ ಪರೀಕ್ಷೆಯ ಮರುದಿನವೇ ಪೆಟ್ರೋಲಿಯಂ ನೈಸರ್ಗಿಕ ಅನಿಲ, ಕಲ್ಲಿದ್ದಲು, ದೂರ ಸಂಪರ್ಕ, ವಿದ್ಯುತ್, ನೆಲಸಾರಿಗೆ ಇಲಾಖೆ ಗಳಿಗೆ ಅವರ ಮುಂದಿರುವ ಎಲ್ಲಾ ವಿದೇಶೀ ಬಂಡವಾಳದ ಯೋಜನೆಗಳನ್ನು ಅವುಗಳ ಬಗ್ಗೆ ಏನೇ ತಕರಾರು ಆಕ್ಷೇಪಗಳಿದ್ದರೂ ಅವನ್ನೆಲ್ಲಾ ಬದಿಗೊತ್ತಿ ಸ್ವೀಕೃತಿ ನೀಡಲು ಆದೇಶ. ತಕ್ಷಣವೇ ಮೂರು ವಿದೇಶಿ ವಿದ್ಯುತ್ ಕಂಪನಿಗಳಿಗೆ ಪ್ರತಿ ಗ್ಯಾರಂಟಿ ನೀಡುವ ಸರಕಾರದ ತರಾತುರಿಯ ನಿರ್ಣಯದ ಸುದ್ದಿ. ಅದರ ಬೆನ್ನ ಹಿಂದೆಯೇ ವಿದೇಶಿ ಪೆಟ್ರೋಲಿಯಂ ಮತ್ತು ಗಣಿಗಾರಿಕೆ ಕಂಪನಿಗಳಿಗೆ ಕಾಂಟ್ರಾಕ್ಟ್‌ಗಳ ಸುಗ್ಗಿ. ವಿವಿಧ ಕಾರಣಗಳಿಗಾಗಿ, ವಿವಿಧ ವಿರೋಧ ಗಳಿಂದಾಗಿ ನೀಡದಿದ್ದ 18 ತೈಲ ಬ್ಲಾಕ್‌ಗಳ 4 ಕೋಟಿ ಡಾಲರುಗಳಷ್ಟು ಮೌಲ್ಯದ ಕಾಂಟ್ರಾಕ್ಟ್‌ಗಳನ್ನು 7 ವಿದೇಶಿ ಕಂಪನಿಗಳಿಗ ಪೆಟ್ರೋಲಿಯಂ ಇಲಾಖೆ ದಯಪಾಲಿಸಿದೆ. ಇವುಗಳಲ್ಲಿ 11 ಬ್ಲಾಕುಗಳನ್ನು ಅಮೆರಿಕಾದ ಕಂಪನಿಗಳು ಪಡೆದಿವೆ. ಒಂದು ಆಸ್ಟ್ರೇಲಿಯಾದ ಹಾಗೂ ಒಂದು ಐರ್ಲೆಂಡಿನ ಕಂಪನಿ. ರಾಜಸ್ತಾನ, ಮಹಾರಾಷ್ಟ್ರ, ಗುಜರಾತ್, ಮಧ್ಯಪ್ರದೇಶದ 50 ಸಾವಿರ ಚದರ ಕಿಮಿ ಪೆಟ್ರೋಲಿಯಂ ಮೂಲ ಗಳಿರುವ ಬ್ಲಾಕುಗಳನ್ನು ಇವಕ್ಕೆ ವಹಿಸ ಲಾಗಿದೆ. ಈ ಹಿಂದೆ ಒ.ಎನ್.ಜಿ.ಸಿ. ಸಂಶೋಧಿಸಿದ ಈ ಬ್ಲಾಕುಗಳಿಗೆ ಸೂಕ್ತ ಪರಿಹಾರ ನೀಡಿಲ್ಲ ಎಂದು ದೇಶದ ಮಹಾಲೆಕ್ಕಪರಿಶೋಧಕರು ಆಕ್ಷೇಪ ಎತ್ತಿದ್ದರು. ಈ ಆಕ್ಷೇಪವನ್ನೀಗ ನಿರ್ಲಕ್ಷಿಸಿ ದೇಶದ ಶ್ರೀಮಂತ ಸಂಪನ್ಮೂಲಗಳನ್ನು ಮೂರು ಕಾಸಿಗೆ ಬಹುರಾಷ್ಟ್ರೀಯ ಕಂಪನಿಗಳಿಗೆ ಮಾರಲಾಗುತ್ತಿದೆ!

\+ \+ \+

ಅದೇ ದಿನ ಗಣಿಗಾರಿಕೆ ಮಂತ್ರಾಲಯ ಲೋಹಗಳ ಅದಿರು ತೆಗೆಯುವ ಬಗ್ಗೆ 34 ಪ್ರಸ್ತಾವಗಳನ್ನು ವಿದೇಶಿ ಕಂಪನಿಗಳಿಗೆ ತರಾತುರಿಯಿಂದ 'ದಯಪಾಲಿಸಿದ' ಸುದ್ದಿಯೂ ಬಂತು. ಇವುಗಳಲ್ಲಿ 13 ಬ್ರಿಟನ್ನಿನ ಕಂಪನಿಗಳದ್ದು, 14 ಆಸ್ಟ್ರೇಲಿಯದ್ದು, ಆರು ಕೆನಡಾದ್ದು ಹಾಗೂ ಒಂದು ಅಮೆರಿಕಾದ್ದು. ರಾಜಸ್ತಾನ, ಮಹಾರಾಷ್ಟ್ರ, ಗುಜರಾತ್ ಮತ್ತು ಬಿಹಾರ್‌ನ ಒಟ್ಟು 49 ಸಾವಿರ ಚದರ ಕಿ.ಮಿ. ಗಣಿಗಳನ್ನು ವಹಿಸಿಕೊಡಲಾಗಿದೆ.

ರಕ್ಷಣಾ ಇಲಾಖೆ ಈ ಹಿಂದೆ ರಕ್ಷಣಾ ಸ್ಥಾವರಗಳಿಗೆ ಹೊಂದಿಕೊಂಡಿರುವ ಗಣಿಗಳನ್ನು ಖಾಸಗಿಯವರಿಗೆ ಕೊಡುವುದನ್ನು ಆಕ್ಷೇಪಿಸಿತ್ತು. ದೇಶದ ರಕ್ಷಣೆಗಾಗಿ ಬಾಂಬು ತಯಾರಿಸುತ್ತೇನೆನ್ನುವ ಸರಕಾರ ರಕ್ಷಣಾ ಇಲಾಖೆಯ ಆಕ್ಷೇಪವನ್ನೇ ಬದಿಗೊತ್ತಿದೆ!

\+ \+ \+

ಇವಲ್ಲದೆ ಅಂತರಿಕವಾಗಿ ತಮಗೆ 'ನೆರವು' ನೀಡಿದ ಎಸ್ಸಾರ್, ವಿಡಿಯೋ ಕೋನ್ ಇತ್ಯಾದಿ ಖಾಸಗೀ ಕಂಪನಿಗಳಿಗೂ ಕಾಂಟ್ರಾಕ್ಟ್‌ಗಳ ಸುಗ್ಗಿ.

ಸರಕಾರ ಈ ರೀತಿ ಅಮೆರಿಕಾವನ್ನು ಸಂತುಷ್ಟ ಗೊಳಿಸಲು ಆಕರ್ಷಕ ಕಾಂಟ್ರಾಕ್ಟ್‌ಗಳನ್ನು ಕೊಡುವುದಾದರೆ ಖಂಡಿತಾ ಅಮೆರಿಕಾ ಆರ್ಥಿಕ ನಿರ್ಬಂಧ ವನ್ನು ಒಂದು ವ್ಯಾಪಾರವಾಗಿಸಿ ಬಿಡುತ್ತದೆ ಎಂದು ಉದಾರೀಕರಣದ ಬೆಂಬಲಿಗ ಪತ್ರಕರ್ತರೊಬ್ಬರೂ ಗೊಣಗುವಂತಾಗಿದೆ. ಇವರಿಗೆ 'ದೇಶಭಕ್ತಿ' ಒಂದು ವ್ಯಾಪಾರ, ಅವರಿಗೆ 'ಆರ್ಥಿಕ ನಿರ್ಬಂಧ' ಒಂದು ವ್ಯಾಪಾರ - ಹೇಗಿದೆ ಈ ವ್ಯಾಪಾರೀ ಸಂಬಂಧಗಳು? ಅದಕ್ಕೇ ಅಲ್ಲವೇ ಕ್ಲಿಂಟನ್ ದನಿ ಬದಲಾಯಿಸಿದ್ದು - ಇದು ತಮ್ಮ ಗೆಲವು ಎಂದು ಬಿಜೆಪಿ ಆಳರಸರು ಸಾರುತ್ತಿರುವುದು!

\+ \+ \+

ಆದರೆ ನಿಜ ಸಂಗತಿ ಈ ಬಾರಿಯ ಬಜೆಟ್‌ನೊಂದಿಗೆ ಎಲ್ಲರ ಅರಿವಿಗೂ ಬರಲಿದೆ ಎಂಬ ಸಂಕೇತಗಳೂ ದೊರೆಯುತ್ತಿವೆ.

ಈ ಸರಕಾರ ಅಧಿಕಾರಕ್ಕೆ ಬಂದಂದಿನಿಂದ ಸರಕಾರೀ ಮುಖಂಡರು ಆರ್ಥಿಕರಂಗದಲ್ಲಿ 'ಕಠಿಣ ನಿರ್ಣಯ'ಗಳನ್ನು ಕೈಗೊಳ್ಳಲೇಬೇಕಾಗುತ್ತದೆ ಎಂದು ಒಂದು ಕಡೆ ಹೇಳುತ್ತಾ ಬಂದರೆ ಇನ್ನೊಂದು ಕಡೆ ಚೀಣ-ವಿರೋಧಿ ಅರಚಾಟಗಳು ಕೇಳಿಬಂದವು. ಈ ಅರಚಾಟ ಏಕೆ ಎಂದು ಈಗ ಗೊತ್ತಾಗಿದೆ. 'ಕಠಿಣ ನಿರ್ಣಯಗಳು' ಏನು ಎಂಬುದು ಜೂನ್ 1 ರಂದು ಪ್ರಕಟವಾಗಲಿವೆ. ವಿಮಾ ವಲಯದ, ವಿದ್ಯುತ್ ವಿತರಣೆ ಹಾಗೂ ಪೂರೈಕೆಯ ಖಾಸಗೀಕರಣ, ಗಣಿಗಾರಿಕೆಯನ್ನು ವಿದೇಶಿ ಕಂಪನಿಗಳಿಗೆ ವಹಿಸಿಕೊಡುವುದು ಇವೆಲ್ಲಾ ಬಿಜೆಪಿ ಸರಕಾರದ ತಕ್ಷಣದ ಅಜೆಂಡಾದಲ್ಲಿ ಇರಲಿಲ್ಲವಂತೆ. ಆದರೆ ಈಗ ಅವನ್ನು ಸೇರಿಸಲಾಗಿದೆ - ಪಾಶ್ಚಿಮಾತ್ಯ ಪ್ರಭುಗಳನ್ನು ಸಂತುಷ್ಟಗೊಳಿಸಲಿಕ್ಕಾಗಿ ಎಂದು ಬೇರೆ ಹೇಳಬೇಕಾಗಿಲ್ಲ.

ಅದೇರೀತಿ ಚಿದಂಬರಂರವರ ಕಪ್ಪು ಹಣವನ್ನು ಬಿಳಿಯಾಗಿಸುವ ಯೋಜನೆ ಯನ್ನು ಕೂಡಾ ಮತ್ತೆ ತರುವ ಯೋಜನೆ ಯಿದೆಯಂತೆ. ಹಿಂದೆ ಇದನ್ನು ವಿರೋಧಿಸಿದ್ದ ಮುಖಂಡರಿವರು! ಇವಕ್ಕೆಲ್ಲಾ ಜನಸಾಮಾನ್ಯರು ಮಾತ್ರವೇ ಬೆಲೆ ತೆರಬೇಕು - ತೆರಿಗೆಗಳ ಮೂಲಕ, ಬೆಲೆಯೇರಿಕೆಗಳ ಮೂಲಕ!

\+ \+ \+

ಈ ರೀತಿ ಪಾಶ್ಚಿಮಾತ್ಯ ಬಂಡವಾಳಗಳ ಎದುರು ಅಂಗಲಾಚಲು ಹಾಗೂ ಅದಕ್ಕಾಗಿ ದೇಶದ ಜನಸಾಮಾನ್ಯರ ಮೇಲೆ ಇನ್ನಷ್ಟು ಹೊರೆ ಹೇರಲೆಂದೇ ಈ ಅಣು ಸ್ಫೋಟ ನಡೆಸಲಾಯಿತೇ? ಈಗ ಜನಗಳಲ್ಲಿ ಏಳುವ ಸಹಜ ಸಂದೇಹ ಇದು. ವಾಸ್ತವವಾಗಿ ಈ ಸ್ಫೋಟಗಳು ಬಿಜೆಪಿ ಹಾಗೂ ಅಮೆರಿಕನ್ ಸರಕಾರಗಳ ಶಾಮೀಲಿನಿಂದ ನಡೆದ ಕಸರತ್ತು ಎಂಬ ಒಂದು ವಿಶ್ಲೇಷಣೆ ದಿಲ್ಲಿ, ವಾಶಿಂಗ್‌ಟನ್‌ಗಳ ಕೆಲವು ವಲಯಗಳಲ್ಲಿ ಪ್ರಚಲಿತದಲ್ಲಿದೆಯಂತೆ. (ಸಂಡೇ ಟೈಮ್ಸ್ ಆಫ್ ಇಂಡಿಯಾ, ಮೇ 17)

"ಒಂದು ಸಂದಿಗ್ಧ ಸನ್ನಿವೇಶವನ್ನು ಲಾಭದ ಸನ್ನಿವೇಶವಾಗಿ ಪರಿವರ್ತಿಸಲು ಒಂದು ವಿವರವಾದ ನಾಟಕ ರಚಿಸ ಲಾಯಿತು - ಇದು ಬಿಜೆಪಿ ಮತ್ತು ಕ್ಲಿಂಟನ್ ಇಬ್ಬರಿಗೂ ಸೂಕ್ತವಾದ ಅವರವರ ದೇಶಗಳಲ್ಲಿ ತಗ್ಗಿದ ಅವರ ಜನಪ್ರಿಯತೆ ಯನ್ನು ವಿಸ್ತರಿಸುವ ಒಂದು ಯೋಜನೆ' ಎಂದಿದೆ ಮೇಲೆ ಹೇಳಿದ ಸಂಡೇ ಟೈಮ್ಸ್‌ನ ಒಂದು ಲೇಖನ.

ಈ ಒಗಟಿನಂತೆ ಕಾಣುವ ಯೋಜನೆ ಹೀಗಿತ್ತಂತೆ - ರಕ್ಷಣಾ ಮಂತ್ರಿಗಳು ಪಾಕಿಸ್ತಾನವಲ್ಲ, ಚೀಣಾ ನಮ್ಮ ಪ್ರಧಾನ ಶತ್ರು ಎಂದು ಹೇಳಿಕೆಗಳನ್ನು ನೀಡುವುದು, ಚೀಣಾದಿಂದ ಅಪಾಯದ ನೆವದಲ್ಲಿ ಪರಮಾಣು ಪರೀಕ್ಷಣೆ ನಡೆಸುವುದು, ಅಮೆರಿಕಾ 'ತನ್ನ' ಕಾನೂನಿನಂತೆ ನಿರ್ಬಂಧ ಹಾಕುವುದು - ಇದಕ್ಕೆ ವ್ಯಕ್ತಗೊಳ್ಳುವ ಸಿಟ್ಟು ಹಾಗೂ ದುರಭಿಮಾನದ ಭಾವೋದ್ರೇಕದ ವಾತಾವರಣದಲ್ಲಿ ಬಿಜೆಪಿ ಸರಕಾರ ಸಿಟಿಬಿಟಿಗೆ ಸಹಿ ಮಾಡುವುದು - ಇದು ಮೊದಲ ಹೆಜ್ಜೆ.

ಎರಡನೇ ಹೆಜ್ಜೆ : ಸಿಟಿಬಿಟಿಗೆ ಸಹಿ ಮಾಡಿ ಅಮೆರಿಕಾದ ಚೀಣಾ ನಿಲುವನ್ನು ಭಾರತ ಅಂಗೀಕರಿಸಿದ ನಂತರ ಭಾರತದ ಆರ್ಥಿಕ ಹಿತಾಸಕ್ತಿಗಳನ್ನು ಅಮೆರಿಕಾ ನೋಡಿಕೊಳ್ಳುವುದು.


ಇದರಿಂದ ಕ್ಲಿಂಟನ್‌ಗೆ ಎರಡು ಪ್ರಯೋಜನಗಳು - ಚೀಣಾ ಒಂದು ಪ್ರಮುಖ ಜಾಗತಿಕ ಶಕ್ತಿಯಾಗಿ ಬೆಳೆದು ಬರುವುದನ್ನು ಹಾಗೂ ಭಾರತ - ಚೀಣಾ ಮೈತ್ರಿ ಬೆಳೆದು ತನಗೆ ಮಾರಕವಾಗುವುದನ್ನು ತಪ್ಪಿಸುವುದು, ಎರಡು ಭಾರತ ಸಿಟಿಬಿಟಿಗೆ ಸಹಿ ಹಾಕುವಂತೆ ಮಾಡಿದೆ ಎಂದು ಹೇಳಿಕೊಳ್ಳುವುದು.

'ನಾವು ನಮ್ಮ ಬೆನ್ನು ತಟ್ಟಿಕೊಳ್ಳುವ ಮೊದಲು ಇಡೀ ಪಿತೂರಿ ಎರಡು ಇಕ್ಕಟ್ಟಿಗೆ ಸಿಲುಕಿದ ಸರಕಾರಗಳನ್ನು ಉಳಿಸಲು ಸಂಪೂರ್ಣವಾಗಿ ಮೊದಲೇ ಯೋಜಿಸಿದ ಪಿತೂರಿಯೇ ಎಂದು ಕಂಡು ಹಿಡಿಯೋಣ" ಎಂದು ಈ ಲೇಖನ ಕೊನೆಗೊಳ್ಳುತ್ತದೆ.

\+ \+ \+

ಹಿಂದೂ ಮಹಾಸಾಗರದಲ್ಲಿ ಡಿಗೋಗಾರ್ಸಿಯಾದ ತನ್ನ ನೆಲೆಯಲ್ಲಿ ಭಾರತದತ್ತ ಪರಮಾಣು ಶಸ್ತ್ರಾಸ್ತ್ರಗಳನ್ನು ಗುರಿಯಿಟ್ಟ ಅಮೆರಿಕವನ್ನು ಶತ್ರುವೆಂದೇ ಬಗೆಯದೆ, ಅದರ ಬಯಕೆಯಂತೆ ಚೀಣಾವನ್ನು ನಮ್ಮ ಪ್ರಧಾನ ಶತ್ರುವೆಂದು ಸಾರುವ ಸರಕಾರದ ನಿಲುವು ಹಾಗೂ ನಂತರ ಮುಖ್ಯವಾಗಿ ಆರ್ಥಿಕ ರಂಗದಲ್ಲಿನ ಬೆಳವಣಿಗೆಗಳನ್ನು ನೋಡಿದರೆ ಈ ವಿಶ್ಲೇಷಣೆ ಹುರುಳಿಲ್ಲದ್ದು ಎಂದು ತಳ್ಳಿ ಹಾಕುವಂತಿಲ್ಲ, ಅಲ್ಲವೇ?

ಬಾಂಬು ಬೇಡ, ಅನ್ನ ಕೊಡಿ! ಗೋರಿಯಲ್ಲ ಮನೆ ಕೊಡಿ - ನವದೆಹಲಿಯಲ್ಲಿ ಪರಮಾಣು ಶಸ್ತ್ರಾಸ್ತ್ರೀಕರಣದ ವಿರುದ್ಧ ಒಂದು ಮತಪ್ರದರ್ಶನ



ಹೋರಾಟದ ದೀವಿಗೆಯನ್ನು ತಲುಪಿಸುವ ಕೃತಿ

ವಿಠ್ಠಲ್

ಸಮತೆಯ ನಾಡಿನ ಉದಯಕ್ಕಾಗಿ
ಲೇ. ಹರ್ಕಿಷನ್ ಸಿಂಗ್ ಸುರ್ಜಿತ್
ಬೆಲೆ 25 ರೂ.
ಪ್ರಕಾಶನ : ಕ್ರಿಯಾ, ಗಾಂಧಿನಗರ, ಬೆಂಗಳೂರು

ಹೆಸರೇ ಸೂಚಿಸುವಂತೆ ಇದು ಅಸಮಾನತೆಯ ನಾಡಿನಲ್ಲಿ ಹುಟ್ಟಿಕೊಂಡ ಪುಸ್ತಕ. ನಾಡಿನಲ್ಲಿ ನೆಲೆನಿಂತ ಅಸಮಾನತೆ ಶಾಶ್ವತ ಆದದ್ದಲ್ಲ ಎನ್ನುವುದನ್ನು ತಾತ್ವಿಕವಾಗಿ ನಿರೂಪಿಸುತ್ತಾ, ಇಂಥ ಅಸಮಾನತೆಯ ಬೇರುಗಳನ್ನು ತೊಡೆದು ಹಾಕಿ ಹೊಸ ಬದುಕಿನ ಉದಯವನ್ನು ಕಾಣಲು ಬೇಕಾದ ದಾರಿಯನ್ನು ತೆರೆದಿಡುತ್ತದೆ.

ಈವರೆಗೆ ನಡೆದ ಕ್ರಾಂತಿಕಾರಿ ಪಯಣ, ಕಂಡ ಕಾಡು, ಪಟ್ಟ ನೋವು, ತೊಟ್ಟ ಛಲ, ಇಟ್ಟ ವಿಶ್ವಾಸಗಳ ದೀರ್ಘ ವಿವರಣೆಗಳನ್ನು ಈ ಪುಸ್ತಕ ಓದುಗರೊಡನೆ ಹಂಚಿಕೊಳ್ಳುತ್ತದೆ ಮತ್ತು ಈವರೆಗೆ ಹೊತ್ತುತಂದ ಹೋರಾಟದ ದೀವಿಗೆಯನ್ನು ಮುಂದಿನ ಕೈಗೆ ತಲುಪಿಸುವ ಮಹತ್ವದ ಉದ್ದೇಶ ಇದಕ್ಕಿದೆ.

ಹೌದು, ಮಾರ್ಕ್ಸ್‌ವಾದ-ಲೆನಿನ್‌ವಾದದ ಭದ್ರ ಬುನಾದಿಯ ಮೇಲೆ ತನ್ನ ಸೈದ್ಧಾಂತಿಕ ಚೌಕಟ್ಟನ್ನು ರೂಪಿಸಿಕೊಂಡು ಭಾರತದ ವಿಮೋಚನೆಯ ಕನಸನ್ನು ನನಸಾಗಿಸುವ ಅಂದರೆ ಸಮತಾವಾದಿ ದೇಶವನ್ನು ಕಟ್ಟುವ ಮಹತ್ವದ ಕಾರ್ಯದಲ್ಲಿ ತೊಡಗಿದ ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಬೆಳೆದುಬಂದ ರೀತಿಯನ್ನು ಈ ಪುಸ್ತಕದಲ್ಲಿ ಪಕ್ಷದ ಮಹಾಕಾರ್ಯದರ್ಶಿ ಕಾಂ|| ಹರ್ಕಿಷನ್ ಸಿಂಗ್ ಸುರ್ಜಿತ್ ದಾಖಲಿಸಿದ್ದಾರೆ.

ಇದರಲ್ಲಿ ಸ್ವಾತಂತ್ರ್ಯ ಚಳುವಳಿ ಮತ್ತು ಅನಂತರದ ಭಾರತದ ಬದುಕಿನಲ್ಲಿ ಕಮ್ಯುನಿಸ್ಟ್ ಪಕ್ಷ ವಹಿಸಿದ ಮಹತ್ವದ ಪಾತ್ರದ ಬಗ್ಗೆ ವಿವರವಾದ ಚರ್ಚೆ ಮತ್ತು ಇದರೊಂದಿಗೆ ಈವರೆಗಿನ ಭಾರತದ ರಾಜಕೀಯ - ಆರ್ಥಿಕ-ಸಾಮಾಜಿಕ ಸಂಘರ್ಷ ಮತ್ತು ಸಂಕ್ಲಿಷ್ಟತೆಯನ್ನು ದಾಖಲೆಯೊಂದಿಗೆ ವಿವರಿಸುತ್ತದೆ. ಹಾಗಾಗಿ ಇದು ಒಂದು ರೀತಿಯಲ್ಲಿ ಶತಮಾನದ ಭಾರತದ ಇತಿಹಾಸದ ಏಳುಬೀಳುಗಳ ಸೈದ್ಧಾಂತಿಕ ಅಧ್ಯಯನ ಕೂಡ ಹೌದು.

ಅಕ್ಟೋಬರ್ ಕ್ರಾಂತಿ ಜಗತ್ತಿನ ಇತಿಹಾಸದಲ್ಲಿ ಒಂದು ಮಹತ್ವದ ಘಟನೆ. ಇದರಿಂದ ಪ್ರಭಾವಿತಗೊಂಡು ಭಾರತದಲ್ಲಿ ಸಮತಾವಾದಿ ಸಿದ್ಧಾಂತಗಳು ಅಭಿವೃದ್ಧಿ ಹೊಂದಿದವು. 1920 ರಲ್ಲಿ ಅಕ್ಟೋಬರ್‌ನಲ್ಲಿ ತಾಷ್ಕೆಂಟಿನಲ್ಲಿ ಜನ್ಮತಾಳಿದ ಕಮ್ಯುನಿಸ್ಟ್ ಪಕ್ಷ ಪ್ರಾರಂಭದಲ್ಲಿ 10 ಸದಸ್ಯರಿಗಿಂತ ಹೆಚ್ಚಿರಲಿಲ್ಲ. ಆದರೆ 75 ವರ್ಷಗಳ ನಂತರ ಅದು ದೇಶದ ಒಂದು ರಾಜಕೀಯ ಶಕ್ತಿಯಾಗಿ ದುಡಿಯುವ ಜನರ ಪರವಾಗಿ ದನಿ ಎತ್ತುವ ಪ್ರಧಾನ ರಾಜಕೀಯ ಶಕ್ತಿಯಾಗಿ ಬೆಳೆದಿದೆ. ಭಾರತದ ರಾಜಕಾರಣದಲ್ಲಿ ಕಮ್ಯುನಿಸ್ಟ್ ಪಕ್ಷಕ್ಕೊಂದು ಮಹತ್ವದ ಸ್ಥಾನವಿದೆ. ಈ ಸ್ಥಾನ-ಮಾನದ ಹಿಂದೆ ಒಂದು ದೀರ್ಘವಾದ ಇತಿಹಾಸವೇ ಇದೆ. ಇದನ್ನು ಈ ಪುಸ್ತಕ ವಿವರಿಸುತ್ತದೆ.

21 ಅಧ್ಯಾಯಗಳ ಈ ಪುಸ್ತಕದಲ್ಲಿ ಮೊಘಲ್ ಶಾಹಿ ಭಾರತ, ಭಾರತದಲ್ಲಿ ಬ್ರಿಟಿಶ್ ಸಾಮ್ರಾಜ್ಯಶಾಹಿ ನೆಲೆ, ಸ್ವಾತಂತ್ರ್ಯ ಹೋರಾಟ, ಕ್ರಾಂತಿಕಾರಿ ವಿಚಾರ ಧಾರೆಯ ಪ್ರವೇಶ, ತೀವ್ರಗಾಮಿ ಚಟುವಟಿಕೆ, ಕಮ್ಯುನಿಸ್ಟ್ ಸಿದ್ಧಾಂತದ ಕಡೆಗೆ ಕ್ರಾಂತಿಕಾರಿಗಳ ಒಲವು, ರಷ್ಯಾದ ಸಂಪರ್ಕ ಸಿಪಿಐ(ಭಾರತ ಕಮ್ಯುನಿಸ್ಟ್ ಪಕ್ಷ) ಸ್ಥಾಪನೆ, ರೈತ ಕಾರ್ಮಿಕರ ಸಂಘಟನೆ, ಕೈಗಾರಿಕಾ ಮುಷ್ಕರ, ಸಮಾಜವಾದಿಗಳೊಂದಿಗೆ ಅಭಿಪ್ರಾಯ ಭೇಧ, ಸಾಮ್ರಾಜ್ಯಶಾಹಿ-ಪಾಳೇಗಾರಿ ವಿರೋಧಿ ಚಟುವಟಿಕೆ, ಪಕ್ಷದ ನಿಷೇಧ, ಹಲವು ಪಿತೂರಿಗಳು, ಕ್ರಾಂತಿಕಾರಿಗಳ ಸಾವು, ಸ್ವಾತಂತ್ರ್ಯ-ಅಧಿಕಾರದ ಹಸ್ತಾಂತರ, ದೇಶದ ಸಮಸ್ಯೆ ಗುರುತಿಸದ ನೆಹರು ಸರ್ಕಾರ, ಅಂತರ್‌ರಾಷ್ಟ್ರೀಯ ಕಮ್ಯುನಿಸ್ಟ್ ಬೆಳವಣಿಗೆ, ಅಂತರ್‌ರಾಷ್ಟ್ರೀಯ ಸಮ್ಮೇಳನ, ಕಾಂಗ್ರೆಸ್‌ನ ಪಾಳೇಗಾರಿ ಪರ ನೀತಿಯ ವಿರೋಧ, ರಷ್ಯಾ ಮತ್ತು ಚೀನಾಗಳೊಂದಿಗೆ ಅಭಿಪ್ರಾಯ ಭೇದ, ಕಮ್ಯುನಿಸ್ಟ್ ಪಕ್ಷದಲ್ಲಿ ವರ್ಗ ಸಂಘರ್ಷ ಮತ್ತು ವರ್ಗಶಾಮೀಲಿನ ಪ್ರಶ್ನೆ, ಸಿಪಿಐನಿಂದ ಸಿಪಿಐ(ಎಂ) ನ ಉದಯ, ಅಂತರರಾಷ್ಟ್ರೀಯ ಕಮ್ಯುನಿಸ್ಟ್ ಸಂಘಟನೆಯೊಂದಿಗೆ ಸಂಪರ್ಕ, ರಾಷ್ಟ್ರದ ಅಭಿವೃದ್ಧಿಗೆ ವಿಭಿನ್ನ ಕಾರ್ಯಸೂಚಿ ಮಂಡನೆ, ಬಂಡವಾಳಶಾಹಿ ಪಕ್ಷಗಳೊಂದಿಗೆ ಸಂಘರ್ಷ, ರಾಜಕೀಯ ಆರ್ಥಿಕ ಬೆಳವಣಿಗೆಯ ಬಗ್ಗೆ ಕರಾರುವಾಕ್ಕಿನ ಅಂದಾಜು, ವಿವಿಧ ಪ್ರದೇಶಗಳಲ್ಲಿ ಕಮ್ಯುನಿಸ್ಟ್ ಪಕ್ಷದ ಹಿನ್ನಡೆ-ಮುನ್ನಡೆ, ತ್ರಿಪುರಾ-ಕೇರಳ-ಪಶ್ಚಿಮ ಬಂಗಾಳದಲ್ಲಿ ಪಕ್ಷದ ಹೋರಾಟ, ಅಧಿಕಾರ ಸ್ಥಾಪನೆ, ಕೇಂದ್ರ ಸರ್ಕಾರದ ಸ್ಥಾಪನೆಯಲ್ಲೂ ಮಹತ್ವದ ಪಾತ್ರ - ಕೋಮುವಾದಿ ಬೆಳವಣಿಗೆ ಮುಂದಿನ ಸವಾಲು ಹೀಗೆ ವಿವಿಧ ವಿಷಯಗಳ ಸೂಕ್ಷ್ಮ ಅಧ್ಯಯನ ಮತ್ತು ವಿಮರ್ಶೆಯನ್ನು ಸುರ್ಜಿತ್ ಅವರು ಮಾಡಿದ್ದಾರೆ.

ರಾಷ್ಟ್ರೀಯ ಪತ್ರಿಕೆ-ಸಮೂಹ ಮಾಧ್ಯಮಗಳು ಕಮ್ಯುನಿಸ್ಟರ ಹೋರಾಟವನ್ನು ಮರೆ ಮಾಚುವ ಮತ್ತು ಜನಸಾಮಾನ್ಯರಲ್ಲಿ ತಪ್ಪು ಅಭಿಪ್ರಾಯ ಮೂಡಿಸಲು ಪ್ರಯತ್ನಿಸುತ್ತಿರುವ ಸಂದರ್ಭದಲ್ಲಿ ಈ ಪುಸ್ತಕ ಸತ್ಯದ ಅನಾವರಣ ಮಾಡಿಕೊಡುತ್ತದೆ. ಹಾಗೆ ಹೇಳಿದರೆ ಕಮ್ಯುನಿಸ್ಟ್ ಪಕ್ಷದ ಹೊಗಳಿಕೆ ಮಾತ್ರ ಇಲ್ಲಿ ತುಂಬಿದೆ ಎಂದು ಭಾವಿಸಬೇಕಾಗಿಲ್ಲ. ಪ್ರತಿಯೊಂದು ಅಧಿವೇಶನವೂ ಅಂಗೀಕರಿಸಿದ ದಸ್ತಾವೇಜಿನ ಹಿನ್ನೆಲೆಯಲ್ಲಿ ಚರ್ಚಿಸುವ ಸುರ್ಜಿತ್ ಪಕ್ಷ ಮಾಡಿದ ತಪ್ಪು ಅಂದಾಜುಗಳನ್ನು ಮರೆ ಮಾಚುವುದಿಲ್ಲ. ಪಕ್ಷ ತೆಗೆದುಕೊಂಡ ತಪ್ಪು ನಿರ್ಣಯಗಳ ದೀರ್ಘ ವಿಶ್ಲೇಷಣೆ ನಡೆಸಿ ಅದು ಹೇಗೆ ಪಕ್ಷದ ಹಿನ್ನಡೆಗೆ ಕಾರಣ ಆಯಿತು ಎನ್ನುವುದನ್ನು ದಾಖಲಿಸುತ್ತಾರೆ. ಮತ್ತು ಸರಿಯಾದ ನಿರ್ಣಯಗಳ ಹಿಂದು - ಮುಂದುಗಳನ್ನು ಕೂಡಾ ವಿವರಿಸುತ್ತಾರೆ.

ಹಾಗಾಗಿ ಇದು ಕಮ್ಯುನಿಸ್ಟ್ ಪಕ್ಷ ಏಳೂವರೆ ದಶಕದಲ್ಲಿ ಕಂಡ-ಉಂಡ ಬೀಳು-ಏಳುಗಳ ಒಂದು ಅಧ್ಯಯನ ಎನ್ನಬಹುದು.

ಜಾಗತಿಕ ಸಮಾಜವಾದಿ ಶಕ್ತಿಗಳು ಮತ್ತು ಸಾಮ್ರಾಜ್ಯ ಶಾಹಿ ನಡುವಿನ ವೈರುಧ್ಯ ಸಾಮ್ರಾಜ್ಯಶಾಹಿ ಮತ್ತು - ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಜನತೆಯ ನಡುವಿನ ವೈರುಧ್ಯ, ಸ್ವತಃ ಪರಸ್ಪರ ಸಾಮ್ರಾಜ್ಯಶಾಹಿಗಳ ನಡುವಿನ ವೈರುಧ್ಯ ಮತ್ತು ಬಂಡವಾಳಶಾಹಿ ದೇಶಗಳ ಬಂಡವಾಳ ಮತ್ತು ಶ್ರಮದ ನಡುವಣ ವೈರುಧ್ಯ-ಈ ನಾಲ್ಕು ವೈರುಧ್ಯಗಳ ಅಧ್ಯಯನ ಮಾಡುವುದರಿಂದ ಮಾತ್ರವೇ ಜಗತ್ತಿನ ವಿದ್ಯಮಾನಗಳನ್ನು ಅರ್ಥಮಾಡಿಕೊಳ್ಳಬಹುದೆಂದು ನಂಬಿರುವ ಸಿಪಿಐ(ಎಂ) ಜನತಾ ಪ್ರಜಾಪ್ರಭುತ್ವದ ಸ್ಥಾಪನೆ ಮತ್ತು ಸಾಮ್ರಾಜ್ಯಶಾಹಿ-ವಿರೋಧಿ, ಪಾಳೇಗಾರಿ-ವಿರೋಧಿ, ಏಕಸ್ವಾಮ್ಯ ಬಂಡವಾಳ-ವಿರೋಧಿ ಗುರಿಯನ್ನು ಪೂರ್ಣಗೊಳಿಸಿದ ನಂತರವಷ್ಟೇ ಭಾರತದ ಜನತೆ ಸಮಾಜವಾದದತ್ತ ಮುನ್ನಡೆಯಬಹುದು ಎನ್ನುವುದನ್ನು ಇಲ್ಲಿ ನಿರೂಪಿಸುತ್ತಾರೆ.

ಈ ಪಕ್ಷಕ್ಕೊಂದು ಶ್ರೀಮಂತ ಇತಿಹಾಸವಿದೆ. ಸೈದ್ಧಾಂತಿಕ ಬದ್ಧತೆ ಇದೆ ಎಂದು ತಿಳಿಯದೆ ಪೂರ್ವಾಗ್ರಹ ಪೀಡಿತರಾಗಿ ಯೋಚಿಸುವ ಅಲ್ಪಮತಿಗಳಿಗೂ ಬಂಡವಾಳಶಾಹಿ ಪಕ್ಷಗಳಿಗೂ ಮತ್ತು ಎಡ ಪಕ್ಷಗಳಿಗೂ ನಡುವಿನ ವ್ಯತ್ಯಾಸ ಅರ್ಥವಾಗದ ಅಜ್ಞಾನಿಗಳಿಗೂ ಈ ಪುಸ್ತಕ ನಿಸ್ಸಂಶಯವಾಗಿ ಮತಿಯನ್ನು,ಜ್ಞಾನವನ್ನು ಕೊಡುತ್ತದೆ. ಈ ಪಕ್ಷದ ಸಿದ್ಧಾಂತವನ್ನು ಒಪ್ಪಿ ಪಕ್ಷ ಬೆಳೆಸುವವರೊಂದಿಗೆ ಮುನ್ನುಗ್ಗುತ್ತಿರುವ ಕ್ರಾಂತಿಕಾರಿ ಪಕ್ಷದ ಸದಸ್ಯ, ಕಾರ್ಯಕರ್ತರಿಗೆ, ಹಿತೈಷಿಗಳಿಗೆ ಇದೊಂದು ಕೈಪಿಡಿ ಆಗಿದೆ. ಹೀಗೆ ಪ್ರತಿಯೊಬ್ಬರೂ ಓದಲೇಬೇಕಾದ ಇಂಥ ಪುಸ್ತಕ ಬರೆದ ಕಾಂ|| ಸುರ್ಜಿತ್ ಮತ್ತು ಕನ್ನಡಿಸಿ ಪ್ರಕಟಿಸಿದ 'ಐಕ್ಯರಂಗ' ಮತ್ತು ಕ್ರಿಯಾ ಅಭಿನಂದನಾರ್ಹ.

ಕರ್ನಾಟಕದಲ್ಲಿ ಕಳೆದವಾರ

ಮೇ 15, 1998

- ರಾಜ್ಯದಲ್ಲಿ ಡೀಸೆಲ್‌ಬೆಲೆಯಲ್ಲಿ 50 ಪೈಸೆ ಇಳಿಕೆ
- ನಿವೃತ್ತಿ ವಯಸ್ಸು ಏರಿಕೆಗೆ ಮುಖ್ಯಮಂತ್ರಿಗಳ ವಿರೋಧ
- ಅಣು ಪರೀಕ್ಷೆಯ ಹಿನ್ನೆಲೆಯಲ್ಲಿ ಏರ್ಪಡಿಸಲಾಗಿದ್ದ ಪ್ರಧಾನಿ ಬೆಂಗಳೂರು ಭೇಟಿ ರದ್ದು - 'ಅನಿವಾರ್ಯ ಕಾರಣಗಳಿಂದ' ಎಂದು ಬಿಜೆಪಿ ಮುಖಂಡರು.

ಮೇ 16, 1998

- ಕೊಡಗು ಜಿಲ್ಲೆಯ ರಕ್ಷಿತ ಅರಣ್ಯ ಪ್ರದೇಶದಲ್ಲಿ ಲೂಟಿಯ ಬಗ್ಗೆ ಉನ್ನತಾಧಿಕಾರಿಯಿಂದ ವಿಚಾರಣೆ ನಡೆಸುವುದಾಗಿ, ತಪ್ಪಿತಸ್ಥರಿಂದ 1.78 ಕೋಟಿ ರೂ. ವಸೂಲು ಮಾಡುವುದಾಗಿ ಅರಣ್ಯ ಸಚಿವರು.
- ಭದ್ರಾ ನಾಲೆ ದುರಸ್ತಿಗೆ 100 ಕೋಟಿ ರೂ.ಗಳ ಯೋಜನೆಗೆ ತಾಂತ್ರಿಕ ಸಮಿತಿ ಒಪ್ಪಿಗೆ ನೀಡಿರುವುದಾಗಿ ಭಾರಿ ನೀರಾವರಿ ಸಚಿವರು.

ಮೇ 17, 1998

- ರಾಜ್ಯ ಸರಕಾರದ ಕೆಲವು ಇಲಾಖೆಗಳಲ್ಲಿ ಹಣಕಾಸು ಅಶಿಸ್ತು ಬಗ್ಗೆ ಕೇಂದ್ರದ ಪ್ರಧಾನ ಲೆಕ್ಕ-ಪರಿಶೋಧನಾಧಿಕಾರಿ(ಸಿ.ಎ.ಜಿ) ವರದಿ ಬೆಳಕು ಚೆಲ್ಲಿರುವುದಾಗಿ ವರದಿ.
- ಎಲ್ಲಾ ಮೂಲೆಗಳಿಂದ ಸತತವಾಗಿ ಕಾಲನ್ನು ಎಳೆಯುತ್ತಿರುವುದರಿಂದ ಜನತೆ ನಿರೀಕ್ಷಿಸಿದ ಮಟ್ಟಕ್ಕೆ ಆಡಳಿತ ಸಾಧ್ಯವಾಗುತ್ತಿಲ್ಲ ಎಂದು ಮುಖ್ಯಮಂತ್ರಿಗಳು.

ಮೇ 18, 1998

- ರಾಜ್ಯಾದ್ಯಂತ ಭೂ ಮರುಮಾಪನ ನಡೆಸಲು ಸರ್ಕಾರ ನಿರ್ಧರಿಸಿವುದಾಗಿ ಕಂದಾಯ ಸಚಿವರು. ಇದಕ್ಕೆ 500 ಕೋಟಿ ರೂ. ಅಂದಾಜು ವೆಚ್ಚದ ಯೋಜನೆ.
- ಕೆಪಿಎಸ್‌ಸಿ ಪರೀಕ್ಷೆಯಲ್ಲಿ ಬೆಂಗಳೂರು ಉತ್ತರ ಜಿಲ್ಲೆಯ ಪದವಿಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರ ಅವ್ಯವಹಾರ ಮೇಲ್ನೋಟಕ್ಕೆ ಸಾಬೀತಾಗಿರುವುದರಿಂದ ಅಮಾನತು.

ಮೇ 19, 1998

- ಅಣ್ವಸ್ತ್ರ ಸಾಧನ ಪರೀಕ್ಷಣೆಯನ್ನು ಖಂಡಿಸಲೆಂದು ಬೆಂಗಳೂರಿನಲ್ಲಿ ಸೇರಿದ್ದ ಬುದ್ಧಿಜೀವಿಗಳ, ಚಿಂತಕರ ಸಭೆಗೆ 'ಹಿಂದೂ ಜಾಗರಣಾ ವೇದಿಕೆ'ಯ ಸದಸ್ಯರ ಅಡ್ಡಿ.
- ಬೆಂಗಳೂರು ವಿಶ್ವವಿದ್ಯಾಲಯ ವಿಭಾಗಗಳಿಗೆ ಶೈಕ್ಷಣಿಕ ಸ್ವಾಯತ್ತತೆ ನೀಡುವುದಾಗಿ ಕುಲಪತಿಗಳು.

ಮೇ 20, 1998

- ಜೂನ್ 3 ರ 'ಉಪ ಚುನಾವಣೆಯಲ್ಲಿ 7 ಸ್ಥಾನಗಳಲ್ಲಿ 41 ಅಭ್ಯರ್ಥಿಗಳು, ಹುಣಸೂರಿನಲ್ಲಿ ಲೋಕಶಕ್ತಿ-ಬಿಜೆಪಿ ಮೈತ್ರಿ ಭಂಗ.

ಮೇ 21, 1998

- ನನೆಗುದಿಗೆ ಬಿದ್ದಿರುವ ತಮ್ಮ ಬೇಡಿಕೆಗಳ ಒತ್ತಾಯಕ್ಕಾಗಿ ಪದವಿ ಪೂರ್ವ ಶಿಕ್ಷಣ ಇಲಾಖೆಯ ಬೋಧಕೇತರ ಸಿಬ್ಬಂದಿಯ ಪ್ರತಿಭಟನೆ - ಇಲಾಖೆ ನಿರ್ದೇಶಕರ ಕಚೇರಿಯೆದುರು.

ಮತ್ತೆ ಕತ್ತಲೆಯ ಕಂದರಕ್ಕೆ ಮಹಿಳೆಯರನ್ನು ನೂಕುತ್ತಿದೆ ಕೇಂದ್ರದ ಬಿಜೆಪಿ ಸರ್ಕಾರ - ಸುಭಾಷಿಣಿ ಆಲಿ

ಕೇಂದ್ರದಲ್ಲಿ ಅಧಿಕಾರ ಗ್ರಹಣ ಮಾಡಿರುವ ಬಿಜೆಪಿ ನೇತೃತ್ವದ ಸಮಿಶ್ರ ಸರ್ಕಾರವು ತನ್ನ ಅಲ್ಪಾವಧಿ ಕಾಲದಲ್ಲಿಯೇ ಎಲ್ಲಾ ಮಗ್ಗಲುಗಳಲ್ಲಿಯೂ ಮಹಿಳಾ ವಿರೋಧಿ ನಿಲುವನ್ನು ಕೈಗೊಂಡಿದ್ದು ಭಾರತೀಯ ಮಹಿಳೆಯರನ್ನು ಮತ್ತೆ ಕತ್ತಲೆಯ ಕಂದರಕ್ಕೆ ನೂಕಲು ಹೊರಟಿದೆ ಎಂದು ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯ ಸಹಕಾರ್ಯದರ್ಶಿ ಮಾಜಿ ಸಂಸದೆ ಸುಭಾಷಿಣಿ ಆಲಿ ಬೆಂಗಳೂರಿನಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಚುನಾವಣೆಯ ಮುಂಚೆ ತನ್ನ ಪ್ರಣಾಳಿಕೆಯಲ್ಲಿ ಶಾಸನ ಸಭೆಗಳಲ್ಲಿ ಶೇ 33% ಮೀಸಲಾತಿ ಮಸೂದೆಯನ್ನು ಸಂಸತ್ತಿನ ಮೊದಲ ಅಧಿವೇಶನದಲ್ಲಿ ಮಂಡಿಸುವುದಾಗಿ ಘೋಷಿಸಿ ನಂತರ ವಾಜಪೇಯಿ ನೇತೃತ್ವದ ಬಿಜೆಪಿ ಸರ್ಕಾರವು ಈಗ ಬೇರೆಯದೊಂದು ಮಾತು ಶುರು ಮಾಡಿದೆ. ಮಸೂದೆ ಮಂಡನೆಗೆ ಮೊದಲು ಸರ್ವಪಕ್ಷಗಳ ಸಭೆ ಕರೆದು ಚರ್ಚಿಸಿ ನಂತರ ಸಂಸತ್ತಿನಲ್ಲಿ ಮಂಡಿಸುವುದಾಗಿ ಹೇಳುವುದರ ಮುಖಾಂತರ ತನ್ನ ದ್ವಿಮುಖ ನೀತಿ ಹಾಗೂ ಮಹಿಳಾ ಪರವಾದ ತನ್ನ ಕೃತಕ ಕಾಳಜಿಯನ್ನು ಮತ್ತೊಮ್ಮೆ ಪ್ರದರ್ಶಿಸಿದೆ ಎಂದರು.

ರಾಜಸ್ತಾನ, ಉತ್ತರ ಪ್ರದೇಶ, ದೆಹಲಿ ಹಾಗೂ ಹರ್ಯಾಣದ ಬಿಜೆಪಿ ಸರ್ಕಾರಗಳು ಮಹಿಳೆಯರ ಬೇಡಿಕೆ ಹಾಗೂ ಹಕ್ಕುಗಳನ್ನು ಬರ್ಬರವಾಗಿ ಹತ್ತಿಕ್ಕುವತ್ತ ಹೊರಟಿವೆ ಎಂದ ಸುಭಾಷಿಣಿಯವರು ರಾಜಸ್ತಾನದ 'ಜೆ.ಸಿ.ಬೋಸ್ ಸಾಮೂಹಿಕ ಅತ್ಯಾಚಾರ ಪ್ರಕರಣ'ದಲ್ಲಿ ರಾಜ್ಯ ಸರ್ಕಾರ ನಿಷ್ಕ್ರಿಯಗೊಳ್ಳುವ ಮೂಲಕ, ಬಾಲಕಿಯ ಮೇಲೆ ನಡೆದ ಅತ್ಯಾಚಾರವನ್ನು ಪ್ರತಿಭಟಿಸುತ್ತಿದ್ದ ಜನರನ್ನು ಗುಂಡಿಟ್ಟು ಕೊಲ್ಲುವ ಮುಖಾಂತರ, ದಲಿತ ಮಹಿಳೆಯರ ಅತ್ಯಾಚಾರ ಹಾಗೂ ಸಾವಿನ ಪ್ರಕರಣ ಕುರಿತು ದೂರು ದಾಖಲಿಸಲು ಒತ್ತಾಯಿಸುತ್ತಿದ್ದ ಜನರನ್ನು ಗುಂಡಿಟ್ಟು ಕೊಂದ ಪೋಲೀಸರಿಗೆ ಮತ್ತೆ ಕೆಲಸ ನೀಡುವ ಮೂಲಕ, ಲಕ್ನೋದಲ್ಲಿ ಸಂಪುಟ ದರ್ಜೆಯ ಸಚಿವರೊಬ್ಬರು ಅರವತ್ತೈದು ವರ್ಷದ ತನ್ನ ಹಿಂದಿನ ಬಾಡಿಗೆದಾರರಾದ ವಿಧವೆಯನ್ನು ಶಾಸಕರ ಕೊಠಡಿಯಲ್ಲಿ ಕೂಡಿ ಹಾಕಿದರೂ ಯಾವ ಕ್ರಮ ಕೈಗೊಳ್ಳದ ಉತ್ತರ ಪ್ರದೇಶ ಸರ್ಕಾರ, ದೆಹಲಿಯ ನರ್ಸ್‌ಗಳ ಮುಷ್ಕರ ಹತ್ತಿಕ್ಕಲು 'ಎಸ್ಮಾ'ದಂತಹ ಕಾಯಿದೆ ಜಾರಿಗೆ ತರಹೊರಟ ಕೇಂದ್ರ ಸರ್ಕಾರ - ಹೀಗೆ ಬಿಜೆಪಿ ಸರ್ಕಾರಗಳು ಮಹಿಳೆಯರ, ಅಲ್ಪಸಂಖ್ಯಾತರ ಮೇಲಿನ ದೌರ್ಜನ್ಯಗಳಿಗೆ ಉತ್ತೇಜಿತವಾಗಿದೆ ಎಂದರು.

ಹೆಚ್ಚುತ್ತಿರುವ ನಿರುದ್ಯೋಗ, ಉದಾರ ಆರ್ಥಿಕ ನೀತಿಯಿಂದಾಗಿ ಅವಶ್ಯಕ ವಸ್ತುಗಳ ಬೆಲೆಯೇರಿಕೆಯಿಂದ ಗ್ರಾಮೀಣ ಹಾಗೂ ಬಡಜನತೆ ಅದರಲ್ಲಿಯೂ ರೈತರ ಆತ್ಮಹತ್ಯೆಯಿಂದ ವಿಧವೆ ಮಹಿಳೆಯರು ಕುಟುಂಬದ ಜವಾಬ್ದಾರಿ ಹೊರಬೇಕಾಗಿದೆ. ದುಡಿಯುವ ಹಾಗೂ ಇತರೆ ಮಹಿಳೆಯರ ಬೇಡಿಕೆಗಳನ್ನು ಅನುಕಂಪದಿಂದ ನೋಡುವ ಬದಲು ಅವರ ಮೇಲೆ ಬರ್ಬರ ಕ್ರಮಕ್ಕೆ ಇಳಿದಿರುವ ಸರ್ಕಾರದ ಕ್ರಮವನ್ನು ಅವರು ಖಂಡಿಸಿದರು.

ಎಲ್ಲಾ ಹಂತದಲ್ಲೂ ಬೇರೂರುತ್ತಿರುವ ಕೋಮುವಾದವು ಮಹಿಳಾ ಚಳುವಳಿಯ ಐಕ್ಯತೆ ಹಾಗೂ ಬೆಳವಣಿಗೆಗೆ ಅಪಾಯಕಾರಿಯಾಗಿದೆ. ದೇಶಾದ್ಯಂತದ ವರದಿ ಪ್ರಕಾರ ಅಲ್ಪಸಂಖ್ಯಾತರು ಅದರಲ್ಲಿಯೂ ಮುಸ್ಲಿಮರು ಹಾಗೂ ಕ್ರಿಶ್ಚಿಯನ್ನರ ಮೇಲೆ ಹೆಚ್ಚು ಹೆಚ್ಚು ಧಾಳಿ ನಡೆಯತೊಡಗಿದೆ. ಇತಂಹ ಕ್ರಮ ಹಾಗೂ ಧಾಳಿಗಳನ್ನು ಬೆಂಗಳೂರಿನಲ್ಲಿ ನಡೆಯುವ 5ನೇ ಅಖಿಲ ಭಾರತ ಮಹಿಳಾ ಸಮ್ಮೇಳನ ಸವಾಲಾಗಿ ಸ್ವೀಕರಿಸಿ ಪ್ರತಿನಿಧಿಗಳು ಸಮಗ್ರವಾಗಿ ಚರ್ಚಿಸಿ ಮಹಿಳಾ ಸಂಘಟನೆಯ ಸಾಧನೆ ಹಾಗೂ ವೈಫಲ್ಯಗಳನ್ನು ವಿಮರ್ಶಿಸಿ ಮುಂದಿನ ಚಳುವಳಿ ರೂಪಿಸುವರೆಂದು ತಿಳಿಸಿದ ಸುಭಾಷಿಣಿ ಆಲಿಯವರು ಸಮ್ಮೇಳನ ಸ್ವಾತಂತ್ರ್ಯ ಹೋರಾಟಗಾರರಾದ ಮಲ್ಲು ಸ್ವರಾಜ್ಯಂ, ಪಾಪಾ ಉಮಾನಾಥ್ ಮತ್ತು ಲಕ್ಷ್ಮಿ ಸೆಹಗಲ್‌ರವರಿಗೆ ವಿಶೇಷ ಸನ್ಮಾನದೊಂದಿಗೆ ಹಿರಿಯ ಮಹಿಳಾ ಸ್ವಾತಂತ್ರ್ಯ ಹೋರಾಟಗಾರರ ತ್ಯಾಗಬಲಿದಾನಗಳನ್ನು ಅವರ ಪ್ರೇರಕ ಮೌಲ್ಯಗಳನ್ನು ಸ್ಮರಿಸುವುದೆಂದರು. ಪತ್ರಿಕಾಗೋಷ್ಠಿಯಲ್ಲಿ ಜೆ.ಎಂ.ಎಸ್. ಮುಖಂಡರಾದ ಕೆ.ಎಸ್.ವಿಮಲ ಮತ್ತು ಎನ್.ಪ್ರಭಾ ಉಪಸ್ಥಿತರಿದ್ದರು. ○

ಅಕ್ಕಿ ಆಲೂರಿನಲ್ಲಿ ಕೋಮುವಾದಿಗಳ ದುಷ್ಕೃತ್ಯ

ತಕ್ಷಣ ಸಿಓಡಿ ತನಿಖೆಗೆ ಸಿಪಿಐ(ಎಂ) ಆಗ್ರಹ

ಹಾನಗಲ್ ತಾಲ್ಲೂಕಿನ ಅಕ್ಕಿ ಆಲೂರು ಗ್ರಾಮದಲ್ಲಿ ಕಾಮದಹನದ ದಿನ ದಾಂಧಲೆ ಹಾಗೂ ಪೋಲೀಸ್ ಲಾಠಿಚಾರ್ಜ್ ನಡೆದಿದ್ದು ಇತ್ತೀಚೆಗೆ ಹಲವು ಹೇಯಕೃತ್ಯಗಳು ವರದಿಯಾಗಿವೆ. ಇದ್ದಕ್ಕಿದ್ದಂತೆ ಜಾಮಿಯಾ ಮಸೀದಿಯಲ್ಲಿದ್ದ ಎರಡು ಕುರಾನ್ ಗ್ರಂಥಗಳು, ಮೊಹರಂ ಹಬ್ಬದಲ್ಲಿ ಪೂಜಿಸುವ ಕೆಲವು ಪಂಜಗಳು, ನೆಲಕ್ಕೆ ಹಾಸುವ ಜಮಖಾನಗಳು ಕಾಣೆಯಾಗಿ ಬೇರೆಲ್ಲೆಲ್ಲೋ ಪತ್ತೆಯಾಗಿವೆ. ಅಲ್ಲದೆ ಸ್ಮಶಾನದಲ್ಲಿ ಹಲವು ಕಿಡಿಗೇಡಿತನಗಳು ನಡೆದಿವೆ. ಇದರಿಂದ ಇಡೀ ಗ್ರಾಮದಲ್ಲಿ ದ್ವೇಷಮಯ ವಾತಾವರಣ ಉಂಟಾಗಿದೆ. ಕೆಲವು ಪ್ರಗತಿಪರರ ಪ್ರಯತ್ನಗಳಿಂದಾಗಿ ಪರಿಸ್ಥಿತಿ ಕೈಮೀರಿ ಹೋಗಿಲ್ಲ.

ಈ ಕಿಡಿಗೇಡಿಗಳು ಯಾರು ಎಂದು ಊಹಿಸಲು ಸಾಕಷ್ಟು ಪುರಾವೆಗಳಿವೆ. ಆದರೂ ಕೆಲವು ಅತ್ಯಂತ ಹೇಯ ಘಟನೆಗಳು ನಡೆದ ನಂತರವೂ ಕೋಮುಗಲಭೆಯ ಪ್ರಚೋದಕರ ಮೇಲೆ ಯಾವುದೇ ಕ್ರಮ ಜರುಗಿಸಿಲ್ಲ ಎಂದು ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ಖೇದ ವ್ಯಕ್ತಪಡಿಸಿದೆ. ಈಗಾಗಲೇ ದಾವಣಗೆರೆ, "ಹುಬ್ಬಳ್ಳಿಗಳಲ್ಲಿ ಕೋಮು ದ್ವೇಷದ ಜ್ವಾಲೆ ಎಬ್ಬಿಸಿ ರಾಜಕೀಯ ದುರ್ಲಾಭ ಪಡೆಯುತ್ತಿರುವವರೇ ಈ ಸುತ್ತಲಿನ ಗ್ರಾಮಾಂತರ ಜನತೆಯ ಧರ್ಮನಿರಪೇಕ್ಷ ಮನೋಭಾವದಿಂದ ಮತ್ಸರಗೊಂಡು ಕೋಮುದ್ವೇಷದಿಂದ ವಾತಾವರಣವನ್ನು ವಿಷಮಯಗೊಳಿಸಲು ಮುಂದಾಗಿದ್ದಾರೆ" ಎಂದು ರಾಜ್ಯ ಗೃಹ ಮಂತ್ರಿಗಳನ್ನು ಭೇಟಿಯಾದ ಸಿಪಿಐ(ಎಂ) ನಿಯೋಗ ಹೇಳಿದೆ. ಈ ಎಲ್ಲಾ ಹೇಯ ಕೃತ್ಯಗಳನ್ನು ವಿವರಿಸಿದ ಒಂದು ಮನವಿ ಪತ್ರವನ್ನು ಗೃಹಮಂತ್ರಿಗಳಿಗೆ ಸಲ್ಲಿಸಿದ ನಿಯೋಗ ಈ ದುಷ್ಕೃತ್ಯದಲ್ಲಿ ಭಾಗಿಯಾಗಿರುವ ಎಲ್ಲರ ಮೇಲೆ ಕೂಡಲೇ ಕಠಿಣ ಕ್ರಮ ಕೈಗೊಳ್ಳಬೇಕು ಹಾಗೂ ಈ ಪ್ರಕರಣದ ಬಗ್ಗೆ ಸಿಓಡಿ ತನಿಖೆಯಾಗಬೇಕು ಎಂದು ಆಗ್ರಹಪಡಿಸಿದೆ.

ವೈದ್ಯಕೀಯ ತಪಾಸಣೆ ಶಿಬಿರ

ಮೈಸೂರು: ಜಿಲ್ಲಾ ಅಗರಬತ್ತಿ ಸಂಘ, ವಿಮಾ ನೌಕರರ ಸಂಘ ಹಾಗೂ ರಾಜ್ಯ ಔಷಧಿ ಮಾರಾಟ ಪ್ರತಿನಿಧಿಗಳ ಸಂಘಗಳು ಜಂಟಿಯಾಗಿ ಮೈಸೂರಿನಲ್ಲಿ ಆರಂಭಿಸಿರುವ ವೈದ್ಯಕೀಯ ತಪಾಸಣೆ ಶಿಬಿರವನ್ನು ಶಿವರಾತ್ರೇಶ್ವರ ನಗರದಲ್ಲಿ ಮೇ 10 ರಂದು ವಾಸು ಅಗರಬತ್ತಿ ಪಾಲುದಾರರು ಉದ್ಘಾಟಿಸಿ ಕಾರ್ಯಕ್ರಮವನ್ನು ಶ್ಲಾಘಿಸಿ ಕಾರ್ಡ್ ನೀಡಿದರು. ಮುಖ್ಯ ಅತಿಥಿಗಳಾಗಿದ್ದ ಜೆ.ಎಂ.ಎಸ್. ನ ಕೆ.ಎಸ್.ವಿಮಲ ಮಾತನಾಡಿ ಶಿಬಿರದ ಉಪಯೋಗವನ್ನು ಮಹಿಳೆಯರು ಹೆಚ್ಚು ಹೆಚ್ಚಾಗಿ ಪಡೆಯುವುದರ ಜೊತೆಗೆ ಸಂಘಟನಾತ್ಮಕವಾಗಿ ತಮ್ಮ ಬೇಡಿಕೆಗಳನ್ನು ಪಡೆಯುವುದರ ಜೊತೆಗೆ ಸಮಾಜದ ಪರಿವರ್ತನೆಯಲ್ಲಿ ತೊಡಗಿಸಿಕೊಳ್ಳಬೇಕೆಂದರು. ಆಂದೋಲನ ದಿನಪತ್ರಿಕೆಯ ರಾಜಶೇಖರ್ ಕೋಟಿ ಮಾತನಾಡಿ ಇಂತಹ ಕಾರ್ಯಕ್ರಮಗಳು ಇನ್ನಷ್ಟು ಹೆಚ್ಚಾಗಬೇಕೆನ್ನುತ್ತಾ ತಾವೂ ಸಹಾಯ ಮಾಡಲು ಸಿದ್ಧವೆಂದರು.

ವಿಮಾ ನೌಕರರ ಸಂಘದ ಎನ್.ಎಸ್.ಪ್ರಭಾಕರ ಅಧ್ಯಕ್ಷತೆ ವಹಿಸಿದ್ದ ಕಾರ್ಯಕ್ರಮದಲ್ಲಿ ಜಿಲ್ಲಾ ಅಗರ ಬತ್ತಿ ಸಂಘದ ಜಗದೀಶ್ ಸ್ವಾಗತಿಸಿದರೆ ಡಾ|| ವಿಷ್ಣುಮೂರ್ತಿಯವರು ಶಿಬಿರದ ಉಪಯುಕ್ತತೆ ವಿವರಿಸಿದರು. ವೆಂಕಟೇಶ್ ಆರ್.ಅಗರಬತ್ತಿ ಪಾಲುದಾರರು ಉಪಸ್ಥಿತರಿದ್ದರು. ನಾಗೇಶ್ ವಂದಿಸಿದರು.

ಮಿಸ್ ಮೇರಿ ಅಂಥೋನಿ, ಡಾ|| ರೇಖಾ ಶಂಕರ್, ಲಿಂಗೇಗೌಡ, ಡಾ|| ಸಂತೃಪ್ತಿ, ಡಾ|| ಪೂರ್ಣಿಮಾ ಜ್ಯೋತಿ, ಪ್ರಿನ್ಸಿಪಾಲರಾದ ಯಶೋಧ ರೋಗಿಗಳ ತಪಾಸಣೆ ಮಾಡಿದರು.

ಮಂಜುನಾಥ ಪುರ: ಮೇ 17 ರಂದು 2ನೇ ವೈದ್ಯಕೀಯ ಶಿಬಿರವು ಮಂಜುನಾಥ ಪುರದ ಸಮುದಾಯ ಭವನದಲ್ಲಿ ನಡೆಯಿತು. ನಗರ ಪಾಲಿಗೆ ಸದಸ್ಯೆ ವೆಂಕಟಲಕ್ಷ್ಮಮ್ಮ ಉದ್ಘಾಟಿಸಿದರು. ಹೆಚ್.ಎಸ್.ಜಗದೀಶ್, ಎಲ್.ಜಗನ್ನಾಥ್ ಭಾಸ್ಕರ್ ಉಪಸ್ಥಿತರಿದ್ದರು.

ಶಾಂತವೇರಿ ಗೋಪಾಲಗೌಡ ಆಸ್ಪತ್ರೆಯ ಡಾ|| ಮೇರಿ ಅಂಥೋನಿ, ಡಾ|| ಸಂತೃಪ್ತಿ, ಡಾ|| ಶಂಕರ್ ಲಿಂಗೇಗೌಡ ಹಾಗೂ ಪುಟ್ಟಸ್ವಾಮಾಚಾರರ ವೈದ್ಯಕೀಯ ತಂಡ ನೂರಾರು ಜನರಿಗೆ ವೈದ್ಯಕೀಯ ತಪಾಸಣೆ ನಡೆಸಿತು.

ಕಾರ್ಮಿಕರ ಮುಖಂಡ ಮಲಾಬಾದೆ ನಿಧನಕ್ಕೆ ಸಂತಾಪ

ರಾಮದುರ್ಗ: ಮಹಾರಾಷ್ಟ್ರದ ಕಾರ್ಮಿಕ ಮುಖಂಡ ಹಾಗೂ ಮಾಜಿ ಶಾಸಕರಾದ ಮಲಾಬಾದೆ ನಿಧನಕ್ಕೆ ಬೆಳಗಾವಿ ಸಿಪಿಐ(ಎಂ)ನ ಪ್ರಾದೇಶಿಕ ಸಮಿತಿಯು ತೀವ್ರ ಸಂತಾಪ ಸೂಚಿಸಿದೆ.

ಇಚಲಕರಂಜಿಯಲ್ಲಿ ಜನಿಸಿದ ಮಲಾಬಾದೆ ಪುರಸಭೆ ಕಾರ್ಮಿಕರಾಗಿ, ಪವರ್‌ಲೂಂ ಕಾರ್ಮಿಕರ ಮುಖಂಡರಾಗಿ, ಎರಡು ಅವಧಿಗೆ ಪುರಸಭಾ ಅಧ್ಯಕ್ಷರಾಗಿ, ಶಾಸಕರಾಗಿ ಸ್ಮರಣೀಯ ಕಾರ್ಯನಿರ್ವಹಿಸಿದ್ದ ಮಲಾಬಾದೆ ದುಡಿಯುವ ಜನರ ಹೋರಾಟಗಳಲ್ಲಿ ಪಾಲ್ಗೊಂಡು ಜೈಲುವಾಸ ಅನುಭವಿಸಿ ಜನಪ್ರಿಯ ಧುರೀಣರಾಗಿ ಮೂಡಿಬಂದಿದ್ದರು.

ಇಚಲಕರಂಜಿ ಪಟ್ಟಣ ಅಗಲಿದ ಮುಖಂಡರ ಗೌರವಾರ್ಥ ಎರಡು ದಿನಗಳ ಸಂಪೂರ್ಣ ಬಂದ್ ಆಚರಿಸುವ ಮುಖಾಂತರ ಲಕ್ಷಾಂತರ ಕಾರ್ಮಿಕರು ಶ್ರದ್ಧಾಂಜಲಿ ಸಲ್ಲಿಸಿದರು ಎಂದು ಬೆಳಗಾವಿ ಸಿಪಿಐ(ಎಂ) ತನ್ನ ಪ್ರಕಟಣೆಯಲ್ಲಿ ತಿಳಿಸಿದೆ.

ಗುತ್ತಿಗೆ ಪದ್ಧತಿ ವಿರೋಧಿಸಿ ಮೆರವಣಿಗೆ

ಬೆಂಗಳೂರು: ರಾಜ್ಯದಲ್ಲಿ ಸುಮಾರು 10 ಲಕ್ಷಕ್ಕೂ ಹೆಚ್ಚು ಗುತ್ತಿಗೆ ಕಾರ್ಮಿಕರು ಹಲವಾರು ಕೈಗಾರಿಕೆಗಳಲ್ಲಿ ದುಡಿಯುತ್ತಿದ್ದು ರಾಜ್ಯ ಸರ್ಕಾರ ಹಲವು ಕ್ಷೇತ್ರದಲ್ಲಿ ಗುತ್ತಿಗೆ ಕಾರ್ಮಿಕ ಪದ್ಧತಿ ರದ್ದುಗೊಳಿಸಿದ್ದರೂ ಮಾಲೀಕರು ಜಾರಿಗೆ ತರದಿರುವುದನ್ನು ಹಾಗೂ ದುಡಿಯುವ ಜನತೆಯ ಜೀವನಕ್ಕೆ ಬಾಧೆಯಾದ ಗುತ್ತಿಗೆ ಕಾರ್ಮಿಕ ಪದ್ಧತಿಯನ್ನು ರದ್ದು ಗೊಳಿಸುವಂತೆ ಒತ್ತಾಯಿಸಿ ಗುತ್ತಿಗೆ ಕಾರ್ಮಿಕರು ಸಿಐಟಿಯು, ಬೆಂಗಳೂರು ಜಿಲ್ಲಾ ಸಮಿತಿ ನೇತೃತ್ವದಲ್ಲಿ ಸಾವಿರಾರು ಕಾರ್ಮಿಕರು ನಗರದ ಪುರಭವನದಿಂದ ಮೆರವಣಿಗೆ ನಡೆಸಿ ಕಾರ್ಮಿಕ ಆಯುಕ್ತರ ಕಛೇರಿ ಮುಂದೆ ಧರಣಿ ನಡೆಸಿದರು.

ಗುತ್ತಿಗೆ ಆಧಾರದ ಮೇಲೆ ದುಡಿಯುವ ಕಾರ್ಮಿಕರಿಗೆ ಕೆಲಸದ ಭದ್ರತೆಯಾಗಲೀ, ಕಾನೂನು ರೀತಿಯ ಸೌಲಭ್ಯಗಳಾಗಲೀ ಸಿಗುತ್ತಿಲ್ಲ. ಸಮಾನ ಕೆಲಸಕ್ಕೆ ಸಮಾನ ವೇತನವಂತೂ ಕೇಳುವಹಾಗೇ ಇಲ್ಲವಾಗಿದೆ.ಇದು ಕಾರ್ಮಿಕ ವರ್ಗವನ್ನು ಅಸ್ಥಿರತೆಯತ್ತ ತಳ್ಳುವುದು ಎಂದು ಗುತ್ತಿಗೆ ಕಾರ್ಮಿಕರ ಸಂಘರ್ಷ ಸಮಿತಿ ರಾಜ್ಯ ಸಂಚಾಲಕರಾದ ಆರ್.ಶ್ರೀನಿವಾಸ್ ಪ್ರದರ್ಶನಕಾರರನ್ನುದ್ದೇಶಿಸಿ ಮಾತನಾಡಿದರು.

ಗುತ್ತಿಗೆ ಕಾರ್ಮಿಕ ಪದ್ಧತಿಯನ್ನು ರದ್ದು ಮಾಡುವಂತೆ ಹಲವಾರು ವರ್ಷಗಳಿಂದ ನಡೆಸಿದ ಸತತ ಹೋರಾಟಗಳಿಂದ ರಾಜ್ಯ ಸರ್ಕಾರ 1997 ಏಪ್ರಿಲ್ 4 ರಿಂದ ಕ್ಯಾಂಟಿನ್, ಸ್ಟೀಲ್ ರೋಲಿಂಗ್ ಮಿಲ್, ಆಸ್ಪತ್ರೆ ಮತ್ತು ನರ್ಸಿಂಗ್ ಹೋಂಗಳಲ್ಲಿ ಗುತ್ತಿಗೆ ಕಾರ್ಮಿಕ ಪದ್ಧತಿಯನ್ನು ರದ್ದು ಮಾಡಿದೆ. ರಾಜ್ಯ ನ್ಯಾಯಾಲಯವು ಈ ಆದೇಶವನ್ನು ಎತ್ತಿ ಹಿಡಿದಿದ್ದು ಮಾಲಿಕರು ಈ ಕಾನೂನನ್ನು ಜಾರಿಗೆ ತರುವಲ್ಲಿ ಮೀನಾಮೇಷ ಎಣಿಸುತ್ತಿರುವುದನ್ನು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮೀನಾಕ್ಷಿ ಸುಂದರಂ ಖಂಡಿಸಿ ಗುತ್ತಿಗೆ ಕಾರ್ಮಿಕರನ್ನು ಖಾಯಂ ಗೊಳಿಸುವಂತೆ ಒತ್ತಾಯಿಸಿದರು.

ಮೆರವಣಿಗೆಯಲ್ಲಿ ಬಿ.ಇ.ಎಂ.ಎಲ್., ಬಿ.ಇ.ಎಲ್., ಐ.ಟಿ.ಐ, ಬಿ.ಹೆಚ್.ಇ.ಎಲ್. ಮತ್ತು ಐ.ಓ.ಸಿ. ಮುಂತಾದ ಕಡೆಗಳಿಂದ ನೂರಾರು ಗುತ್ತಿಗೆ ಕಾರ್ಮಿಕರು ಪಾಲ್ಗೊಂಡಿದ್ದರು. ಹೆಚ್.ಎನ್.ಗೋಪಾಲಗೌಡ, ವಿಭೂತಿಮಠ ಹಾಗೂ ಹಲವು ಕಾರ್ಮಿಕ ಸಂಘಟನೆಗಳ ಮುಖಂಡರು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು.

ಪ್ರದರ್ಶನಕಾರರು ಕಾರ್ಮಿಕ ಆಯುಕ್ತರಿಗೆ ಮನವಿ ಸಲ್ಲಿಸಿ ಗುತ್ತಿಗೆ ಕಾರ್ಮಿಕ ಪದ್ಧತಿ ರದ್ದುಗೊಳಿಸುವಂತೆ ನ್ಯಾಯಾಲಯದ ತೀರ್ಪನ್ನು ಜಾರಿಗೆ ತರುವಂತೆ ಒತ್ತಾಯಿಸಿ ಮನವಿ ಸಲ್ಲಿಸಿದರು. ಸೂಕ್ತ ಕ್ರಮ ಕೈಗೊಳ್ಳದಿದ್ದರೆ ಜೂನ್ 3 ರಂದು ಗುತ್ತಿಗೆ ಕಾರ್ಮಿಕರು ರಾಜ್ಯಾದ್ಯಂತ ಒಂದು ದಿನದ ಮುಷ್ಕರ ನಡೆಸಲಿದ್ದಾರೆ ಎಂದು ಎಚ್ಚರಿಸಿದ್ದಾರೆ.

ಇ.ಎಂ.ಎಸ್. ನಗರ ಉದಯ

ರಾಯಚೂರು: ಜಿಲ್ಲೆಯ ದೇವದುರ್ಗ ತಾಲೂಕಿನ ಜಾಲಹಳ್ಳಿಯಲ್ಲಿ ದುಡಿಯುವ ವರ್ಗದ ತಾರೆ, ಕಮ್ಯುನಿಸ್ಟ್ ನೇತಾರ ಇ.ಎಂ.ಎಸ್. ರವರಿಗೆ ಒಂದು ಭಿನ್ನವಾದ ಗೌರವ ಸಲ್ಲಿಸಲಾಯಿತು.

ಜಾಲಹಳ್ಳಿಯ ಒಂದು ಪ್ರದೇಶಕ್ಕೆ ಕಾಂ| ಇ.ಎಂ.ಎಸ್. ಹೆಸರಿಡುವ ಮುಖಾಂತರ 'ಇ.ಎಂ.ಎಸ್. ನಗರ' ವೆಂದು ನಾಮಕರಣ ಮಾಡಲಾಯಿತು.

ಇ.ಎಂ.ಎಸ್. ನಗರ ಉದ್ಘಾಟಿಸಿ ಮಾತನಾಡಿದ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಪಿ.ರಾಮಚಂದ್ರರಾವ್ ಮಾತನಾಡಿ ಇ.ಎಂ.ಎಸ್. ದೇಶದ ಪ್ರಜಾಸತ್ತಾತ್ಮಕ ಮತ್ತು ಎಡ ಚಳುವಳಿಗೆ ಮಹತ್ವದ ಕೊಡುಗೆ ನೀಡಿದ್ದಾರೆ. ಅವರ ಅಧಿಕಾರಾವಧಿಯಲ್ಲಿ ಭೂಸುಧಾರಣೆ ಮುಖಾಂತರ ಭೂರಹಿತ ಬಡವರಿಗೆ ಭೂಮಿ ನೀಡಿ, ಬಡಜನತೆಯ ನೇತಾರರಾಗಿದ್ದರು. ಅವರು ಜಾರಿಗೆ ತಂದ ಶಿಕ್ಷಣ ನೀತಿಯಿಂದಾಗಿ ಬಡವರ ಮಕ್ಕಳು ಶಿಕ್ಷಣ ಪಡೆಯುವಂತಾಯಿತು. ಅವರ ಹೆಸರಿಟ್ಟಿರುವುದು ಸಂತೋಷಕರ ಎಂದರು.

ಸಭೆಯಲ್ಲಿ ಚಂದ್ರಶೇಖರ್ ಬಾಳೆ, ಮಲ್ಲಯ್ಯ ಜಾಲಹಳ್ಳಿ, ಪಿ.ಗಿರಿಯಪ್ಪ, ಹೂವಯ್ಯ; ಬಸವನಗುರ ದೇಸಾಯಿ, ರಂಗಪ್ಪ, ಚಂದ್ರಶೇಖರ್ ನಾಡಗೌಡ, ಶಿವಪ್ಪ ಕುರುಗೋಡಿ, ರಂಗಪ್ಪ ಗೌಡಿಗೇರ ಮುಂತಾದವರು ಪಾಲ್ಗೊಂಡಿದ್ದರು.

ಕುಡಿಯುವ ನೀರು ಹಾಗೂ ಶೌಚಾಲಯಕ್ಕೆ ಒತ್ತಾಯ

ಬೀದರ್: ನಗರದ ಲೇಬರ್ ಕಾಲೋನಿಯ ಕೊಳಚೆ ಪ್ರದೇಶಗಳಲ್ಲಿ ಕುಡಿಯುವ ನೀರು ಸರಬರಾಜು ಹಾಗೂ ಶೌಚಾಲಯಗಳ ನಿರ್ಮಾಣಕ್ಕಾಗಿ ಒತ್ತಾಯಿಸಿ ನೂರಾರು ಮಹಿಳೆಯರು ಮೇ 12 ರಂದು ಅಂಬೇಡ್ಕರ್ ವೃತ್ತದಿಂದ ಸಿ.ಎಂ.ಸಿ. ವರೆಗೆ ಮೆರವಣಿಗೆ ನಡೆಸಿ ನಗರಸಭೆ ಆಯುಕ್ತರಿಗೆ ಹಾಗೂ ಬೀದರ್ ತಾಲ್ಲೂಕ್ ಪಂಚಾಯತ್ ಕಚೇರಿಗೆ ಮನವಿ ಸಲ್ಲಿಸಿದರು.

ಹಲವು ಬಾರಿ ಮನವಿ ಸಲ್ಲಿಸಿದರೂ ಅಧಿಕಾರಿಗಳು ಗಮನ ಹರಿಸದಿದ್ದುದನ್ನು ಪ್ರತಿಭಟಿಸಿ ಮಾತನಾಡಿದ ಮಹಿಳಾ ಮುಖಂಡರು ಶೌಚಾಲಯಗಳಿಲ್ಲದೆ ಮಹಿಳೆಯರು ಹಲವು ಸಂಕಷ್ಟ ಎದುರಿಸುವಂತಾಗಿದೆ, ಕೂಡಲೇ ಬೇಡಿಕೆ ಈಡೇರಿಸುವಂತೆ ಒತ್ತಾಯಿಸಿದರು.

ಮೆರವಣಿಗೆಯಲ್ಲಿ ಸಂಗ್ರಾಮ್ ಬೋಸ್ಲೆ, ಮನೋಹರ್, ಸಂಗ್ರಾಮ್, ಲಲಿತಾ ಸೇನ್, ಲೀಲಾ ಸಂಗ್ರಾಮ್ ಮುಂತಾದವರು ಪಾಲ್ಗೊಂಡಿದ್ದರು.

ರೈತರೇಕೆ ಆತ್ಮ ಹತ್ಯೆಗಿಳಿದರು?

ಕಳೆದ ಸಂಚಿಕೆಯಲ್ಲಿ ಒಬ್ಬ ಆರ್ಥಿಕ ತಜ್ಞರ ವಿಶ್ಲೇಷಣೆ ಓದಿರುವಿರಿ. ಈ ಸಂಚಿಕೆಯಲ್ಲಿ ರೈತರ ನಡುವೆ ಕೆಲಸ ಮಾಡುತ್ತಿರುವ ಕರ್ನಾಟಕ ಪ್ರಾಂತ ರೈತ ಸಂಘದ ಒಬ್ಬ ಮುಖಂಡರಾದ ಯು.ಬಸವರಾಜ್‌ರವರ ವಿಶ್ಲೇಷಣೆಯನ್ನು ಓದಿ.

ಕಳೆದ 2-3 ತಿಂಗಳಿಂದ ದಿನ ಪತ್ರಿಕೆಗಳನ್ನು ತಿರುವಿಹಾಕಿದರೆ ಆಂಧ್ರ ಪ್ರದೇಶ, ಕರ್ನಾಟಕ, ಮಹಾರಾಷ್ಟ್ರ ರಾಜಸ್ಥಾನ, ಪಂಜಾಬ್ ಇತರೆ ರಾಜ್ಯಗಳ ಬಡ ರೈತರ ಆತ್ಮ ಹತ್ಯೆಯ ಸುದ್ದಿ ಬಹಳ ಪ್ರಮುಖವಾಗಿ ಪ್ರಕಟವಾಗಿ ವಿಶ್ವದ ಜನರ ಗಮನ ಸೆಳೆದಿದೆ.

ಈಗಾಗಲೇ ನೂರಾರು ರೈತರು ಆತ್ಮಹತ್ಯೆಗಿಳಿದಿದ್ದಾರೆ. ಇನ್ನೂ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದು ವರದಿಯಾಗುತ್ತಲೇ ಇದೆ. ಇದರ ಜೊತೆಯಲ್ಲಿಯೇ ಈ ರಾಜ್ಯಗಳ ವಿಧಾನಸಭೆಗಳು ರೈತರ ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿ ಸ್ತಂಭಿಸಲ್ಪಟ್ಟಿವೆ. ಅಲ್ಲೋಲ ಕಲ್ಲೋಲವಾಗಿವೆ. ಕರ್ನಾಟಕದಲ್ಲಿಯಂತು ಮುಖ್ಯವಾಗಿ ಉತ್ತರ ಕರ್ನಾಟಕದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘ ರೈತರ ಆತ್ಮಹತ್ಯೆ ಪ್ರಕರಣಗಳನ್ನು ಬಯಲಿಗೆಳೆದು ಪರಿಹಾರ ಹಾಗೂ ಇತರೆ ಬೇಡಿಕೆಗಾಗಿ ಬೃಹತ್ ಪ್ರತಿಭಟನಾ ಕಾರ್ಯಕ್ರಮ ಸಂಘಟಿಸಿತು. ನಂತರ ಕಾಂಗ್ರೆ, ಇತರೇ ಬೀದರ್ ಜಿಲ್ಲೆಯ ಶಾಸಕರು ಬೃಹತ್ ಪ್ರತಿಭಟನಾ ಪ್ರದರ್ಶನ ನಡೆಸಿದರು.

ಶಾಸನ ಸಭೆಯಲ್ಲಿ ಈ ವಿಷಯ ಪ್ರಸ್ತಾಪಿಸಲ್ಪಟ್ಟು ಸದನ ಸಮಿತಿ ಉತ್ತರ ಕರ್ನಾಟಕಕ್ಕೆ ಭೇಟಿ ನೀಡಿ ವರದಿಸಲ್ಲಿಸಿದೆ.

ರಾಜ್ಯ ಸರ್ಕಾರ ಸತ್ತ ರೈತರಿಗೆ ತಲಾ 1 ಲಕ್ಷ ರೂಪಾಯಿ ಪರಿಹಾರ ನೀಡಲು ಮುಂದಾಗಿರುವುದು ಬೆಳೆ ನಷ್ಟಕ್ಕೆ ಪರಿಹಾರ ಕೊಡಿಸಲು ಪ್ರಯತ್ನಿಸಿರುವುದು. ಈ ನಡುವೆ ಕೇಂದ್ರ ಸರ್ಕಾರದ ಉನ್ನತ ಮಟ್ಟದ ಅಧಿಕಾರಿಗಳ ತಂಡವೊಂದು ಕರ್ನಾಟಕಕ್ಕೆ ಭೇಟಿ ನೀಡಿ ಪ್ರಕೃತಿ ವಿಕೋಪದಿಂದಾಗಿ ನಷ್ಟಕ್ಕೀಡಾದ ಸಾಲದಿಂದಾದ ಸಾವುಗಳೇ ಎಂದು ಪರಿಶೀಲಿಸಲು ಬಂದು ಹೋಗಿದೆ. ಈ ನಿಯೋಗದ ಮುಂದೆ ರೈತರು ತಮ್ಮ ಅಳಲನ್ನು ತೋಡಿಕೊಳ್ಳಲು ಬಂದಾಗ ಸಮಯವಿಲ್ಲವೆಂದು ಹೇಳಿ ಕರ್ನಾಟಕದ ಐತಿಹಾಸಿಕ ಸ್ಥಳಗಳ ವೀಕ್ಷಣೆಗಾಗಿ ಸಮಯ ನೀಡಿ ತನ್ನ ನಾಟಕಕ್ಕೆ ತೆರೆ ಎಳೆಸಿರುವುದು ಪತ್ರಿಕೆಗಳಲ್ಲಿ ಬಹಿರಂಗವಾಗಿದೆ.

ಈ ನಡುವೆ ಬಿ.ಜೆ.ಪಿ ದೊಡ್ಡ ರೀತಿಯಲ್ಲಿ ರೈತರ ಪರ ಧ್ವನಿ ಎತ್ತಲು ತೊಡಗಿದೆ. ರಾಜ್ಯ ಸರ್ಕಾರದ ವಿರುದ್ಧ ತೀವ್ರ ಹೋರಾಟಕ್ಕೆ ಕರೆ ನೀಡಿದೆ.

ಇದೆ ದಿನಾಂಕ 18.05.1998 ರಂದು ರೈತರ ಸುಖಮಯ ಜೀವನಕ್ಕಾಗಿ, ಪರ್ಯಾಯ ಕೃಷಿನೀತಿಗಾಗಿ, ನಷ್ಟ ಪರಿಹಾರಕ್ಕಾಗಿ, ಸಾಲದ ಇತ್ಯರ್ಥಕ್ಕಾಗಿ ಕೇಂದ್ರ-ರಾಜ್ಯ ಸರಕಾರವನ್ನು ಒತ್ತಾಯಿಸಿ ಕರ್ನಾಟಕ ಪ್ರಾಂತ ರೈತ ಸಂಘ, ಕರ್ನಾಟಕ ರಾಜ್ಯ ರೈತ ಸಂಘ, ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘಗಳು ರಾಜ್ಯ ಮಟ್ಟದ ಜಂಟಿ ಸಮಾವೇಶವನ್ನು ನಡೆಸುವುದಾಗಿ ಹೇಳಿಕೆ ನೀಡಿವೆ.

ಹೀಗೆ ಬಿರುಸಿನ ರಾಜಕೀಯ ಚಟುವಟಿಕೆಗಳು ತೀವ್ರವಾಗಿ ನಡೆದಿರುವಾಗ ಆತ್ಮಹತ್ಯೆಯ ಪ್ರಕರಣಗಳು ಆಯಾರಾಜ್ಯಕ್ಕಷ್ಟೇ ಸೀಮಿತವಾಗದೇ ದೇಶದ ಕೃಷಿಯ ಬಿಕ್ಕಟ್ಟನ್ನು ಬಯಲಿಗೆಳೆದಿರುವಾಗ ಮೊನ್ನೆತಾನೆ ಆರಿಸಿ ಬಂದ "ಸ್ಥಿರ ಹಾಗೂ ಸಮರ್ಥ" ಸರ್ಕಾರ ನಿರ್ಲಿಪ್ತವಾಗಿದೆ. ಅದೊಂದು ಗಂಭೀರ ಸಮಸ್ಯೆಯೆಂದು ಅದು ಪರಿಗಣಿಸಿದಂತೆ ಕಾಣಿಸಲೇ ಇಲ್ಲಾ. ದೇಶದ ಯಾವುದೇ ಒಬ್ಬ ಪ್ರಜೆಯು ಸಂವಿಧಾನವನ್ನು ತಿದ್ದುಪಡಿ ಮಾಡಿ ಬಾಂಬ್ ತಯಾರಿಸಿ ನಮ್ಮ ಜೀವ ಉಳಿಸಿ ಎಂದು ಕೇಳದಿದ್ದರೂ ಬಾಂಬ್ ತಯಾರಿಸಲು ಹಾಗೂ ಸಂವಿಧಾನ ತಿದ್ದುವ ಕೆಲಸವೇ ಬಹಳ ಮುಖ್ಯ ಕೆಲಸವೆಂದು ಅದರಲ್ಲೇ ತಲ್ಲೀನನಾಗಿ ತನ್ನ ರೈತ ವಿರೋಧಿ ನೀಲುವನ್ನು ಬಹಿರಂಗ ಪಡಿಸಿದೆ.

ಬಿಜೆಪಿ - ಕಾಂಗ್ರೆಸ್ ಪಕ್ಷಗಳು, ಜನತಾದಳ ರಾಜ್ಯ ಸರ್ಕಾರ ಅಳುವವನ ಕಣ್ಣೀರು ಒರೆಸುವ ಕೆಲಸದಲ್ಲಿ ನಿರತವಾಗಿವೆ. ಆ ರೀತಿಯ ಕೆಲಸದ ಮೂಲಕ ಮುಂಬರುವ ವಿಧಾನಸಭಾ ಚುನಾವಣೆಯ ಮೇಲೆ ಕಣ್ಣಿಟ್ಟಿರುವುದನ್ನು ಅವರ ಚಟುವಟಿಕೆಗಳು ಬಹಿರಂಗ ಪಡಿಸುತ್ತದೆ.

ಈ ಪಕ್ಷಗಳು ರೈತನ ಆಳದ ದುಃಖದ ಕುರಿತಾಗಲೀ ಆತ್ಮಹತ್ಯೆ ಮಾಡಿಕೊಳ್ಳಲು ಮುಂದಾದ ಒಟ್ಟು ಪರಿಸ್ಥಿತಿಯನ್ನು ಆಳವಾಗಿ ವಿಶ್ಲೇಷಿಸಲು ತೊಡಗದೆ ಈ ರೀತಿಯ ಪರಿಸ್ಥಿತಿಗಾಗಿ ಹೋರಾಡಿರುವುದೇ ಇವರ ಬಿರುಸಿನ ರಾಜಕೀಯ ಚಟುವಟಿಕೆಯ ಹಿಂದಿನ ಮರ್ಮವನ್ನು ಬಯಲಿಗೆಳೆದಿದೆ.

ಇರಲೀ ರೈತರೇಕೆ ಆತ್ಮಹತ್ಯೆಗಿಳಿದಿದ್ದಾರೆ? ಸ್ಥೂಲವಾಗಿ ಈಗ ಬಹಿರಂಗ ವಾಗಿರುವುದು ಕಳಪೆ ಕ್ರಿಮಿನಾಶಕ, ಕಳಪೆ ರಸಗೊಬ್ಬರ, ಕಳಪೆ ಬೀಜ ಬಳಕೆ ಜಾಸ್ತಿಯಾಗಿ ಬೆಳೆನಷ್ಟವಾಗಿ ರೈತರ ಮೇಲೆ ಸಾಲದ ಹೊರೆ ಬಿದ್ದು ತೀರಿಸಲಾಗದೇ ಆತ್ಮಹತ್ಯೆಗಿಳಿದಿದ್ದಾರೆ ಎಂದು ಹೇಳಲಾಗುತ್ತಿದೆ.

ಅಂದರೆ ಈ ಒಂದು ಬೆಳೆಯ ನಷ್ಟದಿಂದಾಗಿ ಸಾಲ ತೀರಿಸಲು ಸಾಧ್ಯವಾಗದೇ ಆತ್ಮಹತ್ಯೆಗಿಳಿದಿದ್ದಾರೆ ಎಂದರ್ಥವಾಗುತ್ತದೆ.

ಮೇಲ್ನೋಟಕ್ಕೆ ರೈತರ ನಡುವೆ ಕೆಲಸಮಾಡುವವನಿಗೆ ಇದೊಂದು ಬಲವಾದ ಕಾರಣವೆಂದು ಅನಿಸುವುದಿಲ್ಲ. ಹಾಗೆ ನೋಡಿದರೆ ಹಲವು ಭೀಕರ ಬರಗಾಲಗಳು ಬೆಳೆ ನಷ್ಟ ಮಾಡಿದಾಗ, ಅತಿವೃಷ್ಟಿಯಾಗಿ ಬೆಳೆ ನಷ್ಟವಾದಾಗ -ಭೂಕಂಪನದಿಂದ ತೊಂದರೆ ಗೊಳಗಾದಾಗ ಆತ್ಮಹತ್ಯೆಯ ಪ್ರಕರಣಗಳು ಕಂಡುಬರಲಿಲ್ಲ.

ಹಾಗಿದ್ದರೆ ಒಂದು ಬೆಳೆಯ ನಷ್ಟದಿಂದಲಿಲ್ಲವೆನ್ನುವುದಾದರೆ ಯಾಕೆ ಈ ಆತ್ಮಹತ್ಯೆ? ಎನ್ನುವ ಪ್ರಶ್ನೆ ಮರಳಿ ಬರುತ್ತದೆ. ಒಂದಂಶ ಸತ್ಯ. ಸಾಲದ ಬಾಧೆಯಿಂದಾಗಿ ಆತ್ಮಹತ್ಯೆಯಾಗುತ್ತದೆ ಎಂಬುದನ್ನು ಬಹುಶಃ ಎಲ್ಲರೂ ಒಪ್ಪುತ್ತಾರೆ.

ಆತ್ಮಹತ್ಯೆ ಮಾತ್ರವೇನಾ? ಹತ್ಯೆ - ಹಲ್ಲೆಗಳಿಲ್ಲವೆ?

ಸಾಲದ ಬಾಧೆ ತಾಳದೆ ಆತ್ಮ ಹತ್ಯೆ ಮಾತ್ರ ನಡೆಯುತ್ತಿರುವವೇ?

ಕರ್ನಾಟಕದಲ್ಲಿ ಆಂಧ್ರದಲ್ಲಿ ಆತ್ಮಹತ್ಯೆಮಾಡಿಕೊಂಡ ರೈತರು ನಿಜವೋ ಸುಳ್ಳೋ ಎಲ್ಲಾ ರಾಜಕೀಯ ಪಕ್ಷಗಳ ಅನುಕಂಪಕ್ಕೆ ಒಳಗಾದಂತೆ ಕಂಡುಬಂದು ಪರಿಹಾರ ಪಡೆದದ್ದು ಕಂಡುಬಂದಿದೆ.

ಅದೇ ಸಾಲದ ಬಾಧೆ ತಾಳಲಾಗದೆಂದು ನಷ್ಟವಾದ ಬೆಳೆಗೆ ಪರಿಹಾರ ನೀಡಬೇಕೆಂದು ಕೇಳಿ ಪ್ರತಿಭಟನೆಗಿಳಿದ ಮಹಾರಾಷ್ಟ್ರದ ರೈತರು ಪಡೆದದ್ದೇನು? ಬಿಜೆಪಿ ಶಿವಸೇನೆ ಸರ್ಕಾರದ ಪೋಲೀಸ್ ಪಡೆಯಿಂದ ಗೋಲೀಬಾರು -9 ಜನ ರೈತರ ಹತ್ಯೆ ಹಲವು ಜನರ ಮೇಲೆ ಹಲ್ಲೆ. ಅದೇ ಸಾಲದ ಭಾದೆಗಾಗಿ ರಾಜಸ್ಥಾನ -ಉತ್ತರ ಪ್ರದೇಶದ ರೈತರು ಪಡೆದದ್ದೇನು?

ನಷ್ಟ ಪರಿಹಾರ ಕೇಳಿದಕ್ಕೆ ಬಿಜೆಪಿ ಸರ್ಕಾರದಿಂದ ಲಾಠಿ ಏಟು ಗೋಲೀಬಾರು ಸಾವು ನೋವು.ಇನ್ನೂ ಕೇಳಿ-ಇದೇ ಸಾಲದ ಬಾಧೆಯ ಭಯ ವಿದ್ದರಿಂದಲೇ ಬಳ್ಳಾರಿ ಜಿಲ್ಲೆಯ ರೈತರು ಬೆಳೆನಷ್ಟವಾಗುವುದನ್ನು ತಪ್ಪಿಸಲು ಬೀದಿಗಿಳಿದಾಗ ಕರ್ನಾಟಕದ ಇದೇ ಜನತಾದಳದ ರಾಜ್ಯ ಸರ್ಕಾರದ ಪೋಲೀಸ್ ಬಲದಿಂದ ರೈತರ ಮೈಯೊಳಗಿನ ಮೂಳೆ ಗಳನ್ನೊಂದೊಂದೇ ಎಣಿಸಲಿಲ್ಲವೇ? ಬಳ್ಳಾರಿಯ ಬೀದಿಯಲ್ಲಿ ಲಾಠಿಗಳು ಪಟರಗುಡಲಿಲ್ಲವೇ?

ಇದೇನಿದು ಬಹಳ ಆಶ್ಚರ್ಯ

ಸಾಲದ ಬಾದೆ ತಾಳಲಾರದೇ ಆತ್ಮಹತ್ಯೆ ಮಾಡಿಕೊಂಡರೆ ಅನುಕಂಪದಿಂದ 1 ಲಕ್ಷ ಪರಿಹಾರ ಮತ್ತದೇ ಸಾಲದ ಬಾಧೆ ತಾಳಲಾರದೇ ಪರಿಹಾರ ಕೇಳಿದರೆ ತಲೆದಂಡ, ದೈಹಿಕ ಹಲ್ಲೆ-ಅದಕ್ಕೂ ಪರಿಹಾರ. ಮತ್ತಿದೇನು ಅಲ್ಲಿ ತಲೆದಂಡ ಹಾಕುವ ಬಿಜೆಪಿ ಕಾಂಗ್ರೆಸ್ಸುಗಳು ಇಲ್ಲಿ ಅದೇನು ರೈತರ ಪರ ಆರ್ಭಟ ಹೋರಾಟ?.....

ಹೇಗಿದೆ?......

ಸಾಲದ ಬಾಧೆಯಿಂದಾಗಿ ಆತ್ಮಹತ್ಯೆ ಹತ್ಯೆ ಹಲ್ಲೆ ಮಾತ್ರವೇನಾ? ಇಲ್ಲಾ ಇನ್ನೂ ಇದೆ.. ಕುಡತಿನಿಯ ಹೊಳೆಕಡೆ ಮಲ್ಲಪ್ಪ ಮಧ್ಯಮ ರೈತ ಹೆಸರುವಾಸಿ ಬೇಸಾಯಗಾರ. ಈಗ್ಗೆ ಹದಿನೈದು ವರ್ಷಗಳ ಕೆಳಗೆ ಬಲವಾದ ಬೇಸಾಯ ಮಾಡಿ ಲಕ್ಷಾಂತರ ಬೆಲೆಬಾಳುವ ಮನೆಯನ್ನು ಕಟ್ಟಿದ 3 ಎಕರೆ ಜಮೀನನ್ನು ಖರೀದಿಸಿದ ಥಲದಂಕ ಮಲ್ಲನೇ ಸರಿ

ಇಂತಹ ಮನುಷ್ಯ ಮೊನ್ನೆ-ಮೊನ್ನೆ ಸತ್ತ! ಜನರು ಅಂದುಕೊಳ್ಳುತ್ತಿದ್ದಾರೆ. ವ್ಯಸನ-ಚಿಂತೆ ಆನೆಯಂತಹ ಮನುಷ್ಯನನ್ನು ತಿಂದು ಹಾಕಿತು..... ಮುಂತಾಗಿ. ಸಾಯುವ ಒಂದು ವರ್ಷ ಮುಂಚೆ 4 ಎಕರೆ ನೀರಾವರಿ ಜಮೀನು ಮಾರಿ ಉಳಿದ ಸಾಲ ಕೇವಲ ಒಂದೂವರೆ ಲಕ್ಷ ಮತ್ತು ಅದರ ಬಡ್ಡಿ ಮಾತ್ರ. ಬಲವಾದ ಬೇಸಾಯ ಮಾಡಲು ಸಾಲ ದೊರೆಯದಾಯಿತು. ಮನೆ ನಿಭಾಯಿಸುವುದು ಕಷ್ಟವಾಯಿತು. ಸಾಲಕೊಟ್ಟವರ ಒತ್ತಡ ಜಾಸ್ತಿಯಾಯಿತು. ಇರುವ ಭೂಮಿ ಮಾರಿ ಮಕ್ಕಳನ್ನು ಕೂಲಿಕಾರರ ಸಾಲಿಗೆ ತಳ್ಳಲು ಇಷ್ಟವಿಲ್ಲ! ಉಳಿದದ್ದೊಂದೇ ದಾರಿ..... ಹಗಲು-ರಾತ್ರಿ ಕೂಳು-ನೀರು ಬಿಟ್ಟು ಕೊರಗಿ ಕೊರಗಿ ಕರಗುವುದು. ಅದನ್ನೇ ಅಲ್ಲವೇ ಸಾಲವನ್ನು ಕೊಂಡಾಗ ಹಾಲೋಗರ ಉಂಡಂತೆ ಸಾಲಿಗನು ಬಂದು ಕೇಳುವಾಗ ಕಿಬ್ಬದಿಯ ಕೀಲು ಮುರಿದಂತೆ ಸರ್ವಜ್ಞ ಎನ್ನುವುದು.

ನೋಡಿ ಇದೊಂದು ಉದಾಹರಣೆಯಷ್ಟೆ. ಕೊರಗಿ-ಕೊರಗಿ ಸಾಯುವ ಇಂತಹ ಮಲ್ಲಪ್ಪಗಳು ಕೋಟ್ಯಾಂತರ ಈ ದೇಶದಲ್ಲಿ.

ಹೀಗೆ.... ಸಾಲದ ಭಾದೆಯಿಂದಾಗಿ ಆತ್ಮಹತ್ಯೆ - ಹತ್ಯೆ-ಕೊರಗು ಮುಂತಾಗಿ ಪಟ್ಟಿ ಬೆಳೆಯುತ್ತದೆ.

ಭೂಮಿಯ ಜೊತೆ ಅವಿನಾಭಾವ ಸಂಬಂಧ ಹೊಂದಿರುವ ನಮ್ಮ ರೈತರು-ತಾವು ಸತ್ತರೂ ಈ ನಮ್ಮ ಮಣ್ಣೊಳಗೆ ಎಂದುಕೊಳ್ಳುವ ಭಾವುಕರು. ಆ ರೀತಿಯ ಭಾವನಾತ್ಮಕ ಸಂಬಂಧವು ಮುರಿದು ಸ್ವಾತಂತ್ರ್ಯದಿಂದ ಪಾರತಂತ್ರ್ಯದೆಡೆಗೆ.......... ಕೂಲಿಕಾರರ ಸಾಲಿಗೆ ತಳ್ಳಲ್ಪಡುವ ನಿರ್ದಾಕ್ಷಿಣ್ಯವಾದ ಈ ಭಾದೆಯು.. ಭೂಮಿ ಮಾರಾಟ ಮಾಡಿದಾಗಲೂ ತೀರದ ಸಾಲವೂ ಅವನನ್ನು ಈ ರೀತಿಯ ಆತ್ಮಹತ್ಯೆಯಂತಹ ಕ್ರಮಗಳಿಗೆ ಕೊಂಡೊಯ್ಯುವುದನ್ನು ಕಾಣಬಹುದಾಗಿದೆ.

ಸಾಲದ ಸುಳಿಗೆ ತಳ್ಳಿದವರಾರು?

ರಾಜೀವ್‌ಗಾಂಧಿಯವರ ಕಾಲದಿಂದಲೇ ದೇಶದ ಭೂಮಾಲಕ ಬಂಡವಾಳದಾರರನ್ನು ಮತ್ತಷ್ಟು ಕೊಬ್ಬಿಸಲು ಅಂತರ್‌ರಾಷ್ಟ್ರೀಯ ಹಣಕಾಸು ಸಂಸ್ಥೆ ಹಾಗೂ ವಿಶ್ವಬ್ಯಾಂಕ್‌ಗಳ ಸಾಮ್ರಾಜ್ಯಶಾಹಿ ಶಕ್ತಿಗಳ ಒತ್ತಡಕ್ಕೆ ಮಣಿದು ನಮ್ಮ ದೇಶದ ಕಾರ್ಷಿಕ ಹಾಗೂ ಕೈಗಾರಿಕಾ ಬಿಕ್ಕಟ್ಟು ತೆಗೆದುಹಾಕುವುದಾಗಿ ಹೇಳುತ್ತಾ, ಹೊಸ ಆರ್ಥಿಕ ನೀತಿ - ಹೊಸ ಕೃಷಿ ನೀತಿಗಳು - ಹೊಸ ಕೈಗಾರಿಕಾ ನೀತಿ - ಉದಾರ ವಾದಿ ನೀತಿ ಸಾರ್ವಜನಿಕ ರಂಗದ ಖಾಸಗೀಕರಣ ನೀತಿ ಮುಂತಾಗಿ ಜಾರಿಗೊಳಿಸುತ್ತಾ ಮುಂದೆ ನರಸಿಂಹರಾಯರ ಆಡಳಿತದಲ್ಲಿ ಗ್ಯಾಟ್ ಒಪ್ಪಂದಗಳಿಗೆ ಮಣಿದುದು ಜಾಗತೀಕರಣ ಪ್ರಕ್ರಿಯೆಗೆ ಹೆಬ್ಬಾಗಿಲು ತೆರೆದುದು ಹಾಗೂ ಇನ್ನೂ ಕೂಡಾ ಈಗಲೂ ಮುಂದುವರೆದುದು-ದೇಶದ ಬೆನ್ನೆಲುಬನ್ನು(ರೈತನ) ಹುಡಿಗುಟ್ಟಿದೆ ಎಂಬುದೇ ಆತ್ಮಹತ್ಯೆ-ಹತ್ಯೆ-ಹತ್ಯೆ ಕೊರಗಿನಿಂದ ಹೊರಬಂದ ನಗ್ನ ಸತ್ಯವಾಗಿದೆ.

ಸಬ್ಸಿಡಿ ಕಡಿತದಿಂದಾಗಿ ಬೀಜ, ರಸಗೊಬ್ಬರ ಕ್ರಿಮಿನಾಶಕ ಔಷಧಿಗಳ ತೀವ್ರ ಬೆಲೆ ಏರಿಕೆಯಿಂದಾಗಿ, ಲಾರಿ ಬಾಡಿಗೆ, ಟ್ರಾಕ್ಟರ್ ಬಾಡಿಗೆ, ಬಸ್ ದರ, ರೈಲು ದರ ಹೆಚ್ಚಳದ ಜೊತೆ ವಿದ್ಯುತ್ ದರದ ಹೆಚ್ಚಳವೂ ಸೇರಿ ಪ್ರತಿ ಎಕರೆಯ ಉತ್ಪಾದನಾ ವೆಚ್ಚವು ಕಳೆದ 10 ವರ್ಷಗಳ ಹಿಂದಿನದಕ್ಕೆ ಹೋಲಿಸಿದರೆ ಎರಡು ಪಟ್ಟು-ಮೂರು ಪಟ್ಟಾಗಿದೆ.

ಅದಾಗಲೇ ನೇರವಾಗಿ ತುಂಡು ಭೂಮಿಯಲ್ಲಿ ಕೆಲಸ ಮಾಡುತ್ತಿದ್ದಂತ ಬಡರೈತರು ಹಳೆಯ ನೀತಿಗಳಿಗೆ ಬಲಿಯಾಗಿ ಬ್ಯಾಂಕ್-ಸೊಸೈಟಿಗಳು ನೀಡುವ ಸಾಲ ತೀರಿಸಲಾಗದೇ ಡಿಫಾಲ್ಟರ್‌ಗಳಾಗಿ-ಹೊಸ ಸಾಲಕ್ಕಾಗಿ ದುಬಾರಿ ಬಡ್ಡಿಯ ಬಡ್ಡಿ ಸಾಹುಕಾರರನ್ನು ನಂಬುವ ಪರಿಸ್ಥಿತಿಯನ್ನು ನಿರ್ಮಿಸಿತ್ತು. ಮತ್ತದೇ ಸಂದರ್ಭಕ್ಕೆ ಕೃಷಿಗೆ ನೀಡುವ ಬ್ಯಾಂಕ್‌ನ ಆದ್ಯತಾ ಸಾಲ ಶೇ 40 ರಿಂದ ಶೇ 10 ಕ್ಕಿಳಿದು ಖಾಸಗೀ ಬಡ್ಡಿ ಸಾಹುಕಾರರ ಮನೆಯ ಮುಂದೆ ಸಾಲ ಬೇಡುವವರ ಸಾಲುಗಳನ್ನೇ ನಿರ್ಮಿಸಿದೆ. ಹೀಗಾಗಿ ನೂರಕ್ಕೆ ಕೇವಲ 2 ರೂ. ತಿಂಗಳಿಗೆ ಇದ್ದ ಬಡ್ಡಿಯೂ ಅನಧಿಕೃತವಾಗಿ 5 ರೂಪಾಯಿಯಿಂದ 10 ರೂಪಾಯಿಯವರೆಗೆ ಕೆಲವೊಮ್ಮೆ 20 ರೂಪಾಯಿವರೆಗೆ ಮುಂದೊತ್ತಿ ಸಾಗುತ್ತಿದೆ.

ಕಳಪೆ ಕ್ರಿಮಿನಾಶಕಗಳು ವಿಶೇಷ ಹೊರೆಯನ್ನು ನೀಡಿ ಉತ್ಪಾದನಾ ವೆಚ್ಚವನ್ನು ಹೆಚ್ಚಿಸುತ್ತಿವೆ ಮಾತ್ರವಲ್ಲ ಇಳುವರಿಯನ್ನು ಕುಗ್ಗಿಸುತ್ತಿವೆ.

ದುಪ್ಪಟ್ಟು ಉತ್ಪಾದನಾ ವೆಚ್ಚಕ್ಕೆ ದುಪ್ಪಟ್ಟು ಖಾಸಗೀ ಸಾಲದ ಬಡ್ಡಿ ಬೆಳೆದು ಮೂರು ಪಟ್ಟು ಉತ್ಪಾದನಾ ವೆಚ್ಚ ಕುಟುಂಬದ ವರ್ಷದ ಸರಾಸರಿ ಖರ್ಚಲ್ಲದೇ ಇತರೇ ವಿಶೇಷ ವೆಚ್ಚಗಳು ಸೇರಿ.....

ಮಾರುಕಟ್ಟೆಗೆ ಬರುವಾಗ ಸಾಧಾರಣ ಕುಸಿದ ಬೆಲೆಗಳೇ ಕಳೆದ 10 ವರ್ಷಗಳಲ್ಲಿ ಅವನನ್ನು ತೀವ್ರವಾಗಿ ಆವರಿಸಿವೆ. ಹೀಗಾಗಿ "ಸಾಲ ಮಾಡಿ ಓಲೆ ತಂದೆ, ಓಲೆ ಮಾರಿ ಬಡ್ಡಿ ಕಟ್ಟಿದೆ' ಎಂಬ ಪರಿಸ್ಥಿತಿಗೆ ರೈತರು ತುತ್ತಾಗುತ್ತಿದ್ದಾರೆ.

ಮಾರುಕಟ್ಟೆಯ ನೀತಿಯನ್ನು ದಲ್ಲಾಳಿಗಳ - ವ್ಯಾಪಾರಗಾರರ ಮುಕ್ತ ಶೋಷಣೆಗೆ ಬಿಡಲಾಗಿದೆ... ಕೇಂದ್ರ - ರಾಜ್ಯ ಸರ್ಕಾರಗಳ ಹಿಡಿತವೇ ಇಲ್ಲವಾಗಿದೆ.

ಪರಿಣಾಮವಾಗಿ ಗ್ರಾಮೀಣ ಪ್ರದೇಶದಲ್ಲಿ ಬಡ್ಡಿ ಸಾಹುಕಾರರು ವಿಶೇಷವಾಗಿ ಬೆಳೆದು ಬರುತ್ತಿದ್ದಾರೆ. ಔಷಧಿ-ಗೊಬ್ಬರದ ಅಂಗಡಿಗಳ ಮಾಲಕರು ಈ ರೈತರ ಮೇಲೆ ತೀರಾ ಹಿಡಿತ ಸಾಧಿಸಿ ಮೆರೆಯುತ್ತಿದ್ದಾರೆ - ಈ ನೆಲೆಯಿಂದ ದಾಳಿ-ದಬ್ಬಾಳಿಕೆಗಳು ಇತ್ತೀಚಿಗೆ ಹೆಚ್ಚಾಗುತ್ತಿರುವುದೇ ಇದಕ್ಕೆ ಸಾಕ್ಷಿ.

ಒಂದು ವರ್ಷದ ಸಾಲ ಉಳಿಯಿತೆಂದರೆ ತೀರಿಸಲು ನಿರಂತರ 4-5 ವರ್ಷಗಳ ಕಾಲ ಉತ್ತಮ ಬೆಲೆಯ ಫಸಲು ಬರಬೇಕೆಂಬುದು ರೈತರ ಆತಂಕ-ಆಗಲೂ ಮಾರುಕಟ್ಟೆ ಕೈ ಕೊಟ್ಟರೆ ಇದೇ ಗತಿ ನಮ್ಮದೆಂಬ ಅಳಲು ಹೊಸ ಆರ್ಥಿಕ ನೀತಿ - ಹೊಸ ಕೃಷಿ ನೀತಿ - ಉದಾರವಾದಿ ನೀತಿ - ಸಾಲ ನೀತಿ-ಸಾರ್ವಜನಿಕ ರಂಗದ ಖಾಸಗೀಕರಣ ನೀತಿ - ಜಾಗತೀಕರಣದ ನೀತಿಯ ಫಲವಿದು ಎಂಬುದನ್ನು ಅರಿಯದ ರಾಜಕಾರಣದಿಂದ ದೂರವಿರುವ ರೈತರದು.

ಹೀಗಾಗಿ 2-3 ವರ್ಷ ಸಾಲ ನಿಂತರೆ ಸಾಕು, ಬಡ್ಡಿಗೆ ದುಡಿದು ದುಡಿದು ಎದುರುಸಿರು ಬಿಡುತ್ತಿರುವಾಗ ಬೆಳೆ ನಷ್ಟಗಳು ಸೇರಿದರೆ ಬದುಕುವ ಮಾನವಂತ ದಾರಿಗಳೆಲ್ಲಾ ಮಾಯವಾದಾಗ ಇರುವ ಹೊಲವನ್ನು ಮಾರಿದರೂ ಸಾಲ ತೀರಲಾರದೆಂದಾಗ ಅವನ ಹತ್ತಿರ ಇರುವುದೊಂದೇ ಪರಿಹಾರ-ಪಲಾಯನ, ಆತ್ಮಹತ್ಯೆ.

ಹೇಡಿಯೆಂದಿರಾ? ಥಲದಂಕ-ಮಲ್ಲ!!

ಸಾಲದ ಬಾಧೆ ತಾಳದೇ ಆತ್ಮಹತ್ಯೆ ಮಾಡಿಕೊಳ್ಳುವುದು ಹೇಡಿತನವೆನ್ನುವಿರಾ! ನಿಜವಾಗಲೂ ಅವರ ಅರ್ಥದಲ್ಲಿ ಹೇಡಿಯಲ್ಲ! ಗ್ರಾಮೀಣ ಪ್ರದೇಶದ ರೈತರಲ್ಲಿ ಸಾಲವನ್ನು ತೀರಿಸಲು ತನ್ನ ತುಂಡು ಭೂಮಿಯಿಂದ ಸಾಧ್ಯವಿಲ್ಲವೆನ್ನುವಾಗ ಮತ್ತೆರಡು ಎಕರೆ ಗುತ್ತಿಗೆ ಪಡೆದು ಬೆಳೆದು ತೀರಿಸಬೇಕೆಂಬ ಛಲ ಸುಮಾರಾಗಿ ಪ್ರಚಲಿತದಲ್ಲಿದೆ.... ಹೀಗಾಗಿ ಇತ್ತೀಚೆಗೆ ಗ್ರಾಮೀಣ ಪ್ರದೇಶದಲ್ಲಿ ಗೇಣಿದಾರರ ಸಂಖ್ಯೆ ವ್ಯಾಪಕವಾಗಿ ಬೆಳೆಯುತ್ತಿದೆ. ಗೇಣಿಯೋ ದುಬಾರಿಯಾಗಿದೆ. ಬೆಳೆಯೊಂದಕ್ಕೆ ಪ್ರತಿ ಎಕರೆಗೆ 3 ಸಾವಿರದಿಂದ 10 ಸಾವಿರ ರೂಪಾಯಿಯವರೆಗೆ ನೀಡುವ ಪದ್ಧತಿಯನ್ನು ಬಳ್ಳಾರಿ ಜಿಲ್ಲೆಯಲ್ಲಿ ಸಾಮಾನ್ಯವಾಗಿ ಕಾಣಬಹುದಾಗಿದೆ.

ತನ್ನ ಹೊಲದಲ್ಲಿ ದುಡಿದು ಬರುವ ಆದಾಯ ಕುಟುಂಬ ನಿರ್ವಹಣೆಗೆ ಸಾಲದೆಂದು ಹಳೆಯ ಸಾಲ-ಬಡ್ಡಿ ತೀರಿಸಲು ಹೊಸ ಭೂಮಿ ಬೇಕೆಂದು ಸುಮಾರು 12 ಎಕರೆ ಗುತ್ತಿಗೆ ಪಡೆದು ಸಾಗುವಳಿಗೆ ತೊಡಗಿ 1,70,000 ಸಾಲ

ಮಾಡಿಕೊಂಡು ಅದಕ್ಕೆ ಸೇರಲಿರುವ ಬಡ್ಡಿಯು ಸೇರಿ ತೀರಿಸಲು ಇರುವ ಸ್ವಂತ ಭೂಮಿ 4 ಎಕರೆಯನ್ನು 2 ಬಾರಿ ಮಾರಾಟ ಮಾಡಿದರೂ ತೀರಿಸಲಾಗದೆಂದು ಅರಿತು ಭವಿಷ್ಯತ್ತು ಅಂಧಕಾರವಾಗಿ ಕಾಣಿಸಿ ಬೋಜರಾಜ್ (37) (ಬೀದರ್ ಜಿಲ್ಲೆ) 14.02, 1998 ರಂದು ಆತ್ಮಹತ್ಯೆ ಮಾಡಿಕೊಂಡನೆಂಬ ಸತ್ಯಾಂಶ ಸಿಪಿಐ(ಎಂ) ಶಾಸಕರಾದ ಕಾಂ।। ಜಿ.ವಿ.ಎಸ್.ರವರ ತಂಡದ ಪರಿಶೀಲನೆಯಿಂದ ಅವರು ಕೊಟ್ಟ ವರದಿಯಿಂದ ಹೊರಬರುತ್ತದೆ.

ಒಮ್ಮೆ ಆಲೋಚಿಸಿ! ಯಾವುದೇ ರೈತ ತನ್ನ ಸ್ವಂತ ಜಮೀನು 4 ಎಕರೆ ಇದ್ದು ಕೂಡಲೇ 12 ಎಕರೆ ಜಮೀನನ್ನು ಒಂದೇ ಬಾರಿ ಸಾಗುವಳಿಗೆ (ಗುತ್ತಿಗೆ-ಬಟಾಯಿ) ತೊಡಗಲು ಸಾಧ್ಯವಿಲ್ಲ - ಅದು ಹೀಗೆಯೇ ಮುನ್ನಡೆಯುವುದು.

4 ಎಕರೆಯ ಜಮೀನಿನ ದುಡಿಮೆ ಜೀವನಕ್ಕೆ ಸಾಲದು - ಸಾಲ ತೀರಿಸದು - ಇನ್ನಷ್ಟು ಸಾಲ ಮಾಡಿ ಮತ್ತಷ್ಟು ಜಮೀನನ್ನು ಸಾಗುವಳಿಗೆ ಪಡೆಯಬೇಕು! ಅದರಿಂದಲೂ ತೀರದಾದಾಗ ಮರಳಿ ಮತ್ತೆರಡು ಪಟ್ಟು ಬಟಾಯಿಗೆ ಜಮೀನು ಪಡೆಯುವುದು.

ಹೀಗೆ ಕೇಂದ್ರ-ರಾಜ್ಯ ಸರ್ಕಾರಗಳು ಜಾರಿಗೆ ತಂದ ಹೊಸ ಆರ್ಥಿಕ - ಉದಾರವಾದಿ - ಕೃಷಿ ನೀತಿಗಳನ್ನು ಪರಿಣಾಮಗಳನ್ನು ಭೂಸಾಗುವಳಿಯನ್ನು ತನ್ನ ಶಕ್ತಿ ಮೀರಿ ವಿಸ್ತರಿಸುತ್ತಾ ಸೋಲಿಸಲು ತೀವ್ರ ಸೆಣಸುವ ಈ ಹೊಸ ಗೇಣಿದಾರ-ರೈತ-ಛಲದಂಕ ಮಲ್ಲನಲ್ಲದೇ ಹೇಡಿಯಾಗಬಲ್ಲನೇ?

ಹೊಸ ಆರ್ಥಿಕ ನೀತಿಯನ್ನು - ಹೊಸ ಕೃಷಿ ನೀತಿಯನ್ನು ಜಾರಿಗೊಳಿಸುವಾಗ ಆಳುವ ವರ್ಗಗಳು ಏನನ್ನು ನಿರೀಕ್ಷಿಸಿದ್ದವೋ ಅದೇ ಜರುಗುತ್ತಿದೆ.... ಈ ನೀತಿಗಳನ್ನು ಜಾರಿಗೊಳಿಸುವಂತೆ ಒತ್ತಾಯಿಸಿದ ಐಎಂಎಫ್-ವಿಶ್ವಬ್ಯಾಂಕ್ ಧಣಿಗಳು ಆತ್ಮಹತ್ಯೆ ಪ್ರಕರಣಗಳಿಂದ ಭಾರತದೊಡನೆ ತಮ್ಮ ನಿರೀಕ್ಷೆಯ ಫಲ ಕೈಗೂಡುತ್ತಿರುವುದೆಂದು ಗಹಗಹಿಸಿ ಪಾರ್ಟಿ ನಡೆಸುತ್ತಿರಬಹುದು.

ನರಸಿಂಹರಾವ್ - ಮನಮೋಹನ ಸಿಂಗರು, ಚಿದಂಬರಂಗಳ ಮುಖದಲ್ಲಿ ಹುಸಿ ನಗೆ ಸುಳಿಯುತ್ತಿರಬಹುದು.

ಆತ್ಮಹತ್ಯೆ ಪರಿಹಾರವಲ್ಲ!

ಹೌದು! ಆತ್ಮಹತ್ಯೆ ಪರಿಹಾರವಲ್ಲ!

ಹೊಸ ಆರ್ಥಿಕ ನೀತಿ, ಹೊಸಕೃಷಿ ನೀತಿ ಹಾಗೂ ಉದಾರವಾದಿ ನೀತಿಗಳನ್ನು, ಸಾಲ ನೀತಿಯನ್ನು ಮಾರುಕಟ್ಟೆ ನೀತಿಯನ್ನು ಸೋಲಿಸುವುದೊಂದೇ ಸುಗಮ ಬದುಕಿನ ಹಾದಿ. ಅಖಿಲ ಭಾರತ ಕಿಸಾನ್ ಸಭಾ ಸೂಚಿಸುವ ಪರ್ಯಾಯ ಕೃಷಿ ನೀತಿಯೊಂದೇ ಬದಲಿದಾರಿ! ಪ.ಬಂಗಾಳದಂತೆ ಸಮಗ್ರ ಭೂಸುಧಾರಣೆ ಜಾರಿಗೊಳಿಸುವುದು ರೈತರ ಪರ ಸಾಲ ನೀತಿ ಬದಲಿಸುವುದು; ರೈತರ ಬೆಳೆಗೆ ನ್ಯಾಯ ಬೆಲೆ ಸಿಗುವಂತಹ ಮಾರುಕಟ್ಟೆ ನೀತಿಯನ್ನು ರೂಪಿಸುವುದು; ಕಡಿಮೆ ದರದಲ್ಲಿ ರಸಗೊಬ್ಬರ ಕ್ರಿಮಿನಾಶಕ, ಬೀಜ ಉತ್ತಮ ಗುಣಮಟ್ಟದಲ್ಲಿ ಒದಗಿಸುವುದು... ಕಳಪೆ ದರ್ಜೆಯವನ್ನು ನಿಯಂತ್ರಿಸಲು ತೀಕ್ಷ್ಣವಾದ ಕಾನೂನು ತರುವುದು, ಬಡರೈತರ ಸಾಲ ಮನ್ನಾ ಮಾಡುವುದೂ - ದೊಡ್ಡ ರೈತರ ಸಾಲ-ದೀರ್ಘಾವಧಿಯಾಗಿ ಪರಿಗಣಿಸಿ ಬಡ್ಡಿ ಮನ್ನ ಮಾಡಿ ಎಲ್ಲರಿಗೂ ಹೊಸ ಸಾಲ ನೀಡುವುದು-ಮುಂದಿನ ಬೆಳೆಗೆ ಉಚಿತ ಬೀಜ ಹಂಚುವುದು ಇವುಗಳಿಗಾಗಿ ರೈತರೆಲ್ಲಾ ಒಗ್ಗೂಡಿ ಹೋರಾಡುವುದೊಂದೇ ಪರಿಹಾರದ ದಾರಿ

ಕಳೆದ ವರ್ಷದ 'ಕನಸಿನ ಬಜೆಟ್' ಏನು ಕೊಟ್ಟಿತು?

ಅದನ್ನು 'ಕನಸಿನ ಬಜೆಟ್' ಎಂದು ಹಾಡಿ ಹೊಗಳಿದವರೂ ಈಗ ಹತಾಶರಾಗಿದ್ದಾರೆ ಎನ್ನುತ್ತಾರೆ ಸಿಪಿಐ(ಎಂ) ನ ಪೊಲಿಟ್‌ಬ್ಯೂರೋ ಸದಸ್ಯರಾದ **ಸೀತಾರಾಂ ಯೆಚೂರಿ.** ಈ ವರ್ಷದ ಬಜೆಟ್ ಮೊದಲು ಒಂದು ಹಿನ್ನೋಟ

ಕಳೆದ ಮಾರ್ಚಿನಲ್ಲಿ ಸಂಯುಕ್ತ ರಂಗ ಸರ್ಕಾರದ ಹಣಕಾಸು ಮಂತ್ರಿ ಚಿದಂಬರಂ ಮಂಡಿಸಿದ ಬಜೆಟ್ ಸುವರ್ಣಯುಗವನ್ನೇ ಆರಂಭಿಸಿದ 'ಕನಸಿನ ಬಜೆಟ್' ಎಂದು ಉದ್ಯಮಿಗಳು ಹಾಡಿ ಹೊಗಳಿದರು. ಸಿಪಿಐ(ಎಂ) ಮಾತ್ರ ಸಂಯುಕ್ತ ರಂಗದ ಭಾಗವಾಗಿದ್ದೂ ಆ ಬಜೆಟ್ಟಿನ ಕಾರ್ಯತಂತ್ರವೆಂದರೆ ಶ್ರೀಮಂತರಿಗೆ ರಿಯಾಯ್ತಿಗಳನ್ನು ನೀಡಿ ಬಡವರನ್ನು ಹಿಂಡುವಂತದ್ದು ಎಂದು ಎಚ್ಚರಿಸಿತ್ತು. 'ಕನಸಿನ ಬಜೆಟ್' ಬಗ್ಗೆ ಕುಣಿದಾಡಿದ್ದವರು ಈ ಬಜೆಟ್ ಬರುವ ವೇಳೆಗೆ ಸಂಪೂರ್ಣ ಹತಾಶರಾಗಿದ್ದಾರೆ - ಎಷ್ಟೆಂದರೆ ಇತ್ತೀಚಿಗೆ ಸಿಐಐ (ಭಾರತೀಯ ಉದ್ದಿಮೆಗಳ ಮಹಾ ಒಕ್ಕೂಟ) ಸಭೆಯಲ್ಲಿ ಹೊಸ ಪ್ರಧಾನ ಮಂತ್ರಿಗಳ ಬಾಯಿಂದ ಉದುರಿದ ಮಾತುಗಳಿಗೆಲ್ಲಾ ಕೈ ಚಪ್ಪಾಳೆ, ಅವು ಕೇವಲ ಶಬ್ದಾಡಂಬರಗಳು, ಅವುಗಳಲ್ಲಿ ಸಾರಾಂಶ ಏನೂ ಇಲ್ಲ ಎಂದು ತಿಳಿದಿದ್ದು ಕೂಡಾ!

"1996-97 ರಲ್ಲಿ ಕಂಡ ಕೈಗಾರಿಕಾ ಇಳಿತ 1997-98 ರಲ್ಲಿ ಮುಂದುವರಿಯಿತು. ಹಿಂದಿನ ವರ್ಷ 8% ರಷ್ಟು ಬೆಳವಣಿಗೆ ದಾಖಲು ಮಾಡಿದ ಕೃಷಿ ವಲಯ ನಕಾರಾತ್ಮಕ ಬೆಳವಣಿಗೆ ದಾಖಲಿಸಬಹುದು. ಬೆಳವಣಿಗೆ ಇನ್ನಷ್ಟು ಇಳಿದು 3% ಕ್ಕಿಂತಲೂ ಕಮ್ಮಿಯಾಗಬಹುದು. 7% ರಷ್ಟು ಬೆಳವಣಿಗೆ ದರದಿಂದ ಆರಂಭವಾದ ವರ್ಷದ 5% ರೊಂದಿಗೆ ಮುಗಿಯಬಹುದು" ಇದು ಸಿಐಐ ಕಳೆದ ಒಂದು ವರ್ಷದ ಆರ್ಥಿಕದ ಬಗ್ಗೆ ವ್ಯಕ್ತಪಡಿಸಿರುವ ದುಮ್ಮಾನ.

ಸಿಪಿಐ(ಎಂ) ಹೊಸ ಆರ್ಥಿಕ ನೀತಿಗಳನ್ನು ಐಎಂಎಫ್ - ವಿಶ್ವಬ್ಯಾಂಕ್ ಆದೇಶಗಳಿಂದ ಆರಂಭಿಸಿದಾಗಲೇ ತನ್ನ ವಿರೋಧವನ್ನು ಸ್ಪಷ್ಟ ಮಾತುಗಳಲ್ಲಿ ಹೇಳಿತ್ತು. ಇದು ದೇಶದ ಆರ್ಥಿಕ ಸಾರ್ವಭೌಮತ್ವವನ್ನು ಅಪಾಯಕ್ಕೆ ಸಿಲುಕಿಸುವುದಲ್ಲದೆ ದುಡಿಯುವ ಜನಗಳ ಮೇಲೆ ಕಷ್ಟ-ಕೋಟಲೆಗಳನ್ನು ಹೇರುತ್ತದೆಂದು ಹೇಳಿತ್ತು. ನಿರ್ದಿಷ್ಟವಾಗಿ ಸಿಪಿಐ(ಎಂ) ನಾಲ್ಕು ಅಂಶಗಳತ್ತ ಗಮನ ಸೆಳೆದಿತ್ತು.

- ಮಾರುಕಟ್ಟೆ ಶಕ್ತಿಗಳ ಮರ್ಜಿಗೆ ಆರ್ಥಿಕವನ್ನು ಬಿಟ್ಟು ಸರಕಾರ ತನ್ನ ಜವಾಬ್ದಾರಿಯಿಂದ ತಪ್ಪಿಸಿಕೊಂಡರೆ ಆರ್ಥಿಕ ಮೂಲರಚನೆಯಲ್ಲಿ ತೀವ್ರ ಬಿಕ್ಕಟ್ಟ ಹಾಗೂ ಬೇಡಿಕೆಯಲ್ಲಿ ತೀವ್ರ ಇಳಿತ ಉಂಟಾಗುತ್ತದೆ.
- ಸರಕಾರ ಸಾರ್ವಜನಿಕ ಆರೋಗ್ಯ, ಶಿಕ್ಷಣ, ಆಹಾರ ಭದ್ರತೆ ಇತ್ಯಾದಿ ತನ್ನ ಸಾಮಾಜಿಕ-ಆರ್ಥಿಕ ಜವಾಬ್ದಾರಿಗಳನ್ನು ಕೈಬಿಟ್ಟಂತಾಗುತ್ತದೆ.
- ಲಂಗುಲಗಾಮಿಲ್ಲದ ಉದಾರೀಕರಣ ಹಾಗೂ ವಿದೇಶಿ ಬಂಡವಾಳ ಪ್ರವೇಶದಿಂದ ದೇಶಿ ಉದ್ದಿಮೆಗಳ ಅಸ್ತಿತ್ವಕ್ಕೆ ಸಂಚಕಾರ ಬರುತ್ತದೆ.
- ಸಾರ್ವಜನಿಕ ವಲಯದ ವಿಚಾರಹೀನ ಖಾಸಗೀಕರಣವೆಂದರೆ ಸಾಲ ತೀರಿಸಲು ಮನೆಯ ಪಾತ್ರೆ-ಪಗಡೆಗಳನ್ನು ಮಾರಿದಂತೆಯೇ ಸರಿ. ದೇಶವನ್ನು ಅಡವಿಡುವ ಕ್ರಮ ಇದು.

'ಹಣಕಾಸು ಕೊರತೆ'ಯನ್ನು ನಿರ್ದಿಷ್ಟ ಮಿತಿಯೊಳಗಿಡಬೇಕೆಂಬುದು ಐಎಂಎಫ್ ನ ಒಂದು ಶರತ್ತು. ಇದು ಸಾಲ ಕೊಡುವವನ ಸ್ವಾರ್ಥದ ಶರತ್ತು ಎಂದು ಯಾರಾದರೂ ಕಾಣಬಹುದು. ತಾನು ಕೊಟ್ಟ ಸಾಲ, ಅದಕ್ಕೆ ಬಡ್ಡಿ ತೆರಲು ಸರಕಾರ ತನ್ನ ಖರ್ಚು ಕಡಿಮೆ ಮಾಡಲಿ ಎಂಬ ಅದರ ಸ್ವಾರ್ಥದ ವಿಚಾರ ನಮ್ಮ ಸರಕಾರಕ್ಕೆ, ಉದ್ಯಮಿಗಳಿಗೆ ವೇದವಾಕ್ಯವಾಗಿಬಿಟ್ಟಿದೆ.

ಯಾರಿಗೆ ಈ ಬಳಕೆ ವಸ್ತುಗಳ ಅಗತ್ಯವಿತ್ತೋ ಅವರನ್ನು ಬೆಲೆ ಏರಿಕೆ, ನಿರುದ್ಯೋಗದ ಮೂಲಕ ಹಿಂಡುತ್ತಾ, ಈಗಾಗಲೇ ಟಿ.ವಿ., ಫ್ರಿಜ್‌ಗಳಂತಹ ಬಳಕೆ ವಸ್ತುಗಳನ್ನು ಹೊಂದಿರುವವರಿಗೇ ಹೆಚ್ಚಿನ ರಿಯಾಯ್ತಿ ನೀಡಿದರೆ ಇನ್ನೇನಾಗಲು ಸಾಧ್ಯ? ಬೇಡಿಕೆ ಹೆಚ್ಚಲು ಹೇಗೆ ಸಾಧ್ಯ?
ಭಾರತದ ಆರ್ಥಿಕವನ್ನು ಬಾಧಿಸುತ್ತಿರುವ ಮೂಲಭೂತ ವೈರುಧ್ಯ ಇದೇ. ರಫ್ತು-ಆಧಾರಿತ ಕಾರ್ಯತಂತ್ರದಿಂದ ಈ ವೈರುಧ್ಯ ಪರಿಹಾರವಾಗುವಂತದ್ದಲ್ಲ, ಅದರ ಬದಲು ಬೇಡಿಕೆಗಳನ್ನು ಹೆಚ್ಚಿಸುವ ಕಾರ್ಯತಂತ್ರದತ್ತ ಗಮನ ಹರಿಸುವುದು ಅಗತ್ಯ

ಇವನ್ನೆಲ್ಲಾ ಬದಲಾಗಲು ನಿರಾಕರಿಸುವವರ ಹಳಸಲು ತಿಳುವಳಿಕೆ ಎಂದಿದ್ದ ಮಹಾ-ಮಹಾ ಉದ್ಯಮಿಗಳೂ ಈಗ ತಾವೇ ಬದಲಾಗಿದ್ದಾರೆ ಎಂಬುದನ್ನು ಸಿಐಐ ನ ಹಿನ್ನೆಲೆ ಪ್ರಬಂಧ ನೋಡಿದರೆ ಕಾಣುತ್ತದೆ. ಇದು ಸ್ವಾಗತಾರ್ಹ. ಆರು ವರ್ಷಗಳ ಅನುಭವದ ನಂತರ ಈ ಮಂದಿ ಆರ್ಥಿಕ ಹಾಗೂ ಸಾಮಾಜಿಕ ಮೂಲರಚನೆಯನ್ನು ಬೆಳೆಸಲು ಹಾಗೂ ಬೇಡಿಕೆ ಹೆಚ್ಚಿಸಲು ಸರಕಾರ ತನ್ನ ಖರ್ಚನ್ನು ಹೆಚ್ಚಿಸಬೇಕು ಎಂದು ಈಗ ಒಪ್ಪಿಕೊಳ್ಳುತ್ತಾರೆ. ಆರು ವರ್ಷಗಳ ಹಿಂದೆ ಸರ್ಕಾರ ಖರ್ಚನ್ನು ಇಳಿಸಬೇಕು ಎಂದು ಒತ್ತಿ-ಒತ್ತಿ ಹೇಳುತ್ತಿದ್ದವರು ಇವರು. ಹಿಂದಿನ ಬಜೆಟ್‌ಗಳಲ್ಲಿ ಆಮದು ಸುಂಕಗಳನ್ನು ಕಡಿತ ಮಾಡಿದ್ದನ್ನು ಸ್ವಾಗತಿಸಿದ್ದ ಇವರು ಈಗ ಸ್ಥಳೀಯ ಉದ್ದಿಮೆಗಳ ರಕ್ಷಣೆಗಾಗಿ 5% ಕಸ್ಟಮ್ಸ್ ಸುಂಕ ಹಾಕಬೇಕೆಂದೂ ಹೇಳುತ್ತಿದ್ದಾರೆ. ಇಷ್ಟೇ ಅಲ್ಲ, 'ಸಾರ್ವಜನಿಕ ವಲಯದ ಖಾಸಗೀಕರಣದ ಅಗತ್ಯವೇನಿಲ್ಲ, ಅತೀ ಅಗತ್ಯವಾದ ಸ್ವಾಯತ್ತತೆಯನ್ನು ಮಾತ್ರ ಹಿಡಿದಿಡಬಾರದು. ಸಾರ್ವಜನಿಕ ವಲಯದ ಘಟಕಗಳನ್ನು ಪುನರುಜ್ಜೀವನಗೊಳಿಸಿ ಅವುಗಳಲ್ಲಿನ ಅತ್ಯುತ್ತಮ ಸಾಮರ್ಥ್ಯವನ್ನು ಪ್ರದರ್ಶಿಸುವ ಅಗತ್ಯವಿದೆ" ಎಂದಿದೆ ಸಿಐಐ! ಇವೆಲ್ಲಾ ನಾವು ಕಳೆದ ಹಲವು ವರ್ಷಗಳಿಂದ ಹೇಳುತ್ತಾ ಬಂದ 'ಹಳಸಲು' ತಿಳಿವಳಿಕೆಗಳಿಗೆ ಎಷ್ಟು ಸಮೀಪವಿದೆಯಲ್ಲವೇ?

ಆದರೆ ಹೀಗೆ ಶಿಕ್ಷಣ ಮತ್ತು ಉದ್ಯೋಗ ಹೆಚ್ಚಿಸುತ್ತಾ ಆರ್ಥಿಕವನ್ನು ಮತ್ತೆ ಬೆಳವಣಿಗೆಯ ದಾರಿಗೆ ತರುವ ಬಗ್ಗೆ ಆಗ್ರಹಪಡಿಸುವ ಸಿಐಐ ಗೆ ಐಎಂಎಫ್ ವಿಧಿಸಿದ ಕೆಲವು ಮಾನಸಿಕ ಮಿತಿಗಳಿಂದ ಹೊರಬರಲು ಇನ್ನೂ ಆಗಿಲ್ಲ. ಇವುಗಳಲ್ಲಿ ಒಂದು 'ಹಣಕಾಸು ಕೊರತೆ' ಎಂಬುದು ಭಾರೀ ಕೆಟ್ಟದ್ದು ಎಂಬ ವಿಚಾರ. ಇನ್ನೊಂದು ತೆರಿಗೆ ದರ ಕಮ್ಮಿ ಮಾಡಿದರೆ ಸರಕಾರದ ಆದಾಯ ಹೆಚ್ಚುತ್ತದೆ ಎಂಬುದು.

'ಹಣಕಾಸು ಕೊರತೆ'ಯನ್ನು ನಿರ್ದಿಷ್ಟ ಮಿತಿಯೊಳಗಿಡಬೇಕೆಂಬುದು ಐಎಂಎಫ್ ನ ಒಂದು ಶರತ್ತು. ಇದು ಸಾಲ ಕೊಡುವವನ ಸ್ವಾರ್ಥದ ಶರತ್ತು ಎಂದು ಯಾರಾದರೂ ಕಾಣಬಹುದು. ತಾನು ಕೊಟ್ಟ ಸಾಲ, ಅದಕ್ಕೆ ಬಡ್ಡಿ ತೆರಲು ಸರಕಾರ ತನ್ನ ಖರ್ಚು ಕಡಿಮೆ ಮಾಡಲಿ ಎಂಬ ಅದರ ಸ್ವಾರ್ಥದ ವಿಚಾರ ನಮ್ಮ ಸರಕಾರಕ್ಕೆ, ಉದ್ಯಮಿಗಳಿಗೆ ವೇದವಾಕ್ಯವಾಗಿ ಬಿಟ್ಟಿದೆ.

ಸರಕಾರದ ಖರ್ಚು ಆದಾಯಕ್ಕಿಂತ ಹೆಚ್ಚಾದರೆ ಚಲಾವಣೆಗೆ ಹೆಚ್ಚು ಹಣ ಬರುತ್ತದೆ. ಅದಕ್ಕೆ ಅನುಗುಣವಾಗಿ ಸಾಮಗ್ರಿಗಳ ಪೂರೈಕೆ ಇಲ್ಲದಿದ್ದರೆ ಆ ಸಾಮಗ್ರಿಗಳ ಬೆಲೆಯೇರುತ್ತದೆ, ಹಣದುಬ್ಬರವಾಗುತ್ತದೆ, ಆದ್ದರಿಂದ ಕೊರತೆ ಹಣಕಾಸು ಕೆಟ್ಟದ್ದು ಎಂಬುದು ಸಾಮಾನ್ಯವಾಗಿ ಪ್ರಚಲಿತವಿರುವ ವಿಚಾರ. ಆದರೆ ಬೇಡಿಕೆಗೆ ಅನುಗುಣವಾಗಿ ಪೂರೈಕೆಯಿದ್ದರೆ ಈ ರೀತಿ ಹಣದುಬ್ಬರವುಂಟಾಗುವ ಅಗತ್ಯವಿಲ್ಲ, ಬದಲಿಗೆ ಅದು ಬೆಳವಣಿಗೆಗೆ ದಾರಿ ಮಾಡಿಕೊಡುತ್ತದೆ. ಭಾರತದ ಈಗಿನ ಪರಿಸ್ಥಿತಿಯಲ್ಲಿ ಅಂದರೆ ಸತತವಾಗಿ ಕಂಡಿರುವ ಉತ್ತಮ ಮಳೆ ಹಾಗೂ ಅದರಿಂದಾಗಿ ಉತ್ತಮ ಬೆಳೆ ದಾಸ್ತಾನು, ಜತೆಗೆ ಸರಕಾರ ಹೇಳಿಕೊಳ್ಳುತ್ತಿರುವ ಉತ್ತಮ ವಿದೇಶಿ ವಿನಿಮಯ ಸ್ಥಿತಿಯಲ್ಲಿ ಪೂರೈಕೆಯನ್ನು ಹೆಚ್ಚಿಸುವುದು ಕಷ್ಟವೇನಲ್ಲ.

ಆದರೂ ಸರಕಾರ ಈ ಆರ್ಥಿಕ ಮೂಲಭೂತವಾದವೆನ್ನಬಹುದಾದ ವಿಚಾರಕ್ಕೆ ಅಂಟಿಕೊಂಡು ಖರ್ಚನ್ನು ಕಮ್ಮಿ ಮಾಡುವ ಹೆಸರಲ್ಲಿ ಜನಗಳ ಮೇಲೆ ಹೊರೆಗಳನ್ನು ಹಾಕುತ್ತಾ ಬರುತ್ತಿದೆ. ಹಣಕಾಸು ಕೊರತೆ 4.5% ವನ್ನು ದಾಟಿ 6.1% ಆಗಿದೆ ಎಂದು ಹಾಹಾಕಾರ ಮಾಡುವ ಈ ತಪ್ಪು ವಿಚಾರವನ್ನು ಕೈ ಬಿಡದೆ ದೇಶದ ಆರ್ಥಿಕದ ಹಾಗೂ ಜನಗಳ ಮೂಲಭೂತ ಅಗತ್ಯಗಳನ್ನು ಈಡೇರಿಸುವುದಾಗಲೀ, ಆಂತರಿಕ ಬೇಡಿಕೆಗಳನ್ನು ಹೆಚ್ಚಿಸಿ ಆ ಮೂಲಕ ಆರ್ಥಿಕದ ಬೆಳವಣಿಗೆಗೆ ಅನುವು ಮಾಡಿಕೊಡುವುದಾಗಲೀ ಸಾಧ್ಯವಾಗದು.

1997-98 ರಲ್ಲಿ ಹಣಕಾಸು ಕೊರತೆ 6.1% ಕ್ಕೆ ಹೆಚ್ಚಲು ಕಾರಣ ಸರಕಾರದ ರೆವಿನ್ಯೂ ಆದಾಯ ಕಮ್ಮಿಯಾಗಿರುವುದು ಎಂದೂ ಹೇಳಲಾಗುತ್ತಿದೆ. ಸರಕಾರ ಆದಾಯ, ತೆರಿಗೆ ಕಂಪನಿ ತೆರಿಗೆಗಳನ್ನು ಕಮ್ಮಿ ಮಾಡಿದರೂ, 5ನೇ ವೇತನ ಆಯೋಗದ ಶಿಫಾರಸು ಪ್ರಕಾರ ಕೇಂದ್ರ ಸರಕಾರದ ನೌಕರರಿಗೆ ವೇತನ ಹೆಚ್ಚಳ ಮಾಡಿದರೂ ಆರ್ಥಿಕದಲ್ಲಿ ಬೇಡಿಕೆಯೇರಲಿಲ್ಲವೇಕೆ? - ಇದು ಸಿಐಐ ನ್ನು ಈಗ ಬಾಧಿಸುತ್ತಿರುವ ಪ್ರಶ್ನೆ. ಐಎಂಎಫ್ ವೇದವಾಕ್ಯವನ್ನು ಬಿಟ್ಟು ಹೊರ ಬಂದರೆ ಇದಕ್ಕೆ ಉತ್ತರ ಸುಲಭ.

1997-98 ರ ಬಜೆಟ್ ಬಳಕೆಗೆ ಪ್ರೋತ್ಸಾಹ ನೀಡಿತೇನೋ ನಿಜ, ಆದರೆ ಅಂತಹ ಪ್ರೋತ್ಸಾಹ ನೀಡಿದ್ದು ಅದಾಗಲೇ ಕೊಳ್ಳುವ ಶಕ್ತಿ ಚೆನ್ನಾಗಿದ್ದವರಿಗೆ ಮಾತ್ರ. ಯಾರಿಗೆ ಈ ಬಳಕೆ ವಸ್ತುಗಳ ಅಗತ್ಯವಿತ್ತೋ ಅವರನ್ನು ಬೆಲೆ ಏರಿಕೆ, ನಿರುದ್ಯೋಗದ ಮೂಲಕ ಹಿಂಡುತ್ತಾ, ಈಗಾಗಲೇ ಟಿ.ವಿ., ಫ್ರಿಜ್‌ಗಳಂತಹ ಬಳಕೆ ವಸ್ತುಗಳನ್ನು ಹೊಂದಿರುವವರಿಗೇ ಹೆಚ್ಚಿನ ರಿಯಾಯ್ತಿ ನೀಡಿದರೆ ಇನ್ನೇನಾಗಲು ಸಾಧ್ಯ? ಬೇಡಿಕೆ ಹೆಚ್ಚಲು ಹೇಗೆ ಸಾಧ್ಯ?

ಭಾರತದ ಆರ್ಥಿಕವನ್ನು ಬಾಧಿಸುತ್ತಿರುವ ಮೂಲಭೂತ ವೈರುಧ್ಯ ಇದೇ. ರಫ್ತು-ಆಧಾರಿತ ಕಾರ್ಯತಂತ್ರದಿಂದ ಈ ವೈರುಧ್ಯ ಪರಿಹಾರವಾಗುವಂತದ್ದಲ್ಲ. ಅದರ ಬದಲು ಬೇಡಿಕೆಗಳನ್ನು ಹೆಚ್ಚಿಸುವ ಕಾರ್ಯತಂತ್ರದತ್ತ ಗಮನ ಹರಿಸುವುದು ಅಗತ್ಯ. ಇದರಲ್ಲಿ ತಕ್ಷಣವೇ ತೀಕ್ಷ್ಣ ಪ್ರಭಾವ ಬೀರಬಲ್ಲ ಒಂದು ಕ್ರಮವೆಂದರೆ ಭೂಸುಧಾರಣೆಯ ಅನುಷ್ಠಾನ. ಇದು ಸಿಪಿಐ(ಎಂ) ಸತತವಾಗಿ ಮುಂದಿಡುತ್ತಿರುವ ಕಾರ್ಯತಂತ್ರ. ವಾಸ್ತವವಾಗಿ ಇದು ಪಶ್ಚಿಮ ಬಂಗಾಳದಲ್ಲಿ ಯಶಸ್ವಿಯಾಗಿರುವ ಕಾರ್ಯತಂತ್ರ. ಈ ಕಾರ್ಯತಂತ್ರ ಒಂದೆಡೆ ಈ ಹಿಂದೆ ಅಕ್ಕಿ ಆಮದು ಮಾಡುವ ರಾಜ್ಯವನ್ನು ಈಗ ದೇಶದ ಅತ್ಯಂತ ಹೆಚ್ಚು ಭತ್ತ ಬೆಳೆಯುವ ರಾಜ್ಯವಾಗಿಸಿದರೆ, ಇನ್ನೊಂದೆಡೆ ಅದನ್ನು ದೇಶದಲ್ಲೇ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಗ್ರಾಮೀಣ ಮಾರುಕಟ್ಟೆಯಾಗಿಸಿದೆ. ಆದರೆ ನಮ್ಮ ಆಳುವ ವರ್ಗಗಳು ಈ ಅನುಭವದಿಂದ ಪಾಠ ಕಲಿಯಲಾರರು. ಏಕೆಂದರೆ ಅದು ಅವರ ವರ್ಗಮಿತ್ರರ ಭೂ ಹಿತಾಸಕ್ತಿಗಳಿಗೆ ಅಡ್ಡಿ ತರುತ್ತದೆ!

ತೆರಿಗೆ ದರ ಇಳಿಸಿದರೆ ಸರಕಾರದ ರೆವಿನ್ಯೂ ಹೆಚ್ಚುತ್ತದೆ ಎಂಬುದಾಗಲೀ, ರಫ್ತು-ಆಧಾರಿತ ಕಾರ್ಯತಂತ್ರ ಬೆಳವಣಿಗೆ ತರುತ್ತದೆ ಎಂಬುದಾಗಲೀ ಸುಳ್ಳು ಎಂಬುದು ಈ ವರ್ಷ ಮತ್ತೆ ಸಾಬೀತಾಗಿದೆ. ಈ ಕೆಳಗಿನ ಅಂಕಿ-ಅಂಶಗಳನ್ನು ನೋಡಿ

ಕೋಷ್ಟಕ - 1

ತೆರಿಗೆಗಳು	ಬಜೆಟ್‌ನಲ್ಲಿ	ಸಂಗ್ರಹಿಸಿದ್ದು	ಇಳಿತ%
ಆದಾಯ ತೆರಿಗೆ	21,700	18,700	14
ಸೀಮಾ ಸುಂಕಗಳು	52,550	41,000	22*
ಅಬಕಾರಿ ಸುಂಕಗಳು	52,200	47,000	7

* ರೂಪಾಯಿಯ ಅಪಮೌಲ್ಯವಾದರೂ

ಕೋಷ್ಟಕ-2

ನೇರ ವಿದೇಶಿ ಹೂಡಿಕೆ ಶತಕೋಟಿ ಡಾಲರುಗಳಲ್ಲಿ

ವರ್ಷ	ಮೊತ್ತ
1992	0.2
1993	0.6
1994	1.3
1995	1.9
1996	2.6

ಪಶ್ಚಿಮ ಬಂಗಾಳದ ಒಂದು ವಿಶೇಷ ವರದಿ



ಮತ್ತೊಂದು ಮಹತ್ವಪೂರ್ಣ ಪಂಚಾಯ್ತೀ ಚುನಾವಣೆ

ಕಳೆದ ಇಪ್ಪತ್ತು ವರ್ಷಗಳಿಂದ ತನ್ನ ವಿಶಿಷ್ಟ ಸಾಧನೆಗಳಿಂದಾಗಿ ದೇಶದ, ದೇಶಗಳ ಸಮಾಜ ಶಾಸ್ತ್ರಜ್ಞರ ಗಮನವನ್ನು ಸೆಳೆದಿರುವ ಪಶ್ಚಿಮ ಬಂಗಾಳದ ಪಂಚಾಯತೀ ರಾಜ್ಯ ಸಂಸ್ಥೆಗಳಿಗೆ ಈಗ ಸತತ ಆರನೇ ಬಾರಿಗೆ ನಡೆಯುತ್ತಿರುವ ಚುನಾವಣೆಗಳು ಈ ಬಾರಿಯೂ ದೇಶದ ಗಮನ ಸೆಳೆದಿವೆ. ಆದರೆ ಬೇರೊಂದು ಕಾರಣಕ್ಕಾಗಿ-ದೇಶದಲ್ಲಿ ಬದಲಾದ ಸನ್ನಿವೇಶದಲ್ಲಿ ಗ್ರಾಮೀಣ ಪಟ್ಟಭದ್ರ ಹಿತಾಸಕ್ತಿಗಳು ಅಲ್ಲಿ ಮತ್ತೆ ತಮ್ಮ ಹಿಡಿತ ಸಾಧಿಸುವಲ್ಲಿ ಎಷ್ಟು ಸಫಲವಾಗಬಹುದೇ ಎಂದು.

ಮೇ 28 ರಂದು ಪಶ್ಚಿಮ ಬಂಗಾಳದ ಮೂರು ಹಂತಗಳ ಪಂಚಾಯತೀ ರಾಜ್ಯ ವ್ಯವಸ್ಥೆಯ 58930 ಸ್ಥಾನಗಳಿಗೆ ಚುನಾವಣೆ ಗಳು ನಡೆಯಲಿವೆ. 1978 ರಿಂದ ಆರಂಭಿಸಿ ಪ್ರತಿ ನಾಲ್ಕು ವರ್ಷ ಕೊಮ್ಮೆ ತಪ್ಪದೆ ಪಂಚಾಯ್ತಿ ಚುನಾವಣೆ ಗಳನ್ನು ನಡೆಸಿದ ವಿಶಿಷ್ಟ ಸಾಧನೆ ಪಶ್ಚಿಮ ಬಂಗಾಳದ್ದು.

ಪ್ರತಿನಾಲ್ಕು ವರ್ಷಕ್ಕೊಮ್ಮೆ ಚುನಾವಣೆ ನಡೆಯುವುದಷ್ಟೇ ಅಲ್ಲ, ಪ್ರತಿ ಚುನಾವಣೆ ಯಿಂದ ಚುನಾವಣೆಗೆ ಹೆಚ್ಚೆಚ್ಚು ಆಡಳಿತ ಹಾಗೂ ಹಣಕಾಸು ಅಧಿಕಾರಗಳ ವಿಕೇಂದ್ರೀಕರಣದ ಪ್ರಕ್ರಿಯೆ ನಡೆಯುತ್ತಾ ಪ್ರಜಾಪ್ರಭುತ್ವ ನಿಜವಾದ ಅರ್ಥದಲ್ಲಿ ವಿಸ್ತಾರಗೊಂಡಿರುವುದು, ಆಳಗೊಂಡಿರು ವುದು ಕಳೆದ ಎರಡು ದಶಕಗಳ ಅಮೋಘ ಸಾಧನೆ. ಗ್ರಾಮೀಣ ಆಡಳಿತ ಮತ್ತು ಗ್ರಾಮೀಣ ಅಭಿವೃದ್ಧಿಯ ಜವಾಬ್ದಾರಿ ಗಳನ್ನು ಕಳೆದ ಇಪ್ಪತ್ತು ವರ್ಷಗಳಲ್ಲಿ ನಿರಂತರವಾಗಿ ಹೆಚ್ಚೆಚ್ಚು ವ್ಯಾಪಕವಾಗಿ ನಿರ್ವಹಿಸಿರುವ ಸಂಸ್ಥೆಗಳಿವು. ವಿವಿಧ ಯೋಜನಾ ಮತ್ತು ಯೋಜನೇತರ ಬಾಬುಗಳಲ್ಲಿ ಬಜೆಟ್ಟಿನಲ್ಲಿ ತೆಗೆದಿರಿಸಿದ 50% ಕ್ಕೂ ಹೆಚ್ಚು ಹಣ ಗ್ರಾಮೀಣ ಚುನಾಯಿತ ಸಂಸ್ಥೆಗಳಿಗೆ ವರ್ಗಾವಣೆ ಯಾಗುತ್ತಿದೆ. ಈ ರೀತಿ ಸಂಪನ್ಮೂಲಗಳ ವರ್ಗಾವಣೆ ಒಂದು ಅರ್ಥಪೂರ್ಣ ವಾಸ್ತವ ಸಂಗತಿಯಾಗುವಂತೆ ಮಾಡಲು ಜಿಲ್ಲಾ 'ಯೋಜನೆಗಳನ್ನು ರೂಪಿಸುವ ಹೊಣೆ ಕೂಡಾ ಈಗ ಪಂಚಾಯ್ತಿಗಳದ್ದು.

ಸಾಧನೆಗಳು

- ಈ ಗ್ರಾಮೀಣ ಚುನಾಯಿತ ಸಂಸ್ಥೆಗಳ ಸಾಧನೆಗಳನ್ನು ಸಂಕ್ಷಿಪ್ತವಾಗಿ ಹೀಗೆ ಪಟ್ಟಿ ಮಾಡಬಹುದು.
- ಹತ್ತು ಲಕ್ಷಕ್ಕೂ ಹೆಚ್ಚು ಭೂಮಿತಿ ಮೀರಿದ ಭೂಮಿಯನ್ನು 25 ಲಕ್ಷ ಗ್ರಾಮೀಣ ಬಡವರು ಮತ್ತು ಭೂಹೀನರಲ್ಲಿ ಹಂಚಿದ್ದು.
- 15 ಲಕ್ಷ ಭೂಹೀನ ಕೃಷಿ ಕಾರ್ಮಿಕರಿಗೆ ಬರ್ಗಾದಾರಿ ಹಕ್ಕುಗಳ ನೋಂದಾಣಿಕೆ ಹಾಗೂ ವಿತರಣೆ.
- ತಲೆಯ ಮೇಲೊಂದು ಸೂರಿರದ 5 ಲಕ್ಷ ಗ್ರಾಮೀಣ ಬಡವರಿಗೆ ಮನೆ ನಿವೇಶನದ ಹಂಚಿಕೆ.
- ಬಹಳ ಕಾಲದಿಂದ ನಿರೀಕ್ಷಿಸಿದ್ದ ಭೂಮಿಯನ್ನು ಪಡೆದ ಮೇಲೆ ಅದರಲ್ಲಿ ಪ್ರಯೋಜನಕಾರೀ ರೀತಿಯಲ್ಲಿ ಉಳುಮೆ ಮಾಡಲು ಕೃಷಿ ಲಾಗುವಾಡುಗಳ ಪೂರೈಕೆ.

150 ಸ್ಥಾನಗಳಲ್ಲಿ ಅವಿರೋಧ ಆಯ್ಕೆ

ಮೇ 28 ರಂದು ಪಶ್ಚಿಮ ಬಂಗಾಳದಲ್ಲಿ 49199 ಗ್ರಾಮ ಪಂಚಾಯ್ತಿ, 8575 ಪಂಚಾಯಿತಿ ಸಮಿತಿ ಹಾಗೂ 716 ಜಿಲ್ಲಾ ಪರಿಷತ್ ಸ್ಥಾನಗಳಲ್ಲಿ ಚುನಾವಣೆ ನಡೆಯ ಬೇಕಾಗಿದೆ. ಇದರಲ್ಲಿ 150 ಸ್ಥಾನಗಳಲ್ಲಿ ಎಡರಂಗದ ಅಭ್ಯರ್ಥಿಗಳು ಸ್ಪರ್ಧೆ ಯಿಲ್ಲದೆ ಈಗಾಗಲೇ ಆಯ್ಕೆ ಗೊಂಡಿದ್ದಾರೆ. ಪ್ರದೇಶ ಕಾಂಗ್ರೆಸ್, ತೃಣಮೂಲ ಕಾಂಗ್ರೆಸ್ ಅಥವಾ ಬಿಜೆಪಿಗೆ ನಿಲ್ಲಿಸಲು ಅಭ್ಯರ್ಥಿಗಳ ಬರವೂ ಇದಕ್ಕೆ ಒಂದು ಕಾರಣವಂತೆ!

ಇವೆಲ್ಲಕ್ಕೂ ಮುಖ್ಯವಾಗಿ ಈ ಗ್ರಾಮೀಣ ಚುನಾಯಿತ ಸಂಸ್ಥೆಗಳು ಕಿಸಾನ್ ಸಭಾ ಘಟಕಗಳ ಸಹಕಾರದೊಂದಿಗೆ ಜೋತೇದಾರ್‌ಗಳು, ಮಹಾಜನ್‌ಗಳ ಪ್ರಬಲ ಶಕ್ತಿಯನ್ನು ಎದುರಿಸಿ ನಿಂತು ಅವರ ಕಸರತ್ತುಗಳನ್ನು ವಿಫಲಗೊಳಿಸುವಲ್ಲಿ ಯಶಸ್ವಿಯಾಗಿವೆ. ಆದರೂ ಈ ದಿಕ್ಕಿನಲ್ಲಿ ಆಗಬೇಕಾದ್ದು ಬಹಳವಿದೆ.

ಎಡರಂಗದ ಪ್ರಣಾಳಿಕೆ

ಈ ಹಿನ್ನೆಲೆಯಲ್ಲಿ ಪಶ್ಚಿಮ ಬಂಗಾಳದ ಎಡರಂಗ ತನ್ನ ಚುನಾವಣಾ ಪ್ರಣಾಳಿಕೆ ಯನ್ನು ಬಿಡುಗಡೆ ಮಾಡಿದೆ. ಈ ಪ್ರಣಾಳಿಕೆ ಪ್ರದೇಶ ಕಾಂಗ್ರೆಸ್- ತೃಣಮೂಲ ಕಾಂಗ್ರೆಸ್ - ಬಿಜೆಪಿ ಕೂಟದ ಕೃಪಾಪೋಷಣೆಯಲ್ಲಿ ಪಟ್ಟಭದ್ರ ಹಿತಾಸಕ್ತಿಗಳು ಮತ್ತೆ ತಲೆ ಎತ್ತುತ್ತಿರುವುದನ್ನು ಒತ್ತಿ ಹೇಳಿರುವ ಈ ಪ್ರಣಾಳಿಕೆ ಇವನ್ನು ಏನೇ ಬರಲಿ ಎದುರಿಸ ಬೇಕು ಎಂದು ಕರೆ ನೀಡಿದೆ. ಇದಕ್ಕಾಗಿ ಒಂದು ಸಮಗ್ರ ಎಡ ಐಕ್ಯತೆ ಅನಿವಾರ್ಯ ಎಂದಿದೆ.

ಸಮಸ್ತ ಧರ್ಮನಿರಪೇಕ್ಷ- ಪ್ರಜಾಸತ್ತಾತ್ಮಕ ಶಕ್ತಿಗಳನ್ನು ಕ್ರೋಢೀಕರಿ ಸುವಲ್ಲಿ ಎಡಪಕ್ಷಗಳು ಮುತುವರ್ಜಿ ವಹಿಸಬೇಕಾದುದರ ಅಗತ್ಯವನ್ನು ಈ ಪ್ರಣಾಳಿಕೆ ಒತ್ತಿ ಹೇಳಿದೆ. ಗ್ರಾಮೀಣ ಚುನಾವಣೆಗಳಲ್ಲಿ ಈ ಪ್ರತಿಗಾಮಿ ಶಕ್ತಿಗಳು ತಮ್ಮ ಮತಪಾಲನ್ನು ಗಮನಾರ್ಹವಾಗಿ ಹೆಚ್ಚಿಸಲು ಶತಪ್ರಯತ್ನ ನಡೆಸಿರುವ ಹಿನ್ನೆಲೆಯಲ್ಲಿ ಗ್ರಾಮೀಣ ಜನಸಮೂಹಗಳು ಶ್ರಮದಿಂದ ಗೆದ್ದ ಹಕ್ಕುಗಳನ್ನು ಕ್ರೋಢೀಕರಿಸಿ ವಿಸ್ತರಿಸಬೇಕಾಗಿದೆ ಎಂದು ಎಡರಂಗದ ಪ್ರಣಾಳಿಕೆ ಹೇಳಿದೆ. ಮೂರು ಹಂತಗಳ ಪಂಚಾಯ್ತಿ ವ್ಯವಸ್ಥೆಯನ್ನು ನಡೆಸುವಲ್ಲಿ ಜನ ಸಮೂಹಗಳಿಗೇ ಹೆಚ್ಚಿನ ಪಾತ್ರ ವಹಿಸಿಕೊಡುವಂತಾಗಬೇಕು ಎಂದು ಎಡರಂಗದ ಪ್ರಣಾಳಿಕೆ ತನ್ನ ನಿಲುವನ್ನು ಸ್ಪಷ್ಟಪಡಿಸಿದೆ. ಎಡರಂಗದ ಪ್ರಣಾಳಿಕೆಯ ಕೆಲವು ಮುಖ್ಯ ಅಂಶಗಳು ಹೀಗಿವೆ.

- ರಾಜ್ಯಗಳಿಗೆ ಇನ್ನಷ್ಟು ಆಡಳಿತ ಹಾಗೂ ಹಣಕಾಸು ಅಧಿಕಾರಗಳ ವಿಕೇಂದ್ರೀಕರಣ, ಅವನ್ನು ಇನ್ನಷ್ಟು ಕೆಳ ಹಂತಗಳಿಗೆ ವಿಕೇಂದ್ರೀಕರಿಸಿ, ಗ್ರಾಮೀಣ ಸ್ವಯಮಾಡಳಿತ ಸಂಸ್ಥೆಗಳ ಅತ್ಯಂತ ಕೆಳಸ್ತರದ ಜನ ಗಳನ್ನು ಅಧಿಕಾರ ಸಂಪನ್ನಗೊಳಿಸುವುದು,
- ಪಂಚಾಯತು ಸಂಸ್ಥೆಗಳ ಮೂಲರಚನೆಯನ್ನು ಬಲಪಡಿಸುವುದು,
- 'ಗ್ರಾಮ ಸಂಸತ್' ಗಳ ಅಧಿಕಾರಗಳನ್ನು ಹೆಚ್ಚಿಸಿ ಜನಗಳಿಗೆ ಅವು ಹೆಚ್ಚು ಜವಾಬ್ದಾರಿಯಾಗಿರುವಂತೆ ಮಾಡುವುದು.
- ರಾಜ್ಯ ಮಟ್ಟದಲ್ಲಿ ಒಂದು ವಿಶೇಷ ಸೆಲ್ ನಿರ್ಮಿಸಿ ಪಂಚಾಯತಿನ ಹಣಕಾಸು ಚಟುವಟಿಕೆಗಳ ಉಸ್ತುವಾರಿ ಹಾಗೂ ಈಗ ಪಕ್ಷಾಂತರಕ್ಕೆ ಸಂಬಂಧಪಟ್ಟಂತೆ ಇರುವ ನಿಬಂಧನೆಗಳಲ್ಲಿನ ಸಡಿಲ ಅಂಶಗಳನ್ನು ಸರಿಪಡಿಸುವುದು.
- ಗ್ರಾಮೀಣ ವಿದ್ಯುತೀಕರಣ ಹಾಗೂ ಆರೋಗ್ಯ ಸೌಲಭ್ಯಗಳೂ ಸೇರಿದಂತೆ ಗ್ರಾಮಗಳಲ್ಲಿ ಸಾರ್ವಜನಿಕ ಆಸ್ತಿಗಳ ವಿಸ್ತರಣೆ.
- ಸಹಕಾರಿ ಸಂಸ್ಥೆಗಳನ್ನು ಇನ್ನಷ್ಟು ಸ್ವಾವಲಂಬಿಯಾಗಿಸುವುದು.
- ಮೂರು ಮಟ್ಟಗಳಲ್ಲಿ ಪಂಚಾಯತೀ ಸಿಬ್ಬಂದಿಯನ್ನು ಮೇಲಟ್ಟಕ್ಕೆ ಎತ್ತರಿಸುವುದು ಹಾಗೂ ತರಬೇತಿ.
- ರಾಜ್ಯದ ಕಮ್ಮಿ ಅಭಿವೃದ್ಧಿ ಹೊಂದಿದ ಪ್ರದೇಶಗಳಿಗೆ ಅಭಿವೃದ್ಧಿಯಲ್ಲಿ ಆದ್ಯತೆಗಳನ್ನು ಒದಗಿಸಲು ಒಂದು ವಿಶೇಷ ಕ್ರಮ, ಆರ್ಥಿಕವಾಗಿ ಕುಂಠಿತವಾಗಿರುವ ಜನ ವಿಭಾಗಗಳ ಉದ್ಧಾರಕ್ಕಾಗಿ ವಿಶೇಷ ಕಾರ್ಯಕ್ರಮಗಳು.

ರಾಜ್ಯದಲ್ಲಿ ಬಿಜೆಪಿ ಮತ್ತು ತೃಣಮೂಲ ಕಾಂಗ್ರೆಸ್ ಕಮಿಟಿ ಮೂಡಿ ಬಂದುದರಿಂದ ಬಲಪಂಥೀಯ ಶಕ್ತಿಗಳಲ್ಲಿ ಒಂದುಹೊಸ ಹುರುಪು ಮೂಡಿದೆ. ಅವರು ಕಾಂಗ್ರೆಸ್ ನೊಂದಿಗೆ ಪಟ್ಟಭದ್ರ ಹಿತಾಸಕ್ತಿಗಳನ್ನು ಮತ್ತೆ ಅಧಿಕಾರಕ್ಕೆ ತರಲು ಎಲ್ಲಾ ಪ್ರಯತ್ನ ನಡೆಸುತ್ತಾರೆ. ಆದ್ದರಿಂದ ಆತ್ಮಸಂತೃಪ್ತಿ ಪಟ್ಟು ಕೊಳ್ಳದೆ ಎಡ ಶಕ್ತಿಗಳು ಬಲವಾದ ಒಗ್ಗಟ್ಟು ಸಾಧಿಸಿ ಹೋರಾಡಬೇಕಾಗಿದೆ ಎಂದು ಎಡರಂಗ ಪ್ರಣಾಳಿಕೆ ಎಚ್ಚರಿಸಿದೆ. ಪಶ್ಚಿಮ ಬಂಗಾಳದ ಗ್ರಾಮೀಣ ಚುನಾವಣೆ ಗಳು ಬಿಜೆಪಿ ನೇತೃತ್ವದ ಕೇಂದ್ರ ಸರಕಾರದ ಜನ-ವಿರೋಧಿ ನೀತಿಗಳ ವಿರುದ್ಧ ರಾಷ್ಟ್ರವ್ಯಾಪಿ ಹೋರಾಟದ ಆರಂಭ ವಾಗಲಿದೆ ಎಂದು ಎಡರಂಗ ಪ್ರಣಾಳಿಕೆ ಹೇಳಿದೆ.

ಬಿರುಸಿನ ಪ್ರಚಾರ

ಕಳೆದ ಕೆಲವು ವಾರಗಳಿಂದ ಪಶ್ಚಿಮ ಬಂಗಾಳದ ಗ್ರಾಮೀಣ ಪ್ರದೇಶಗಳಲ್ಲಿ ದೊಡ್ಡ ರ್‍ಯಾಲಿಗಳು, ಸಣ್ಣ-ಸಣ್ಣ ಸಭೆಗಳು, ಮೆರವಣಿಗೆಗಳು, ಮನೆ-ಮನೆ ಪ್ರಚಾರ ವ್ಯಾಪಕವಾಗಿ ನಡೆಯುತ್ತಿದೆ.

'ಇಲ್ಲಿ ನೋಡಿ, ಇವು ನೀರು ನಿಂತ ತಗ್ಗು ಪ್ರದೇಶಗಳು-ಮೆಚ್ಚೋಗರಿ(ಮೀನಿನ ಕೆರೆ)ಗಳು. 1927 ರ ಮೊದಲು ಇವು ಗ್ರಾಮದ ಶ್ರೀಮಂತರ ಸಂಪೂರ್ಣ ಹತೋಟಿಯಲ್ಲಿದ್ದವು. ಎಡರಂಗ ಸರ್ಕಾರ ಬಂದ ಕೂಡಲೇ ಅವರ ಕಾನೂನುಬಾಹಿರ ಮಾಲಕತ್ವವನ್ನು ರದ್ದು ಮಾಡಿ ಇವನ್ನೆಲ್ಲಾ ಬಡವರಿಗೆ, ಭೂಹೀನರಿಗೆ ಹಂಚ ಲಾಯಿತು. ಅದರ ಫಲ ಈಗ ಎಲ್ಲರ ಮುಂದಿದೆ. ಮೀನು ಉತ್ಪಾದನೆಯಲ್ಲಿ ಪಶ್ಚಿಮ ಬಂಗಾಳ ಕೆಲವು ವರ್ಷಗಳಿಂದ ಉನ್ನತ ಸ್ಥಾನ ಪಡೆದಿದೆ' - ಮುಖ್ಯಮಂತ್ರಿ ಜ್ಯೋತಿಬಸು ಉದಾಹರಣೆ ಸಹಿತ ಎಡರಂಗ ಆಳ್ವಿಕೆ ತಂದ ಮೂರ್ತ ಬದಲಾವಣೆಗಳನ್ನು ಕಣ್ಣಿಗೆ ಕಟ್ಟುವಂತೆ ವಿವರಿಸುತ್ತಾರೆ.

ಮುಂಬರುವ ಪಂಚಾಯ್ತಿ ಚುನಾವಣೆ ಗಳಲ್ಲಿ ಎಡರಂಗವನ್ನು ಗೆಲ್ಲಿಸುವುದು ಮತದಾರರ ಜವಾಬ್ದಾರಿ - ಏಕೆಂದರೆ ಗ್ರಾಮೀಣ ಜನಸಾಮಾನ್ಯರು ಮತ್ತೆ ತಮ್ಮ ಗೌರವವನ್ನು ಗಳಿಸಿದ್ದು ಎಡರಂಗದ ಆಳ್ವಿಕೆಯಡಿಯೇ, ಕಾಂಗ್ರೆಸ್ ಸರಕಾರ ಸತತವಾಗಿ ಅವರನ್ನು ವಂಚಿಸಿಕೊಂಡು ಬಂದಿದ್ದವು. ಗ್ರಾಮೀಣ ಅಭಿವೃದ್ಧಿಯ ಪ್ರಕ್ರಿಯೆಗೆ ಹೊಸ ಒತ್ತು, ಹುರುಪು ನೀಡಿದ್ದು ಕೂಡಾ ಎಡರಂಗವೇ - ಪಂಚಾಯ್ತಿ ಸಂಸ್ಥೆ ಗಳಿಗೆ ಹೆಚ್ಚೆಚ್ಚು ಹಣಕಾಸು ಸಂಪನ್ಮೂಲ ಒದಗಿಸಿ ಅವನ್ನು ಸ್ವಾವಲಂಬಿಯಾಗಿಸಿರು ವುದರಿಂದ - ಇದು 24 ಪರಗಣ ಜಿಲ್ಲೆಯ ಸಾರ್ವಜನಿಕ ಸಭೆಯೊಂದರಲ್ಲಿ ಜ್ಯೋತಿ ಬಸುರವರ ವಿಶ್ಲೇಷಣೆ.

ಮರುಹಂಚಿಕೆ ಮಾಡುವ ಭೂ ಸುಧಾರಣೆ ಹಾಗೂ ಬರ್ಗಾದಾರಿ ಹಕ್ಕುಗಳ ನೋಂದಣಿ - ಈ ಅವಳಿ ಪ್ರಕ್ರಿಯೆ ಆರಂಭವಾದದ್ದು ಎಡರಂಗದ ಆಡಳಿತ ದಲ್ಲೇ. ಉಳುವವನೇ ಹೊಲದೊಡೆಯ ಎಂಬ ಪರಿಕಲ್ಪನೆಯ ಜಾರಿಯಿಂದಾಗಿ ಉತ್ಸಾಹಿತರಾದ ರೈತರು ಉತ್ಪಾದನೆಯನ್ನು ಹೆಚ್ಚಿಸಿದರು. ಇದರಿಂದಾಗಿ ಪಶ್ಚಿಮ ಬಂಗಾಳದ ಅಕ್ಕಿ ವ್ಯಾಪಾರ ಆಹಾರ ಧಾನ್ಯಗಳ ಉತ್ಪಾದನೆಯಲ್ಲಿ ಪ್ರಥಮ ಸ್ಥಾನ ಪಡೆಯುವಂತಾಗಿದೆ. ಇವೆಲ್ಲವುಗಳಿಗೆ ನಾಯಕತ್ವ ನೀಡುವಲ್ಲಿ, ಇವನ್ನು ಸಂಯೋಜಿಸುವಲ್ಲಿ ಹಾಗೂ ಹಣಕಾಸು ನಿರ್ವಹಣೆಯಲ್ಲಿ ಪಂಚಾಯತುಗಳು ವಹಿಸಿದ ಪಾತ್ರವನ್ನು ಯಾರೂ ನಿರಾಕರಿ ಸುವುದಿಲ್ಲ ಎನ್ನುತ್ತಾರೆ ಜ್ಯೋತಿಬಸು.

ಬಲಪಂಥೀಯ ಶಕ್ತಿಗಳ ಮಾರಿಗಣ್ಣು ಈಗ ಸಂಪನ್ಮೂಲಗಳ ಮೇಲೆ

"ಈಗ ಬಲಪಂಥೀಯ ಶಕ್ತಿಗಳ ಕಣ್ಣು ಈ ಪಂಚಾಯತೀ ರಾಜ್ಯಸಂಸ್ಥೆಗಳ ಮೇಲೆ ಬಿದ್ದಿದೆ. ಅದಕ್ಕೆ ಕಾರಣ ಸರಳ. ಅಭಿವೃದ್ಧಿ ಚಟುವಟಿಕೆಗಳಿಂದಾಗಿ ಇವು ರಾರಾಜಿಸುತ್ತಿ ರುವುದನ್ನು ನೋಡಿ ಜೇಬಿಗೆ ಹಾಕಿಕೊಳ್ಳಲು ಎಷ್ಟೊಂದು ಹಣ ಇಲ್ಲಿ ಹರಿದಾಡುತ್ತಿದೆ ಯಲ್ಲಾ ಎಂದು ಆಸೆ ಪಡುತ್ತಾರೆ ಈ ಪ್ರತಿಗಾಮಿ ಶಕ್ತಿಗಳು" ಎಂದು ಜ್ಯೋತಿಬಸು ರವರು ಸಾರ್ವಜನಿಕ ಸಭೆಯೊಂದರಲ್ಲಿ ಹೀಯಾಳಿಸಿದರು. ತೃಣಮೂಲ ಕಾಂಗ್ರೆಸ್- ಬಿಜೆಪಿ ಮತ್ತು ಅವರನ್ನು ಬೆಂಬಲಿಸುವ ಪತ್ರಿಕೆಗಳು ಪಂಚಾಯ್ತಿಗಳಲ್ಲಿ ಕೋಟಿಗಟ್ಟಲೆ ರೂಪಾಯಿಗಳ ಹಣ ದುರುಪಯೋಗ ವಾಗಿದೆ ಎಂಬ ಆಪಾದನೆಗೆ ಉತ್ತರಿಸುತ್ತಾ ಮಹಾ ಲೆಕ್ಕ ಪರೀಕ್ಷಾಧಿಕಾರಿ(ಸಿ.ಎ.ಜಿ) ಯ ವರದಿಯ ಪ್ರಕಾರವೇ ಹಣಕಾಸು ಚಟುವಟಿಕೆಗಳಲ್ಲಿ ಅಲ್ಲಿ-ಇಲ್ಲಿ ಮಾತ್ರ ಸ್ವಲ್ಪ ಅನಿಯಮಿತತೆಗಳಿವೆ ಎಂದು ಕಂಡು ಬಂದಿದೆ. ತಮಾಷೆಯ ಸಂಗತಿಯೆಂದರೆ ಇಂತಹ ಅನಿಯಮಿತತೆಗಳು ಪ್ರದೇಶ ಕಾಂಗ್ರೆಸ್ ನಡೆಸುವ ಪಂಚಾಯತು ಗಳಿಂದಲೇ ಬಂದಿವೆ, ತೃಣಮೂಲ ಕಾಂಗ್ರೆಸ್ ಇದೇ ಮೂಲದ್ದು ತಾನೇ ಎಂದು ಜ್ಯೋತಿಬಸು ವ್ಯಂಗ್ಯವಾಗಿ ಹೇಳಿದರು.

ನಿಜ, ಪಂಚಾಯತುಗಳು ಮಾಡ ಬೇಕಾದ ಕೆಲಸಗಳು ಇನ್ನೂ ಬಹಳ ಇವೆ. ಗ್ರಾಮೀಣ ವಿದ್ಯುದೀಕರಣ ತ್ವರಿತ ಗೊಳ್ಳಬೇಕು, ಎಲ್ಲರಿಗೂ ಕುಡಿಯುವ ನೀರು ಸಿಗಬೇಕು ಇತ್ಯಾದಿ. ಆದರೆ ಹೆಚ್ಚಿನ ಆಡಳಿತ ರಕ್ಷಣೆ ಹಾಗೂ ಜನಪರ ಅಭಿವೃದ್ಧಿಯ ಮೂಲಕ ಈ ಪಂಚಾಯ್ತೀ ರಾಜ್ಯ ಸಂಸ್ಥೆಗಳನ್ನು ಇನ್ನಷ್ಟು ಎತ್ತರಕ್ಕೆ ಒಯ್ಯಲು ಕೇವಲ ಎಡರಂಗಕ್ಕೆ ಮಾತ್ರ ಸಾಧ್ಯ. ಪ್ರದೇಶ ಕಾಂಗ್ರೆಸ್ - ತೃಣಮೂಲ ಕಾಂಗ್ರೆಸ್- ಬಿಜೆಪಿಯ ಕೈಗಳಿಗೆ ಅಧಿಕಾರ ಕೊಡುವುದೆಂದರೆ ಇದುವರೆಗೆ ತಲೆತಗ್ಗಿಸಿ ಕೂತಿರುವ ಪಟ್ಟಭದ್ರ ಹಿತಾಸಕ್ತಿಗಳಿಗೆ ತಲೆ ಎತ್ತಲು ಅವಕಾಶನೀಡಿ ಪ್ರಗತಿಯನ್ನು ಹಿಂದಕ್ಕೆ ತಳ್ಳುವುದೆಂದೇ ಅರ್ಥ" ಎಂದು ಸಾರಿದರು ಜ್ಯೋತಿಬಸು.


ಎಡ ಐಕ್ಯತೆ

ಈ ಹಿನ್ನೆಲೆಯಲ್ಲಿ ಎಡರಂಗದ ಭಾಗೀದಾರರ ನಡುವೆ ಐಕ್ಯತೆಗಾಗಿ ಮಾತುಕತೆಗಳು ನಡೆದಿವೆ. ಇವು ಸಾಕಷ್ಟು ಫಲದಾಯಕವಾಗಿದ್ದರೂ ಸಂಪೂರ್ಣ ಐಕ್ಯತೆ ಇನ್ನೂ ಬಂದಿಲ್ಲ. 1993 ರ ಚುನಾವಣೆಗಳಲ್ಲಿ 13747 ಸ್ಥಾನಗಳಲ್ಲಿ ಎಡರಂಗ ಪಕ್ಷಗಳ ನಡುವೆಯೇ 'ಫ್ರೆಂಡ್ಲಿ' ಸ್ಪರ್ಧೆಗಳು ನಡೆದವು. ಈ ಬಾರಿ ಇದು 4000 ರ ಮಟ್ಟಕ್ಕಿಳಿದಿದೆ ಎಂದು ಎಡರಂಗದ ಅಧ್ಯಕ್ಷ ಶೈಲೇನ್ ದಾಸ್‌ಗುಪ್ತಾ ಹೇಳಿದ್ದಾರೆ.

ಎಡರಂಗದ ಮುಖಂಡರ ನಡುವೆ ಚರ್ಚೆಯಿಂದ ಒಂದು ಸೂತ್ರ ಏರ್ಪಟ್ಟು ಅದರಂತೆ ಏಳು ಜಿಲ್ಲೆಗಳಲ್ಲಿ ಸಂಪೂರ್ಣ ಐಕ್ಯತೆ ಸಾಧ್ಯವಾಯಿತು. ಈ ಸೂತ್ರವನ್ನು ಉಲ್ಲಂಘಿಸುವ ಸದಸ್ಯರ ಮೇಲೆ ಕಠಿಣ ಕ್ರಮ ಕೈಗೊಳ್ಳಬೇಕು ಎಂಬ ಆಶಯದ ಪ್ರಕಾರ ಸಿಪಿಐ(ಎಂ) ತನ್ನ 21 ಸದಸ್ಯರನ್ನು ಉಚ್ಚಾಟನೆ ಮಾಡಿದೆ. 'ತೃಣಮೂಲ ಕಾಂಗ್ರೆಸ್ ಅಥವಾ ಬಿಜೆಪಿಯಂತೆ ರಾಜ ಕಾರಣದಲ್ಲಿ ನೀತಿಗಳಿಗೆ ಸ್ಥಾನವಿಲ್ಲ ಎಂದು ನಂಬುವವರು ನಾವಲ್ಲ" ಎಂದು ಸಾರಿರುವ ಜ್ಯೋತಿಬಸುರವರು ಎಡರಂಗ ದಲ್ಲಿ ಐಕ್ಯತೆಯ ಅಗತ್ಯವನ್ನು ಈಗಿನ ಸಂದರ್ಭ ದಲ್ಲಿ ಒತ್ತಿ ಹೇಳಿದ್ದಾರೆ. ಅದರ ಪರಿಣಾಮ ವಾಗಿ ವರ್ಗಶತ್ರುಗಳ ವಿರುದ್ಧ ಐಕ್ಯತೆ ಬಲವಾಗುತ್ತಿದೆ.

ಅತ್ತ ಬಿಜೆಪಿ-ತೃಣಮೂಲ ಕಾಂಗ್ರೆಸ್ ನಡುವೆ ಸ್ಥಾನಗಳ ಹೊಂದಾಣಿಕೆಯಲ್ಲಿ ಕಿತ್ತಾಟ ನಡದೇ ಇದೆ. ಈ ಲೇಖನ ಬರೆಯುವ ವೇಳೆಗೆ ತೃಣಮೂಲ ಕಾಂಗ್ರೆಸ್ ಪಂಚಾಯ್ತೀ ಚುನಾವಣೆಯ ನಂತರ ಕೇಂದ್ರ ಸಂಪುಟ ಸೇರುವುದಾಗಿ ಅಜಿತ್ ಪಾಂಜಾ ಹೇಳಿರುವುದಾಗಿ ವರದಿಯಾಗಿದೆ. ರಾಜ್ಯದಲ್ಲಿ 'ಕಾನೂನು-ವ್ಯವಸ್ಥೆ' ಪ್ರಶ್ನೆ ಎತ್ತುವ ಬಿಜೆಪಿ-ತೃಣಮೂಲ ಕಾಂಗ್ರೆಸ್ ಸಂಚು ಸದ್ಯ ವಿಫಲವಾದಂತಿದೆ. ಮೇ 28 ರ ಚುನಾವಣಾ ಫಲಿತಾಂಶ ಈ ಹಿನ್ನೆಲೆಯಲ್ಲಿ ಬಹಳ ಮಹತ್ವಪೂರ್ಣ.

ಪಶ್ಚಿಮ ಬಂಗಾಳದ ಗ್ರಾಮೀಣ ಬಡವರಿಗೆ ಗೌರವಯುತ ಬದುಕು ನೀಡಿವೆ ಈ ಪಂಚಾಯತುಗಳು.



ಇಂಡೋನೇಶ್ಯಾದ ವಿದ್ಯಾರ್ಥಿ ದಂಗೆ - ಅಧ್ಯಕ್ಷ ಸುಹಾರ್ತೋ ರಾಜೀನಾಮೆ

ಶರತ್ ಚಂದ್ರ

ಇಂಡೋನೇಶ್ಯಾದ ರಾಜಧಾನಿ ಜಕಾರ್ತ ಮತ್ತು ಇತರ ಹಲವು ಕಡೆ ತೀವ್ರ ವಿದ್ಯಾರ್ಥಿ ಚಳುವಳಿ ದಂಗೆಗಳ ನಂತರ, 32 ವರ್ಷ ಸರ್ವಾಧಿಕಾರಿಯಾಗಿ ಆಳಿದ ಅಧ್ಯಕ್ಷ ಸುಹಾರ್ತೋ ರಾಜೀನಾಮೆ ಕೊಡಬೇಕಾಗಿ ಬಂದಿದೆ. ಅಧ್ಯಕ್ಷ ಸುಹಾರ್ತೋರ ಆಪ್ತ, ಆತನೇ ನೇಮಿಸಿದ ಉಪಾಧ್ಯಕ್ಷ ಹಬೀಬಿ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡಿದ್ದಾರೆ. ವಿದ್ಯಾರ್ಥಿಗಳ ಭಾರಿ ಪ್ರತಿಭಟನಾ ಪ್ರದರ್ಶನಗಳು, ಹಲವುನಗರಗಳಲ್ಲಿ ಹರಡಿದ ದಂಗೆ, ಲೂಟಿ, ಪೋಲೀಸ್ ಗೋಲಿಬಾರು, ದಮನಗಳಲ್ಲಿ ಸುಮಾರು 500 ಕ್ಕೂ ಹೆಚ್ಚು ಜನ ಸತ್ತಿದ್ದು, ದೇಶ ತೀವ್ರ ಆರ್ಥಿಕ, ರಾಜಕೀಯ ಬಿಕ್ಕಟ್ಟಿನತ್ತ ಸಾಗಿತ್ತು. ಅಧ್ಯಕ್ಷ ಸುಹಾರ್ತೋ ರಾಜೀನಾಮೆ ಕೊಡಬೇಕು, ಜನಪರ ಆರ್ಥಿಕ - ರಾಜಕೀಯ ಸುಧಾರಣೆಗಳು ಜಾರಿಯಾಗ ಬೇಕು ಎಂಬ ವಿದ್ಯಾರ್ಥಿಗಳ ಒತ್ತಾಯ ದಿನೇ ದಿನೇ ಜೋರು ಹತ್ತಿತ್ತು. ಸುಹಾರ್ತೋ ರಾಜೀನಾಮೆ ಹಿಂದಿನ ದಿನ ನೂರಾರು ವಿದ್ಯಾರ್ಥಿಗಳು ಪಾರ್ಲಿಮೆಂಟು ಸದನ ಹತ್ತಿ ಸುಹಾರ್ತೋರ ರಾಜೀನಾಮೆಗೆ ಒತ್ತಾಯಿಸುವ ಘೋಷಣೆ ಕೂಗತೊಡಗಿದ್ದರು. ಇಂಡೋನೇಶ್ಯಾದ ರಾಷ್ಟ್ರೀಯ ದಿನದಂದು ವಿದ್ಯಾರ್ಥಿಗಳು ಪಾರ್ಲಿಮೆಂಟಿನ ಎದುರು ಭಾರೀ ಪ್ರತಿಭಟನಾ ಪ್ರದರ್ಶನಕ್ಕೆ ಆಹ್ವಾನ ಮಾಡಿದ್ದು, ಲಕ್ಷಾಂತರ ಜನ ಭಾಗವಹಿಸುವ ಹಾಗೂ ಪೋಲೀಸ್ ದಮನದಿಂದ ಭಾರೀ ಸಂಖ್ಯೆಯಲ್ಲಿ ಸಾವುನೋವು ಆಗುವ ಸಂಭವವಿತ್ತು. ಆದಿನದ ಹಿಂದಿನ ಅಧ್ಯಕ್ಷ ಸುಹಾರ್ತೋ ದೇಶವನ್ನುದ್ದೇಶಿಸಿ ಮಾಡಿದ ಭಾಷಣದಲ್ಲಿ, ತಾವು ರಾಜಕೀಯ ಸುಧಾರಣೆ ಮಾಡಿ ಆ ಪ್ರಕಾರ ಚುನಾವಣೆ ನಡೆಸಿ, ಆಮೇಲೆ ರಾಜೀನಾಮೆ ಕೊಡುವುದಾಗಿ ಘೋಷಿಸಿದ್ದರು. ಈ ಸುಧಾರಣೆಗೆ ಯಾವುದೇ ವೇಳಾಪಟ್ಟಿ ಕೊಡದ್ದರಿಂದ ಪ್ರತಿಭಟನಾಕಾರರ ಮೇಲೆ ಯಾವುದೇ ಪರಿಣಾಮವಾಗಲಿಲ್ಲ, ಪ್ರತಿಭಟನೆ ಮುಂದು ವರೆದ್ದದರಿಂದ ಅಧ್ಯಕ್ಷ ಸುಹಾರ್ತೋ ರಾಜೀನಾಮೆ ಕೊಡಲೇಬೇಕಾಯಿತು.

ಅಧ್ಯಕ್ಷ ಸುಹಾರ್ತೋ ಇತ್ತೀಚೆಗೆ 7ನೇ ಬಾರಿ ಅಧ್ಯಕ್ಷರಾಗಿ ಚುನಾಯಿತರಾಗಿ, ಮುಂದಿನ ಐದು ವರ್ಷ ತನ್ನ ಗದ್ದುಗೆ ಖಾತರಿ ಮಾಡಿಕೊಂಡಾಗ, ತೀವ್ರ ಅತೃಪ್ತಿ ಆರಂಭವಾಯಿತು. ಅದೇ ಸಮಯದಲ್ಲಿ ಇಂಡೋನೇಶ್ಯಾ ಎದುರಿಸಲೇಬೇಕಾದ ತೀವ್ರ ಆರ್ಥಿಕ ಬಿಕ್ಕಟ್ಟು, ಐಎಂಎಫ್ ಸಾಲ ಜನರ ಮೇಲೆ ಹೊರಿಸಿದ ಭಾರ ಇವು ವಿದ್ಯಾರ್ಥಿ ದಂಗೆಗೆ ದಾರಿ ಮಾಡಿಕೊಟ್ಟವು. ಇದಕ್ಕೆ ವ್ಯಾಪಕ ಜನಬೆಂಬಲ ವ್ಯಕ್ತವಾಯಿತು. ಕೆಲವು ದಿನಗಳ ಹಿಂದೆ ಐಎಂಎಫ್ ಸಾಲದ ಶರತ್ತಿಗನುಸಾರವಾಗಿ ಪೆಟ್ರೋಲ್ ಮತ್ತು ವಿದ್ಯುತ್ ಬೆಲೆಗಳನ್ನು ವಿಪರೀತವಾಗಿ ಏರಿಸಿದಾಗ, ದಂಗೆಗಳು ಸ್ಫೋಟಗೊಂಡವು. ಹಲವಾರು ವಿಶ್ವವಿದ್ಯಾಲಯಗಳ ಒಳಗೆ ಆರಂಭವಾದ ಪ್ರತಿಭಟನಾ ಪ್ರದರ್ಶನಗಳು ಬೀದಿಗಳಿಗೆ ಹರಡಿದ್ದವು. ಹಲವಾರು ಕಡೆ ವಿದ್ಯಾರ್ಥಿ ದಂಗೆ ಹತ್ತಿಕ್ಕಲು ಬಳಸಿದ ಸೈನ್ಯದ ನಡುವೆ ಘರ್ಷಣೆಗಳು ನಡೆದವು. ಘಟನೆಯೊಂದರಲ್ಲಿ ಸೈನಿಕನೊಬ್ಬನನ್ನು ವಿದ್ಯಾರ್ಥಿ ಗಳು ಥಳಿಸಿ, ಆತ ಸತ್ತಿದ್ದ. ಸೈನಿಕರು ಮತ್ತು ವಿದ್ಯಾರ್ಥಿಗಳ ನಡುವೆ ಹಲವಾರು ಕಲ್ಲು ತೂರಾಟ ಘರ್ಷಣೆಗಳು ನಡೆದಿದ್ದವು.

ವಿದ್ಯಾರ್ಥಿ ದಂಗೆಗಳು ಅಧ್ಯಕ್ಷ ಸುಹಾರ್ತೋರವರನ್ನು ರಾಜೀನಾಮೆ ಕೊಡಲು ಬಾಧ್ಯಗೊಳಿಸಿದ್ದರೂ, ಮುಂಬರುವ ದಿನಗಳಲ್ಲಿ ಜನಪರ ರಾಜಕೀಯ - ಆರ್ಥಿಕ ಸುಧಾರಣೆಗಳನ್ನು ತರಬಹುದು ಎಂಬ ಭರವಸೆ ಮೂಡಿಲ್ಲ, ಈಗ ಅಧಿಕಾರ ವಹಿಸಿಕೊಂಡಿರುವ ಹಬೀಬಿ, ಸುಹಾರ್ತೋ ತನ್ನ ಚೇಲಾ ಹಬೀಬಿ ಮೂಲಕ ಮೊದಲಿನಂತೆ ರಾಜ್ಯ ವಾಳುವ ಸಂಭವ ಹೆಚ್ಚು. ಸುಹಾರ್ತೋ ಕಳೆದ 32 ವರ್ಷಗಳಲ್ಲಿ ಬೆಳೆಸಿದ ಏಕಪಕ್ಷೀಯ, ಸರ್ವಾಧಿಕಾರಕ್ಕೆ ಸವಾಲು ಎಸೆಯಬಲ್ಲ ಬದಲಿ ರಾಜಕೀಯ ಶಕ್ತಿ ಇನ್ನೂ ರೂಪಿತವಾಗಿಲ್ಲ. 60 ರ ದಶಕದಲ್ಲಿ ಇಂಡೋನೇಶ್ಯಾದಲ್ಲಿ ದೊಡ್ಡ ರಾಜಕೀಯ ಶಕ್ತಿಯಾಗಿದ್ದ ಕಮ್ಯುನಿಸ್ಟ್ ಪಕ್ಷವನ್ನು ಸಿಐಎ ಬೆಂಬಲ ಕುಮ್ಮಕ್ಕುಗಳಿಂದ ದಮನ ಮಾಡಲಾಗಿತ್ತು. ಸುಮಾರು 5 ಲಕ್ಷ ಕಮ್ಯುನಿಸ್ಟರು, ಬೆಂಬಲಿಗರು, ಕುಟುಂಬದವರನ್ನು ಅಮಾನುಷವಾಗಿ ಕೊಲ್ಲಲಾಗಿತ್ತು. ಆಮೇಲೆ ಸುಹಾರ್ತೋ ಅಧ್ಯಕ್ಷರಾಗಿ ಏಕಪಕ್ಷೀಯ ಸರ್ವಾಧಿಕಾರ ಸ್ಥಾಪಿಸಿದ್ದರು. ಎಲ್ಲಾ ರೀತಿಯ ರಾಜಕೀಯ ವಿರೋಧವನ್ನು ಹತ್ತಿಕ್ಕಿದ್ದರು. ಅತ್ಯಂತ ಭ್ರಷ್ಟ ಸುಹಾರ್ತೋ ಕುಟುಂಬದ ಆಡಳಿತ ದೇಶದ ಮೇಲೆ ಹೇರಿದ್ದು ಮಾತ್ರವಲ್ಲ, ಸಾಮ್ರಾಜ್ಯಶಾಹಿಯ ಕಣ್ಮಣಿಯಾಗಿ ಅತ್ಯಂತ ಪ್ರತಿಗಾಮಿ ಜನ- ವಿರೋಧಿ ನೀತಿಗಳನ್ನು ಅನುಸರಿಸಿದ್ದರು. ಕೈಗೊಂಬೆ ಪಾರ್ಲಿಮೆಂಟನ್ನು ಸೃಷ್ಟಿಸಿ, 7 ಬಾರಿ ಅಧ್ಯಕ್ಷರಾಗಿ ಪುನರಾಯ್ಕೆಯಾಗಿದ್ದಾರೆ. ಇಂತಹ ಮಿಲಿಟರಿ ಸರ್ವಾಧಿಕಾರಿ ಕೆಲವೇ ದಿನಗಳ ವಿದ್ಯಾರ್ಥಿ ದಂಗೆಗಳಲ್ಲಿ ರಾಜೀನಾಮೆ ಕೊಡಬೇಕಾಗಿ ಬಂದದ್ದು ಬಿಕ್ಕಟ್ಟಿನ ತೀವ್ರತೆಯನ್ನು ತೋರಿಸುತ್ತದೆ. ಆದರೆ ಐಎಂಎಫ್ ಮತ್ತು ಸಾಮ್ರಾಜ್ಯಶಾಹಿ ಗಾಬರಿಯಾಗಿದೆ. ಹಬೀಬಿಯವರನ್ನು ಅದು ಸುಹಾರ್ತೋರ ಬದಲಿಗೆ ಕೈಗೊಂಬೆ ಯಾಗಿಸಲು ಪ್ರಯತ್ನ ನಡೆಸುತ್ತದೆ. ಹಬೀಬಿ ಐಎಂಎಫ್ ನೀತಿಗಳನ್ನು ಮುಂದುವರೆಸಿದರೆ, ಅರ್ಥಪೂರ್ಣ ಆರ್ಥಿಕ-ರಾಜಕೀಯ ಸುಧಾರಣೆಗಳನ್ನು ತರದಿದ್ದರೆ ಅವರ ಅಧ್ಯಕ್ಷೀಯ ದಿನಗಳು ಹೆಚ್ಚುಸಮಯ ಸಾಗಲಿಕ್ಕಿಲ್ಲ. ವಿದ್ಯಾರ್ಥಿದಂಗೆಗಳು ಬದಲಿ ರಾಜಕೀಯ ಶಕ್ತಿಯನ್ನು ಮುಂದಕ್ಕೆ ತರಬಹುದು.

ಒಟ್ಟಾರೆಯಾಗಿ ಅಧ್ಯಕ್ಷ ಸುಹಾರ್ತೋರ ರಾಜೀನಾಮೆ ಆದೇಶದಲ್ಲಿ ಅತ್ಯಂತ ಮಹತ್ವಪೂರ್ಣ ಬೆಳವಣಿಗೆ. ಚೀನಾ ಭಾರತಗಳ ನಂತರ ಅತ್ಯಂತ ಹೆಚ್ಚಿನ ಜನಸಂಖ್ಯೆಯ ದೇಶವಾದ ಇಂಡೋ ನೇಶ್ಯಾದ ಆಗುಹೋಗುಗಳು ದಕ್ಷಿಣ ಪೂರ್ವ ಏಶ್ಯಾ ಮಾತ್ರವಲ್ಲ, ಇಡೀ ಜಗತ್ತಿನ ಬೆಳವಣಿಗೆಗಳ ಮೇಲೆ ಪರಿಣಾಮ ಬೀರಬಲ್ಲದು.



ಆಸ್ಟ್ರೇಲಿಯನ್ ಬಂದರು ಕಾರ್ಮಿಕರ ವಿಜಯ

ಆಸ್ಟ್ರೇಲಿಯನ್ ಹೈಕೋರ್ಟು ಖಾಸಗಿ ಕಂಪನಿ ಪ್ಯಾಟ್ರಿಕ್ ಸ್ಟೀವ್‌ಡೋರ್ಸ್ ವಜಾ ಮಾಡಿದ್ದ ಸುಮಾರು 1400 ಬಂದರು ಕಾರ್ಮಿಕರನ್ನು ಪುನಃ ಕೆಲಸಕ್ಕೆ ತೆಗೆದುಕೊಳ್ಳಬೇಕು ಎಂದು ಆಜ್ಞೆ ಮಾಡುವ ಮೂಲಕ ಬಂದರು ಕಾರ್ಮಿಕರಿಗೆ ಭಾರಿ ವಿಜಯ ಕೊಟ್ಟಿದೆ. ಈ 1400 ಕಾರ್ಮಿಕರನ್ನು ಯೂನಿಯನ್ ಕಟ್ಟಿಕೊಂಡಿದ್ದಾರೆ ಎಂಬ ಕಾರಣಕ್ಕೆ ವಜಾ ಮಾಡಲಾಗಿತ್ತು. ಬಂದರುಗಳಲ್ಲಿ ಮತ್ತು ಇತರೆಡೆ ಕಾರ್ಮಿಕರ ಯೂನಿಯನ್‌ಗಳನ್ನು ಮುರಿಯುವ ಉದ್ದೇಶದಿಂದ ಆಸ್ಟ್ರೇಲಿಯಾ ಸರ್ಕಾರ ಸಹ ಈ ಖಾಸಗಿ ಕಂಪನಿ ಜತೆ ಶಾಮೀಲಾಗಿತ್ತು. ಈ ಖಾಸಗಿ ಕಂಪನಿ ನಷ್ಟ ತೋರಿಸಿ ಯೂನಿಯನ್ ಕಾರ್ಮಿಕರನ್ನು ವಜಾ ಮಾಡಿ, ಯೂನಿಯನ್ ಇಲ್ಲದ ಕಾರ್ಮಿಕರನ್ನು ನೇಮಕ ಮಾಡಿದ ರೀತಿಯನ್ನು ಕೋರ್ಟು ಪ್ರಶ್ನಿಸಿದೆ. 6-1 ಬಹುಮತದಿಂದ ಮಂಜೂರಾದ ಈ ಹೈಕೋರ್ಟು ನಿರ್ಣಯ ಆಸ್ಟ್ರೇಲಿಯಾ ಸರ್ಕಾರವನ್ನು ಇಕ್ಕಟ್ಟಿಗೆ ಸಿಕ್ಕಿಸಿದೆ. ಆದರೂ ಸರ್ಕಾರ ಮತ್ತು ಬಂದರು ಕಂಪನಿಗಳು ಕೋರ್ಟು ಆಜ್ಞೆ ಉಲ್ಲಂಘಿಸಿ ಬಂದರು ಕಾರ್ಮಿಕರನ್ನು ಪುನಃ ನೇಮಕ ಮಾಡಿಕೊಳ್ಳದೆ ಇರುವುದು ಹೇಗೆ ಎಂದು ಹೊಂಚು ಹಾಕುತ್ತಿದ್ದಾರೆ.

ಇದು ಅಭಿವೃದ್ಧಿ ಬಂಡವಾಳ ದೇಶಗಳಲ್ಲಿ ಕಾರ್ಮಿಕರ ಪ್ರಜಾಸತ್ತಾತ್ಮಕ ಹಕ್ಕುಗಳ ಸ್ಥಿತಿಗತಿ

ಜಾಫ್ನಾ ಮೇಯರ್‌ರ ಹತ್ಯೆ-ಎಲ್‌ಟಿಟಿಇ ಕೈವಾಡ

ಶ್ರೀಲಂಕಾ ಸೈನ್ಯ ಮತ್ತು ಎಲ್‌ಟಿಟಿಇ ನಡುವೆ ಭೀಷಣ ಕಾಳಗ ಮುಂದುವರೆಯುತ್ತಿದೆ. ಉತ್ತರ ಶ್ರೀಲಂಕಾದ ತಮಿಳು ಪ್ರದೇಶಗಳಲ್ಲಿ ಶಾಂತಿಯ ಸಾಧ್ಯತೆಗಳು ದೂರವಾಗುತ್ತಾ ಹೋಗುತ್ತಿವೆ. ಇತ್ತೀಚೆಗೆ ಜಾಫ್ನಾ ಮೇಯರ್ ಸರೋಜಿನಿ ಯೋಗೇಶ್ವರನ್‌ರವರ ಹತ್ಯೆ ಇನ್ನೊಂದು ಇಂತಹ ಘಟನೆ. ಎಲ್‌ಟಿಟಿಇ ಈ ಹತ್ಯೆ ಮಾಡಿದೆ ಎಂದು ಶಂಕಿಸಲಾಗಿದ್ದು, ಜಾಫ್ನಾ ದೈನಿಕ ಉತಮನ್‌ಗೆ ಕಳಿಸಿದ ಪತ್ರದಲ್ಲಿ ಇದು ಎಲ್‌ಟಿಟಿಇ ಕೃತ್ಯ ಎಂಬ ಶಂಕೆ ನಿಜವಾಗಿದೆ.

ಟಿಯುಎಲ್‌ಎಫ್ ನ ಅಭ್ಯರ್ಥಿ ಹಾಗೂ ಜಾಫ್ನಾದ ಮೇಯರ್ ಆಗಿ ಆಯ್ಕೆಯಾಗಿದ್ದ ಸರೋಜಿನಿ ಯೋಗೇಶ್ವರರನ್ನು ಅವರ ಮನೆಯಲ್ಲೇ ಇಬ್ಬರು ಎಲ್‌ಟಿಟಿಇ ಗನ್‌ಧಾರಿಗಳು ಗುಂಡು ಹೊಡೆದು ಕೊಂದಿದ್ದಾರೆ. ಶ್ರೀಮತಿ ಯೋಗೇಶ್ವರನ್ ತಮಗೆ ಭದ್ರತಾ ಪಡೆಗಳ ಕಾವಲನ್ನು ನಿರಾಕರಿಸಿದ್ದರು. ಜಾಫ್ನಾದ ಜನ ತನ್ನನ್ನು ಕಾಪಾಡಲು ಸಾಧ್ಯವಿಲ್ಲದಿದ್ದರೆ ಪರವಾಗಿಲ್ಲ ಎಂದಿದ್ದರಂತೆ.

ತಮಿಳು ಸಮಸ್ಯೆ ಮಾತುಕತೆ ಮೂಲಕ ಶಾಂತಿಯುತವಾಗಿ ಬಗೆಹರಿಯುವುದು ಎಲ್‌ಟಿಟಿಗೆ ಬೇಕಿಲ್ಲ. ಇತರ ಯಾವುದೇ ತಮಿಳು ಸಂಘಟನೆ ಬೆಳೆಯುವುದನ್ನು ಎಲ್‌ಟಿಟಿಇ ಸಹಿಸುವುದಿಲ್ಲ.

ರಶ್ಯದಲ್ಲಿ ಬಿಕ್ಕಟ್ಟು ಸೃಷ್ಟಿಸಿರುವ ಗಣಿಗಾರರ ಮುಷ್ಕರ

ರಶ್ಯದ ಗಣಿಕಾರ್ಮಿಕರು ಪುನಃ ಯುದ್ಧವನ್ನು ಹೂಡಿದ್ದಾರೆ. ತಮ್ಮ ವೇತನ ಬಾಕಿ ಕೊಡದಿರುವುದರ ವಿರುದ್ಧ ಪ್ರತಿಭಟಿಸಿ ಗಣಿಗಾರರು ಅನಿರ್ದಿಷ್ಟ ಮುಷ್ಕರ ಹೂಡಿದ್ದಾರೆ. ರಶ್ಯದ ಸರ್ಕಾರ ಈ ಬಗ್ಗೆ ಹಲವಾರು ತಿಂಗಳುಗಳಿಂದ ಆಶ್ವಾಸನೆ ಕೊಡುತ್ತಿದ್ದರೂ, ಆ ಬಗ್ಗೆ ಏನೂ ಮಾಡಿಲ್ಲ. ಇದರಿಂದ ಕುಪಿತರಾದ ಗಣಿ ಕಾರ್ಮಿಕರು ಟ್ರಾನ್ಸ್ ಸೈಬೇರಿಯನ್ ರೈಲಿನ ಸಂಚಾರಕ್ಕೆ ಅಡ್ಡಿ ಮಾಡಲು ಆರಂಭಿಸಿದ್ದಾರೆ. ಇದು ರಶ್ಯಾದ ಸಾಗಾಣಿಕೆ, ಆವಶ್ಯಕ ಸಾಮಾಗ್ರಿಗಳ ಪೂರೈಕೆಗೆ ತೀವ್ರ ಸಮಸ್ಯೆ ಉಂಟುಮಾಡಿ ಆರ್ಥಿಕ, ರಾಜಕೀಯ ಬಿಕ್ಕಟ್ಟನ್ನು ತೀವ್ರಗೊಳಿಸಬಹುದು.

ಈ ನಡುವೆ ಕಮ್ಯುನಿಸ್ಟ್ ಪಕ್ಷದ ಅಧ್ಯಕ್ಷ ಯೆಲ್ಸಿನ್‌ರವರ ಮೇಲೆ ದೋಷಾರೋಪಣೆ ಮಾಡುವ ನಿರ್ಣಯವನ್ನು ಮಂಡಿಸಲು ತಯಾರಿ ನಡೆಸಿದೆ. ಇದಕ್ಕೆ ಬೇಕಾದ ಪಾರ್ಲಿಮೆಂಟ್ ಸದಸ್ಯರ ಸಹಿ ಸಂಗ್ರಹ ಮಾಡಿದೆ. ಪಕ್ಷ ಗಣಿ ಕಾರ್ಮಿಕರ ಮುಷ್ಕರಕ್ಕೂ ಬೆಂಬಲ ನೀಡಿದ್ದು, ಹೊಸ ಸರ್ಕಾರದ ವಿರುದ್ಧ ರಾಜಕೀಯ ಹೋರಾಟ ತೀವ್ರಗೊಳಿಸಿದೆ.

ಒಂದು ಕಡೆ ವಿಶ್ವಬ್ಯಾಂಕ್, ಐಎಂಎಫ್‌ಗಳಿಗೆ ಖಾಸಗೀಕರಣ ಮುಂದುವರೆಯುವುದು ಎಂದು ಇನ್ನೊಂದು ಕಡೆ ಎಲ್ಲಾ ಕಾರ್ಮಿಕರ ವೇತನ ಬಾಕಿ ಕೊಡಲಾಗುವುದು ಎನ್ನುವ ಯೆಲ್ಸಿನರ ಭರವಸೆಗಳನ್ನು ಯಾರೂ ನಂಬುತ್ತಿಲ್ಲ.

ರೈತ-ಕೂಲಿಕಾರರ ಜಂಟಿ ಸಮಾವೇಶದ ಕರೆ

ಪುಟ 1 ರಿಂದ

ತಂತ್ರಜ್ಞಾನ ಹಾಗೂ ಸಾಲದ ನೆಪದಲ್ಲಿ ಅಭಿವೃದ್ಧಿ ಶೀಲ ರಾಷ್ಟ್ರಗಳನ್ನು ತಮ್ಮ ಹಿಡಿತದಲ್ಲಿರುವಲ್ಲಿ ತೊಡಗಿ ಕೋಟ್ಯಾಧಿಪತಿಗಳು ಕಾರ್ಗಿಲ್ ಕಂಪನಿ ಮುಖಾಂತರ ಕೃಷಿ ಮಾಡತೊಡಗಿವೆ ಎಂದರು.

ಸಾವು ಬಾಗಿಲಿನಲ್ಲಿದೆ ಆದರೂ ನಮ್ಮ ರೈತರ ಸಮುದಾಯ ಏಕೆ ಮೌನ ವಹಿಸಿದೆ? ರೈತರಿಗೆ ಇಂತಹ ಗತಿ ಬಂದರೆ ಕೂಲಿಕಾರರ ಮಹಿಳೆಯರ ಬದುಕೇನಾಗಬೇಕೆಂದು ಪ್ರಶ್ನಿಸಿದ ರಾಜ್ಯ ರೈತ ಸಂಘದ ಸುನಂದ ಜಯರಾಂ ಎಚ್ಚೆದ್ದು ಹೋರಾಟ ನಡೆಸುವಂತೆ ಕರೆ ನೀಡಿದರು.

ಸಮಾವೇಶವನ್ನು ಉದ್ದೇಶಿಸಿ ಎಐಟಿಯುಸಿ ಯ ಅನಂತಸುಬ್ಬರಾವ್, ರಾಜ್ಯ ರೈತ ಸಂಘದ ಬಸವರಾಜಪ್ಪ, ವಿಮಾ ನೌಕರರ ಸಂಘದ ಕೆ.ವಿ.ಶ್ರೀನಿವಾಸ್ ಮಾತನಾಡಿದರು. ಸಿಐಟಿಯುವಿನ ಎಸ್.ಸೂರ್ಯನಾರಾಯಣ ರಾವ್ ಉಪಸ್ಥಿತರಿದ್ದರು.

ನಿರ್ಣಯ:

ಆತ್ಮಹತ್ಯೆ ಮಾಡಿಕೊಂಡ ರೈತ ಕುಟುಂಬಕ್ಕೆ 1 ಲಕ್ಷ ರೂ. ಪರಿಹಾರ ನೀಡಬೇಕು, ಈಗಿರುವ ಸಾಲ ಮನ್ನ ಮಾಡಿ, ಹೊಸ ಸಾಲ ನೀಡಬೇಕು. ಬೆಳೆ ನಷ್ಟ ಪರಿಹಾರಕ್ಕೆ ಒಂದು ನಿಧಿ ಪ್ರಾರಂಭಿಸಬೇಕು. ಕೇಂದ್ರ ಸರ್ಕಾರ ವಿದ್ಯುತ್ ಕುರಿತು ಹೊರಡಿಸಿರುವ ಸುಗ್ರೀವಾಜ್ಞೆಯನ್ನು ವಾಪಸ್ಸು ಪಡೆಯಬೇಕು, ವಿಮೆ ವ್ಯವಸ್ಥೆ ಜಾರಿಗೆ ತರಬೇಕೆಂಬ ನಿರ್ಣಯವೊಂದನ್ನು ಪ್ರಾಂತ ರೈತ ಸಂಘದ ಮಾರುತಿ ಮಾನಪಡೆ ಮಂಡಿಸಿದರು.

ಆತ್ಮಹತ್ಯೆಯಲ್ಲ ಕೊಲೆ!

ಸಮಾವೇಶದ ಅಧ್ಯಕ್ಷತೆ ವಹಿಸಿದ್ದ ರಾಜ್ಯರೈತ ಸಂಘದ ಪ್ರಧಾನ ಕಾರ್ಯದರ್ಶಿಗಳು ಹಾಗೂ ಶಾಸಕರಾದ ಕೆ.ಎಸ್.ಪುಟ್ಟಣ್ಣಯ್ಯ ನಿರ್ಣಯ ಅನುಮೋದಿಸಿ ಮಾತನಾಡುತ್ತಾ ದೇಶಕ್ಕೆ ಅನ್ನ ನೀಡುವ ರೈತ ತನ್ನ ತುತ್ತು ಅನ್ನಕ್ಕಾಗಿ ಚಿಂತೆಗೀಡಾಗಿ ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎಂದರೆ ನಂಬಲು ಸಾಧ್ಯವಿಲ್ಲ. ಅದು ಆತ್ಮಹತ್ಯೆಯಲ್ಲ ಕೊಲೆ. ಸರ್ಕಾರ ಅವರ ನೆರವಿಗೆ ಬರದೆ ಅವರ ಕೊಲೆ ಮಾಡಿದ್ದಾರೆ. ಲಾಭಕೋರರು ಕಳಪೆ ಬೀಜ, ಗೊಬ್ಬರ, ಔಷಧಿ ಮಾರಾಟ ಮಾಡಿ ಅವರ ಕೊಲೆ ಮಾಡಿದೆ. ರೈತ ಸಂಘಟನೆಗಳ ಮುಖಂಡರು ಸರ್ಕಾರದ ಕೃಷಿ ನೀತಿ ಬಹುರಾಷ್ಟ್ರೀಯ ಕಂಪನಿಗಳ ಲಾಭಕೋರ ತಂತ್ರವನ್ನು ವಿವರಿಸುವಲ್ಲಿ ಅದರ ವಿರುದ್ಧ ಪ್ರಬಲ ಹೋರಾಟ ನಡೆಸದೆ ಅವರ ಕೊಲೆಗೆ ಕಾರಣವಾಗಿದ್ದೇವೆ ಎಂದರು.

ಇನ್ನು ಮುಂದಾದರೂ ಎಲ್ಲರೂ ಎಚ್ಚೆತ್ತು ನಮ್ಮ ಒಣ ಪ್ರತಿಷ್ಠೆಗಳನ್ನು ಬದಿಗೊತ್ತಿ ಒಂದು ಬೃಹತ್ ಪ್ರಮಾಣದ ಐಕ್ಯ ಹೋರಾಟ ನಡೆಸಬೇಕಾಗಿದೆ ಎಂದು ಕರೆ ನೀಡಿದರು. ಪ್ರಾಂತ ಕೃಷಿ ಕೂಲಿಕಾರರ ಸಂಘದ ಅಧ್ಯಕ್ಷರಾದ ಜಿ.ಎನ್.ನಾಗರಾಜ್ ಪ್ರಸ್ತಾವನೆ ಭಾಷಣ ಮಾಡಿ, ವಿಶ್ವ ವ್ಯಾಪಾರ ಸಂಘಟನೆಯು ವಿಶ್ವದ ಬಡಜನತೆಯನ್ನು ಬಗ್ಗುಬಡಿದ ಉತ್ಸಾಹದಲ್ಲಿ 50ನೇ ವಾರ್ಷಿಕೋತ್ಸವವನ್ನು ಜಿನಿವಾದಲ್ಲಿ ಆಚರಿಸುತ್ತಿದೆ. ಈ ಸಂದರ್ಭದಲ್ಲಾದರು ರೈತ-ಕೂಲಿಕಾರರು ಎಚ್ಚರಗೊಳ್ಳಬೇಕಾಗಿದೆ ಎಂದರು. ಪ್ರಾಂತರೈತ ಸಂಘದ ಪಿ.ಜಗನ್ನಾಥ್ ಕಾರ್ಯಕ್ರಮದ ನಿರೂಪಣೆ ಮಾಡಿದರು.

ಭದ್ರತೆಗಾಗಿ ಪರಮಾಣು ಸ್ಫೋಟ ಎಂಬ ನೆಪ

ಪುಟ 1 ರಿಂದ

ಹಾಗೂ ಯಾವುದೇ ಪಕ್ಷಪಾತಪೂರ್ಣ ಎಲ್.ಪಿ.ಟಿ, ಸಿ.ಟಿ.ಬಿ.ಟಿ. ಗಳಂತಹ ಸಂಧಿಗಳಿಗೆ ಸಹಿ ಹಾಕದೆ ಭಾರತದ ಭದ್ರತಾ ಹಿತಾಸಕ್ತಿಗಳನ್ನು ರಕ್ಷಿಸುತ್ತಾ ಪರಮಾಣು ನಿಶ್ಶಸ್ತ್ರೀಕರಣಕ್ಕೆ ಶ್ರಮಿಸುವ ಉತ್ತಮ ಧೋರಣೆಯನ್ನು ಮುಂದುವರೆಸಲು ಕ್ರಮ ಕೈಗೊಳ್ಳಬೇಕು" ಎಂದು ಎಡ ಪಕ್ಷಗಳು ಆಗ್ರಹಿಸಿವೆ.

ಹರ್ಕಿಶನ್‌ಸಿಂಗ್ ಸುರ್ಜಿತ್, ಎ.ಬಿ.ಬರ್ಧನ್, ಡಿ.ಡಿ.ಶಾಸ್ತ್ರಿ, ಸುಶೀಲ್ ಭಟ್ಟಾಚಾರ್ಯ, ಅಬನಿರಾಯ್, ಪ್ರಕಾಶ್ ಕಾರಟ್, ಜೆ.ಚಿತ್ತರಂಜನ್, ಎಸ್.ರಾಮಚಂದ್ರನ್ ಪಿಳ್ಳೆ ಹಾಗೂ ದೇವರಾಜನ್ ಎಡಪಕ್ಷಗಳ ಈ ಸಭೆಯಲ್ಲಿ ಭಾಗವಹಿಸಿದ್ದರು.

ಬೆಲೆ ತೆರಬೇಕಾದ್ದು ಬಿಜೆಪಿಯಲ್ಲ, ಭಾರತದ ಜನತೆ

ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸುರ್ಜಿತ್‌ರವರು ಈ ಬಗ್ಗೆ ಬರೆದಿರುವ ಒಂದು ದೀರ್ಘ ಲೇಖನದಲ್ಲಿ ಈ ಎಲ್ಲಾ ಪರಮಾಣು ಕಸರತ್ತುಗಳ ಹಿಂದೆ ದೇಶದ ಭದ್ರತೆಯ ವಿಚಾರಗಳೇನೂ ಇಲ್ಲ, ವಾಸ್ತವವಾಗಿ ಇರುವುದು ಬಿಜೆಪಿಯ ಬಚ್ಚಿಟ್ಟ ಅಜೆಂಡಾ ಎಂಬುದು "ಕಾಶ್ಮೀರದ ಸಮಸ್ಯೆ ಪರಿಹಾರವಾಗಬೇಕಾದರೆ ಭಾರತ ಪರಮಾಣು ಶಸ್ತ್ರಾಸ್ತ್ರ ಸಜ್ಜಿತ ದೇಶವಾಗ ದೇಶವಾಗಬೇಕು" ಎಂಬ ಅಡ್ವಾಣಿಯವರ ಹೇಳಿಕೆಯಿಂದ ಸುಸ್ಪಷ್ಟವಾಗುತ್ತದೆ ಎಂದಿದ್ದಾರೆ. ಕೋಮು ಸನ್ನಿವೇಶವನ್ನು ಹದಗೆಡಿಸಿ 'ಹಿಂದುತ್ವ'ವನ್ನು ಸ್ಥಾಪಿಸುವುದೇ ಇದರ ಹಿಂದಿರುವ ದುರುದ್ದೇಶ ಎಂದು ಖಡಾಖಂಡಿತವಾಗಿ ಅವರು ಹೇಳಿದ್ದಾರೆ. ಆದ್ದರಿಂದಲೇ ವಿ.ಹೆಚ್.ಪಿ. ಪೋಖ್ರಾನ್‌ನಲ್ಲಿ 'ಶಕ್ತಿಪೀಠ' ಸ್ಥಾಪಿಸುವ ಅರ್ಥಹೀನ ಮಾತನಾಡುತ್ತಿದೆ. ಹಿಂದೆ ಬಾಬ್ರಿ ಮಸೀದಿ ಧ್ವಂಸದ ಸಂದರ್ಭದಲ್ಲಿ ತಳೆದ ವಂಚಕ ನಿಲುವನ್ನೇ ಬಿಜೆಪಿ ಮತ್ತೆ ತಳೆಯುತ್ತಿದೆ. ಆದರೆ ಇವಕ್ಕೆಲ್ಲಾ ಬೆಲೆ ತೆರಬೇಕಾದ್ದು ಬಿಜೆಪಿಯಲ್ಲ, ಭಾರತ ದೇಶದ ಜನತೆ. ಆದ್ದರಿಂದ ಎಲ್ಲಾ ದೇಶಪ್ರೇಮಿ ಮತ್ತು ಶಾಂತಿಪ್ರಿಯ ಜನತೆ ಒಟ್ಟಾಗಿ ಬಿಜೆಪಿಯ ಈ ದುಷ್ಟ ಆಟವನ್ನು ವಿಫಲಗೊಳಿಸಬೇಕು ಎಂದು ಸುರ್ಜಿತ್ ಕರೆ ನೀಡಿದ್ದಾರೆ.



ಬೆಂಗಳೂರು

ಜೂನ್ 11-14, 1998

'ಬೆಲೆ ಏರಿಕೆಯ ಬಿಸಿಯಿಂದ ಜನ ಸಾಮಾನ್ಯರೆಲ್ಲರೂ ತತ್ತರಿಸುತ್ತಿದ್ದಾರೆ. ನಿರುದ್ಯೋಗ, ಬಡತನ, ಹಸಿವು ಮನೆಯ ಎಲ್ಲರನ್ನೂ ಅರೆಹೊಟ್ಟೆಗೇಡು ಮಾಡಿದರೆ - ಮಹಿಳೆಯರು ಹೊಟ್ಟೆಗಿಲ್ಲದ ಪರಿಸ್ಥಿತಿಗೆ ತಳ್ಳಲ್ಪಡುತ್ತಿದ್ದಾರೆ. ಇದರ ಜೊತೆ ಮಹಿಳೆ ಎಂಬ ಕಾರಣಕ್ಕಾಗಿಯೇ ಎದುರಿಸುವ ಸಮಸ್ಯೆಗಳಿಂದ ಇಂದಿಗೂ ಮುಕ್ತಿ ಸಿಗದ ಸ್ಥಿತಿಯಲ್ಲಿ ಮಹಿಳೆ ಬದುಕುತ್ತಿದ್ದಾರೆ" ಶಿವಾಜಿನಗರದ ರಸೆಲ್ ಮಾರ್ಕೆಟ್ ಪ್ರದೇಶದಲ್ಲಿ - ಜನವಾದಿ ಮಹಿಳಾ ಸಂಘಟನೆಯ 5ನೇ ಅಖಿಲ ಭಾರತ ಸಮ್ಮೇಳನದ ಪ್ರಚಾರ ಸಭೆಯನ್ನು ಉದ್ಘಾಟಿಸುತ್ತಾ ಸಂಘಟನೆಯ ಅಖಿಲ ಭಾರತ ಸಹಕಾರ್ಯದರ್ಶಿ/ ಮಾಜಿ ಸಂಸತ್ ಸದಸ್ಯೆ ಆಡಿದ ಮಾತುಗಳು ಇವು -

5ನೇ ರಾಷ್ಟ್ರೀಯ ಸಮ್ಮೇಳನಕ್ಕೆ ಬೆಂಗಳೂರು ನಗರವನ್ನು ಸಂಘಟನೆಯ ಕಾರ್ಯಕರ್ತರು ಸಿದ್ಧಗೊಳಿಸುತ್ತಿದ್ದಾರೆ. ಪ್ರತಿ ಮನೆ-ಪ್ರತಿ ಸರ್ಕಾರಿ/ ಖಾಸಗೀ ಕಚೇರಿಗಳಿಗೆ ಮಹಿಳಾ ತಂಡ ಭೇಟಿ ನೀಡುತ್ತಿದ್ದು ಕರಪತ್ರ ನೀಡಿ - ಧನ ಸಹಾಯ ನೀಡುವಂತೆ ಮನವಿ ಮಾಡುತ್ತಿದ್ದಾರೆ.

ದೇಶದ ಜನಸಾಮಾನ್ಯರ ಬದುಕಿನ ಪ್ರಶ್ನೆಗಿಂತ ಪ್ರಪಂಚವನ್ನೇ ಭಸ್ಮ ಮಾಡುವ ಬಾಂಬಿನ ಬಗ್ಗೆ ಆಳುತ್ತಿರುವ ಕೇಂದ್ರ ಸರ್ಕಾರ ವಹಿಸುತ್ತಿರುವ ಕಾಳಜಿ ಮಹಿಳೆಯರ ಮೇಲೆ ಅದರ ಪರಿಣಾಮ ಇವು ಪ್ರಜ್ಞಾವಂತರನ್ನು ಬಾಧಿಸುತ್ತಿದೆ. ವಿಶ್ವದಾದ್ಯಂತ ಬದಲಾಗುತ್ತಿರುವ ಪರಿಸ್ಥಿತಿಯಲ್ಲಿ - ಅವುಗಳ ಪರಿಣಾಮದ ಕುರಿತು ಚಿಂತಿಸುವ ಸಂಘಟನೆ ತನ್ನ ಸಮ್ಮೇಳನದಲ್ಲಿ ಅವೆಲ್ಲವನ್ನೂ ಕುರಿತು ಚರ್ಚಿಸಲಿದೆ. 1000 ಪ್ರತಿನಿಧಿಗಳನ್ನು 8 ಗುಂಪುಗಳಾಗಿ ವಿಂಗಡಿಸಿ ಬೇರೆ ಬೇರೆ ವಿಷಯಗಳ ಆಯೋಗ ರಚಿಸಿ ಚರ್ಚಿಸಿ ಹಿಂದಿನ ವರ್ಷಗಳ ಅನುಭವ, ಇಂದಿನ ದಿನದ ಪರಿಸ್ಥಿತಿ ಮುಂದಿನ ದಿನಗಳ ಕಾರ್ಯಯೋಜನೆಯನ್ನು ರೂಪಿಸಲಿದೆ.

1. ಹೊಸ ಜಾಗತಿಕ ನೀತಿ ಮತ್ತು ಮಹಿಳೆ
2. ಕೃಷಿ ಕೂಲಿಕಾರ ಮಹಿಳೆಯರು
3. ಗೃಹ ಉದ್ಯಮ ಕೆಲಸಗಾರರು
4. ದಲಿತ ಮಹಿಳೆಯರು
5. ಸಾಮಾಜಿಕ ಮತ್ತು ಸಾಂಸ್ಕೃತಿಕ ಕ್ಷೇತ್ರದಲ್ಲಿ ಮಹಿಳೆಯರ ಚಿತ್ರಣ.
6. ಜನಸಂಖ್ಯಾ ನೀತಿ
7. ಮತಾಂಧತೆ ಮತ್ತು ಮಹಿಳೆಯರ ಮೇಲೆ ಅದರ ಪರಿಣಾಮ.....

ಇವುಗಳ ಕುರಿತು ಆಯೋಗ ರಚಿಸಿ ಚರ್ಚೆ ನಡೆಯಲಿದೆ. ಸಂಘಟನೆಯ ಹೆಮ್ಮೆಯ ನೇತಾರರಾದ - ಸ್ವತಂತ್ರ - ಹೋರಾಟದ ವೀರ ವನಿತೆಯರಾದ ಕ್ಯಾಪ್ಟನ್ ಲಕ್ಷ್ಮಿ ಸೆಹಗಲ್ ತೆಲಂಗಾಣ ಹೋರಾಟಗಾರ್ತಿ ಮಲ್ಲು ಸ್ವರಾಜ್ಯಂ, ಪಾಪಾ ಉಮಾನಾಥ್-ಕನಕ ಮುಖರ್ಜಿ, ಮೇಟೂರು ಉದಯಂ, ಅಹಲ್ಯ ರಂಗ್ನೇಕರ್ ಮುಂತಾದವರಿಗೆ, ಚಳುವಳಿಗೆ ಅವರ ಕೊಡುಗೆಯನ್ನು ಗುರುತಿಸಿ ಅಭಿನಂದನೆ ಸಲ್ಲಿಸಲಾಗುತ್ತದೆ.

ಅತ್ಯಂತ ಸಾಮಾನ್ಯ ಕುಟುಂಬದಲ್ಲಿ ಜನಿಸಿ-ಕಡು ಬಡತನದ ಕೂಲಿಕಾರ ಬದುಕನ್ನು ನಡೆಸುತ್ತಿದ್ದು ಅಸಾಮಾನ್ಯ ಪರಿಸರ ಪ್ರಜ್ಞೆಯನ್ನು ಮೆರಸಿ ಸಾಲು ಮರದ ತಿಮ್ಮಕ್ಕ ಎಂದೇ ಪ್ರಸಿದ್ಧಿ ಪಡೆದ ರಾಷ್ಟ್ರಪ್ರಶಸ್ತಿ ವಿಜೇತೆ ಮತ್ತು ಮುಸ್ಲಿಂ ಮಹಿಳೆಯರ ಘೋಷಾ ಪದ್ಧತಿ ವಿರುದ್ಧ ಧ್ವನಿ ಎತ್ತಿದ ನಜಿಮಾ ಭಾಂಗಿ, ಹಾನಗಲ್ ಭೂ ಹೋರಾಟದ ಹೋರಾಟಗಾರ್ತಿಯರು - ಮುಂತಾಗಿ ವಿವಿಧ ಕ್ಷೇತ್ರಗಳ ಮಹಿಳೆಯರಿಗೆ ಸಾರ್ವಜನಿಕ ಸಭೆಯಲ್ಲಿ ಸನ್ಮಾನ ಮಾಡಲಾಗುತ್ತಿದೆ.

ಸಮ್ಮೇಳನದ ಸಿದ್ಧತೆಗಾಗಿ - ಪ್ರಚಾರಕ್ಕಾಗಿ ಎಲ್ಲ ಉಪಸಮಿತಿಗಳು ಕಾರ್ಯಪ್ರವೃತ್ತವಾಗಿದ್ದು ಬೀದಿ ನಾಟಕಗಳು ಸಿದ್ಧವಾಗುತ್ತಿವೆ. ಮಹಿಳೆಯರ ಸಮಸ್ಯೆಗಳನ್ನು ಬಿಂಬಿಸುವ ಹಲವು ಕಾರ್ಯಕ್ರಮಗಳಲ್ಲಿ ಒಂದಾಗಿ ಜೂನ್ 7 ರಂದು 'ಮಹಿಳೆ ಮತ್ತು ಕ್ರೌರ್ಯ' ವಸ್ತುವಾಗಿಟ್ಟು ಕಲಾ ಶಿಬಿರ ನಡೆಯಲಿದೆ. ಸಮ್ಮೇಳನದ ಉದ್ಘಾಟನೆಯೊಂದಿಗೆ ಕಲಾ ಪ್ರದರ್ಶನದ ಉದ್ಘಾಟನೆಯೂ ನಡೆಯಲಿದ್ದು ಕ್ಯಾಪ್ಟನ್ ಲಕ್ಷ್ಮಿ ಸೆಹಗಲ್ ರವರು ಉದ್ಘಾಟಿಸಲಿದ್ದಾರೆ. ಸಮ್ಮೇಳನದ ಪೂರ್ವಭಾವೀ ಸಿದ್ಧತೆಯಾಗಿ ಮಹಿಳೆ ಮತ್ತು ಕಾನೂನಿನ ಕುರಿತಂತೆ ಒಂದು ವಿಚಾರಗೋಷ್ಠಿ 6.6.98 ರಂದು ನಡೆಯಲಿದೆ.

ಹೀಗೆ ಹತ್ತು ಹಲವು ಚಟುವಟಿಕೆಗಳೊಂದಿಗೆ ಸಮ್ಮೇಳನದ ಸಿದ್ಧತೆಗಳು ನಡೆಯುತ್ತಿವೆ. ಅಂತೆಯೇ 13.6.98 ರ ಬಹಿರಂಗ ಸಭೆಯ ತಯಾರಿಗಾಗಿ ಸಾವಿರಾರು ಮಹಿಳೆಯರನ್ನು ಪಾಲ್ಗೊಳಿಸಲು ಸಿದ್ಧತೆಗಳು ಜಿಲ್ಲೆ ಜಿಲ್ಲೆಗಳಲ್ಲಿ ನಡೆಯುತ್ತಿವೆ. ಪ್ರಥಮ ಬಾರಿಗೆ ನಡೆಯುತ್ತಿರುವ ಅಖಿಲ ಭಾರತ ಮಹಿಳಾ ಸಮ್ಮೇಳನವನ್ನು ಯಶಸ್ವಿಗೊಳಿಸೋಣ.

ವಾರದ ವ್ಯಂಗ್ಯಚಿತ್ರ

'ದಿ ಹಿಂದು' ನಲ್ಲಿ ಸುರೇಂದ್ರನ್



ನಿವೃತ್ತಿ ವಯಸ್ಸು ಏರಿಕೆ: ಅನಗತ್ಯವಾದ ಅಗ್ಗದ ಜನಪ್ರಿಯತೆಯ ಕ್ರಮ

ಕೇಂದ್ರ ಸರ್ಕಾರಿ ನೌಕರರ ಒಕ್ಕೂಟದ ಖಂಡನೆ

ಕೇಂದ್ರ ಸರ್ಕಾರೀ ನೌಕರರ ಮತ್ತು ಕಾರ್ಮಿಕರ ಮಹಾ ಒಕ್ಕೂಟ ನಿವೃತ್ತಿ ವಯಸ್ಸನ್ನು ಹಾಗೂ ಸರಕಾರೀ ಸೇವೆಗೆ ಸೇರುವ ವಯಸ್ಸನ್ನು ಎರಡು ವರ್ಷಗಳಷ್ಟು ಹೆಚ್ಚಿಸಿರುವ ಸರಕಾರದ ನಿರ್ಣಯವನ್ನು 'ಆತುರದ, ವಿಚಾರಹೀನ ಸಂದೇಹಾಸ್ಪದ, ಅಗ್ಗದ ಜನಪ್ರಿಯತೆಯ ಅನಗತ್ಯವಾದ ಒಂದು ಕ್ರಮ' ಎಂದು ಖಂಡಿಸಿದೆ. ಈ ನಿರ್ಣಯದ ಪರಿಣಾಮಗಳ ಬಗ್ಗೆ ಚರ್ಚಿಸಲು ಜಂಟಿ ಸಮಾಲೋಚನಾ ವ್ಯವಸ್ಥೆ (ಜೆ.ಸಿ.ಎಂ.)ಯ ರಾಷ್ಟ್ರೀಯ ಮಂಡಳಿಯ ಸಭೆ ಕರೆಯಬೇಕು ಎಂದು ಅದು ಆಗ್ರಹಪಡಿಸಿದೆ.

ಈ ಬಗ್ಗೆ ಒಂದು ವಿವರವಾದ ಹೇಳಿಕೆ ನೀಡಿರುವ ಮಹಾ ಒಕ್ಕೂಟದ ಮಹಾ ಕಾರ್ಯದರ್ಶಿ ಎಸ್.ಕೆ.ವ್ಯಾಸ್‌ರವರು 'ಈ ಮಹಾನಗರದಲ್ಲಿ ತುಂಬಿರುವ ನೌಕರರಿಂದ ಮತ ಗಿಟ್ಟಿಸಬಹುದು ಎಂದು ಸರಕಾರ ಈ ನಿರ್ಣಯ ಕೈಗೊಂಡಿದ್ದರೆ ಅವರು ನಿರುದ್ಯೋಗಿಗಳಾಗಿರುವ ಒಂದು ದೊಡ್ಡ ವಿಭಾಗವನ್ನು ಸಂಪೂರ್ಣವಾಗಿ ಕಡೆಗಣಿಸಿದ್ದಾರೆ. ಅವರಿಗೆ ಖಂಡಿತಾ ನಿರಾಸೆಯಾಗಿದೆ. ಏಕೆಂದರೆ ಮುಂದಿನ ಎರಡು ವರ್ಷ ಸರಾಕರೀ ಸೇವೆಯನ್ನು ಸೇರುವ ಅವರ ಅವಕಾಶ ಈಗ ಮುಚ್ಚಿ ಹೋಗಿದೆ' ಎಂದಿದ್ದಾರೆ.

ಮುಂದುವರೆದು ಅವರು "ಕಳೆದ ಸೆಪ್ಟೆಂಬರ್‌ನಲ್ಲೇ ನಿರ್ಣಯ ಕೈಗೊಳ್ಳಲಾದ ಈಶಾನ್ಯ ಭಾರತದಲ್ಲಿ ವಿಶೇಷ ಪರಿಹಾರ ಭತ್ಯೆ ಮುಂತಾದ ಹಲವು ಪ್ರಶ್ನೆಗಳ ಬಗ್ಗೆ ಆದೇಶಗಳನ್ನು ಹೊರಡಿಸಿದ ಸರಕಾರ, ಅಂಚೆ - ವಿಭಾಗದಲ್ಲಿ ಮೂರು ಲಕ್ಷಕ್ಕೂ ಮೀರಿರುವ ಇಲಾಖೇತರ ನೌಕರರ ಬಗ್ಗೆ ಒಂದು ವರ್ಷದ ಕೆಳಗೆ ವರದಿ ಸಲ್ಲಿಸಿದ ನ್ಯಾಯಮೂರ್ತಿ ತಲ್ವಾರ್ ಆಯೋಗದ ಶಿಫಾರಸುಗಳ ಬಗ್ಗೆ ಏನೂ ನಿರ್ಣಯ ಕೈಗೊಳ್ಳದ ಸರಕಾರ ಈ ಬಗ್ಗೆ 24 ಗಂಟೆಯೊಳಗೆ ತರಾತುರಿ ಯಲ್ಲಿ ಆದೇಶ ಹೊರಡಿಸಿದೆ. ರದ್ದು ಮಾಡದಿರಲು ನಿರ್ಧರಿಸಿದ ಮೂರು ಲಕ್ಷ ಖಾಲಿ ಹುದ್ದೆಗಳ ಭರ್ತಿಗೂ ಆದೇಶ ಹೊರಡಿಸಿಲ್ಲ" ಎಂದು ಟೀಕಿಸಿದರು.

ಈ ನಿರ್ಣಯ ಸರಕಾರದ ತಾತ್ಕಾಲಿಕ ಹಣಕಾಸು ಕೊರತೆಯನ್ನು ತಗ್ಗಿಸಬಹುದು, ಆದರೆ ಒಟ್ಟಾರೆಯಾಗಿ ತನ್ನ ಮೇಲಿನ ಹೊರೆಯನ್ನು ಅದು ಹೆಚ್ಚಿಸಿಕೊಂಡಿದೆ ಎಂದು ಅವರು ಹೇಳಿದ್ದಾರೆ. ಗ್ರೂಪ್ 'ಡಿ' ನೌಕರರ ನಿವೃತ್ತಿ ವಯಸ್ಸು ಈಗಾಗಲೇ 60 ವರ್ಷವಾಗಿದ್ದು ನ್ಯಾಯವಾಗಿ ಈಗ ಅವರ ನಿವೃತ್ತಿ ವಯಸ್ಸನ್ನು 2 ವರ್ಷ ಹೆಚ್ಚಿಸಬೇಕು ಎಂದು ಮಹಾ ಒಕ್ಕೂಟದ ಹೇಳಿಕೆ ತಿಳಿಸಿದೆ.

ಐದನೇ ವೇತನ ಆಯೋಗ ನಿವೃತ್ತಿ ವಯಸ್ಸನ್ನು 60ಕ್ಕೆ ಹೆಚ್ಚಿಸಲು ಮುಖ್ಯ ಕಾರಣ, ನೌಕರರು 33 ವರ್ಷಗಳ ಸೇವೆ ಸಲ್ಲಿಸದೆ ಆ ಮೂಲಕ ಪೂರ್ಣ ನಿವೃತ್ತಿ ವೇತನ ಪಡೆಯದೆ ನಿವೃತ್ತರಾಗುವುದನ್ನು ತಪ್ಪಿಸುವುದು, ಆದರೆ ಈಗಲೂ ಹಲವುನೌಕರರು 33 ವರ್ಷದ ಸೇವೆ ಸಲ್ಲಿಸದೆ ನಿವೃತ್ತರಾಗುತ್ತಾರೆ. ಉದಾ: ಎಸ್.ಸಿ., ಎಸ್.ಟಿ, ನೌಕರರು ಕೆಲಸಕ್ಕೆ ಸೇರುವ ವಯಸ್ಸು 5 ವರ್ಷಗಳಷ್ಟು ಹೆಚ್ಚಿದ್ದು ಹಲವರು ಪೂರ್ಣನಿವೃತ್ತಿ ವೇತನಕ್ಕಾಗಿ ಸಲ್ಲಿಸಬೇಕಾದ 33 ವರ್ಷಗಳ ಸೇವೆ ಸಲ್ಲಿಸದೆ ನಿವೃತ್ತರಾಗುತ್ತಿದ್ದಾರೆ. 30 ವರ್ಷ ಸೇವೆ ಸಲ್ಲಿಸಿದವರಿಗೆ ಪೂರ್ಣ ನಿವೃತ್ತಿ ವೇತನ ನೀಡಲಾಗುತ್ತದೆ ಎಂದು ನಿರ್ಧರಿಸಿದರೆ ಮಾತ್ರವೇ ಈ ಸಮಸ್ಯೆಗೆ ಪರಿಹಾರ ಸಾಧ್ಯ ಎಂದು ಕೇಂದ್ರ ಸರ್ಕಾರಿ ನೌಕರರ ಮಹಾ ಒಕ್ಕೂಟ ಸ್ಪಷ್ಟಪಡಿಸಿದೆ.

ಸಾರ್ವಜನಿಕ ವಲಯದ ರಕ್ಷಣೆಗೆ ಪ್ರಚಾರ, ಚಳುವಳಿ, ಕಾರ್ಯಾಚರಣೆಯ ಕಾರ್ಯಕ್ರಮ

ಭಾರತ ಸರ್ಕಾರದ ಸಾರ್ವಜನಿಕ ವಲಯ-ವಿರೋಧಿ ಧೋರಣೆಗಳನ್ನು ವಿಫಲಗೊಳಿಸಲು ಹಾಗೂ ಸಾರ್ವಜನಿಕ ವಲಯದ ಕಾರ್ಮಿಕರ ದೀರ್ಘಕಾಲದ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ಪ್ರಚಾರ, ಚಳುವಳಿ ಹಾಗೂ ಕಾರ್ಯಾಚರಣೆಯ ಒಂದು ಕಾರ್ಯಕ್ರಮವನ್ನು ದೇಶದ ಎಲ್ಲಾ ಪ್ರಮುಖ ಸಾರ್ವಜನಿಕ ವಲಯದ ಕಾರ್ಮಿಕರನ್ನು ಪ್ರತಿನಿಧಿಸುವ 130 ಪ್ರಮುಖ ಟ್ರೇಡ್ ಯೂನಿಯನ್ ಕಾರ್ಯಕರ್ತರ ಸಭೆಯಲ್ಲಿ ಅಂಗೀಕರಿಸಲಾಯಿತು. ಮೇ 12-13 ರಂದು ಈ ಸಭೆಯು ನವದೆಹಲಿಯಲ್ಲಿ ನಡೆಯಿತು.

ಎಲ್ಲಾ ರೋಗಗ್ರಸ್ತ ಘಟಕಗಳ ಪುನರುಜ್ಜೀವನಕ್ಕೆ ಸರಕಾರ ಪ್ರೋತ್ಸಾಹ ನೀಡಬೇಕು, ಬಿಐಎಫ್‌ಆರ್‌ಗೆ ವಹಿಸಿದ ಘಟಕಗಳ ಕಾರ್ಮಿಕರ ವೇತನ ಪರಿಷ್ಕರಣೆ ಮತ್ತಿತರ ಸೌಲಭ್ಯಗಳನ್ನು ನಿಲ್ಲಿಸ ಬಾರದು. ಯಾವುದೇ ಪೂರ್ವ ಶರತ್ತುಗಳಿಲ್ಲದೆ ವೇತನ ಮಾತುಕತೆ ಆರಂಭಿಸಬೇಕು, ಸಾರ್ವಜನಿಕ ವಲಯದ ಖಾಸಗೀಕರಣ ಸಲ್ಲದು, ಶೇರು ಮಾರಾಟ ಆಯೋಗವನ್ನು ರದ್ದು ಮಾಡಬೇಕು ಇತ್ಯಾದಿ ಹತ್ತು ಬೇಡಿಕೆಗಳನ್ನು ಸಾರ್ವಜನಿಕ ವಲಯದ ಕಾರ್ಮಿಕರ ಸಂಘಗಳ ಸಮಿತಿ (CPSTU)ಯ ಈ ವಿಸ್ತೃತ ಸಭೆ ರೂಪಿಸಿತು.

ಜೂನ್ ಮೊದಲ ವಾರದಿಂದ ಗೇಟ್ ಮೀಟಿಂಗ್‌ಗಳಿಂದ ಆರಂಭವಾಗುವ ಈ ಕಾರ್ಯಕ್ರಮ ಸಂಸತ್ತಿನ ಚಳಿಗಾಲದ ಅಧಿವೇಶನದ ವೇಳೆಗೆ ಎರಡು ದಿನಗಳ ಮುಷ್ಕರದ ವರೆಗೆ ಹರಡಿದೆ. ಸಮಾವೇಶಗಳು, ಮತ ಪ್ರದರ್ಶನಗಳು, ಪ್ರಮುಖ ಕಾರ್ಮಿಕ ಕೇಂದ್ರಗಳಲ್ಲಿ ಧರಣಿ, ಆಗಸ್ಟ್ 4 ರಂದು 'ಸಾರ್ವಜನಿಕ ವಲಯ ರಕ್ಷಿಸಿ ದಿನಾಚರಣೆ', ಪ್ರಧಾನಿ ನಿವಾಸದೆದುರು ಧರಣಿ ಹಾಗೂ ಸಾರ್ವಜನಿಕ ವಲಯದ ರಕ್ಷಣೆಗೆ ಮಾನವ ಸರಪಳಿ ಈ ಪ್ರಚಾರ, ಚಳುವಳಿ ಹಾಗೂ ಕಾರ್ಯಾಚರಣೆಯ ಕಾರ್ಯಕ್ರಮದಲ್ಲಿ ಸೇರಿವೆ.

ಸಾರ್ವಜನಿಕ ರಕ್ಷಣೆಯ ಈ ಕಾರ್ಯಕ್ರಮದಲ್ಲಿ ಜನಸಾಮಾನ್ಯರನ್ನು ಒಳಗೊಳ್ಳಲು ಸಾಧ್ಯವಾದಷ್ಟು ಪ್ರಯತ್ನ ನಡೆಸಬೇಕು ಎಂದು ಮನವಿ ಮಾಡಿರುವ ಸಿಪಿಎಸ್‌ಟಿಯು ಸಾರ್ವಜನಿಕ ವಲಯದ ಕಾರ್ಮಿಕರು ಯಾವುದೇ ಸಂಘ-ಸಂಘಟನೆಯ ಭೇದ ಭಾವಗಳಿಲ್ಲದೇ ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕು ಎಂದು ಕರೆ ನೀಡಿದೆ.

(ಐಎನ್‌ಎನ್)

"ಬಾಬ್ರಿ ಮಸೀದಿ ಧ್ವಂಸವೂ ಒಂದು ಕ್ರಿಮಿನಲ್ ಕೃತ್ಯ"

ಇದು ಈಗಿನ ಕೇಂದ್ರ ಮಂತ್ರಿ ರಾಮ್ ಜೇಠ್ಮಲಾನಿ ಉವಾಚ

ಹೌದು, ಇದು ಏಳುವರೆ ವರ್ಷಗಳ ಹಿಂದೆ ಬಾಬ್ರಿ ಮಸೀದಿ ಧ್ವಂಸದ ಪ್ರಯತ್ನ ಅಡ್ವಾಣಿಯವರ ನೇತೃತ್ವದಲ್ಲಿ ಆರಂಭವಾದಾಗಿನ ಅಭಿಪ್ರಾಯ. ಅಕ್ಟೋಬರ್ 1990 'ಇಂಡಿಯನ್ ಎಕ್ಸ್‌ಪ್ರೆಸ್'ನಲ್ಲಿ ಪ್ರಕಟವಾಗಿದೆ. ಆದರೆ ಇದು ಅವರ ಕಾನೂನು ಪಂಡಿತರ ಅಭಿಪ್ರಾಯ ಎಂಬುದನ್ನು ಈಗ ಮರೆಯಲು ಸಾಧ್ಯವೇ?

"ಯಾವುದೇ ಪುಣ್ಯಸ್ಥಳವನ್ನು ಬೀಳಿಸುವುದು ಭಾರತೀಯ ದಂಡ ಸಂಹಿತೆ (ಐ.ಪಿ.ಸಿ.)ಯ ಪ್ರಕಾರ ಒಂದು ಗಂಭೀರ ಕ್ರಿಮಿನಲ್ ಅಪರಾಧ. ಈ ಪೂಜಾಸ್ಥಳವನ್ನು ಐನೂರು ವರ್ಷಗಳ ಹಿಂದೆ ಕಟ್ಟಿದ್ದೆಂಬುದಾಗಲೀ, ಆಪಾದಿತರ ಕೋಮಿಗೆ ಸೇರಿದ ಇನ್ನೊಂದು, ಪೂಜಾಸ್ಥಳವನ್ನು ಧ್ವಂಸ ಮಾಡಿ ಕಟ್ಟಲಾಯಿತು ಎಂಬುದಾಗಲೀ ಕಾನೂನಿನ ಪ್ರಕಾರ ರಕ್ಷಣೆ ನೀಡುವುದಿಲ್ಲ. ಅಯೋಧ್ಯೆಯಲ್ಲಿ ಸೇರಿ ಮಸೀದಿಯನ್ನು ಬೀಳಿಸುವ ಬೆದರಿಕೆ ನೀಡಿದ ಜನಜಂಗುಳಿ ಕಾನೂನಿನ ಕಣ್ಣಲ್ಲಿ ಕಿರುಕುಳ ಕೊಡುವ, ಒಳನುಗ್ಗುವ, ಧಾರ್ಮಿಕ ಭಾವನೆಗಳನ್ನು ಘಾಸಿಗೊಳಿಸುವ, ಪವಿತ್ರ ಸ್ಥಳವನ್ನು ಅಪವಿತ್ರಗೊಳಿಸುವ ಕಾನೂನುಬಾಹಿರ ಸಭೆಯೆಂದೇ ಆಗುತ್ತದೆ. ಗಂಭೀರ ಗಾಯಗಳನ್ನು ಮಾಡುವುದು, ಕೊಲೆಗಳು ಈ ಸಭೆಯ ಸದಸ್ಯರು ಮಾಡಬಹುದೆಂದು ತರ್ಕಿಸಬಹುದಾದ ಕೃತ್ಯಗಳು, ಈ ಪರಿಸ್ಥಿತಿಯನ್ನು ಕಾನೂನಿನ ಪ್ರಕಾರ ಎದುರಿಸುವುದು ಸರಕಾರದ ನೇರ ಕರ್ತವ್ಯ. ಈ ಕಾನೂನುಬಾಹಿರ ಸಭೆಯನ್ನು ಚದುರಿಸಲು, ಅದು ಬೆದರಿಕೆ ಹಾಕಿದ ಅಪರಾಧಗಳು ನಡೆಯದಂತೆ ಮಾಡಲು ತನ್ನ ಎಲ್ಲಾ ಶಕ್ತಿಯನ್ನು ಸರಕಾರ ಬಳಸಬೇಕೆಂದು ಕಾನೂನು ನಿಸ್ಸಂದೇಹವಾಗಿಯೂ ನಿರೀಕ್ಷಿಸುತ್ತದೆ. ಇದರಿಂದಾಗುವ ಅನಾಹುತಗಳು, ಜೀವಹಾನಿ ಈ ಕಾನೂನುಬದ್ಧ ಹಾಗೂ ಸಂವಿಧಾನಿಕ ಕರ್ತವ್ಯ ನಿರ್ವಹಣೆಯ ಪರಿಣಾಮಗಳೆಂದಷ್ಟೆ ಪರಿಗಣಿಸ ಲ್ಪಡುತ್ತವೆ. ಆದ್ದರಿಂದ ಎಷ್ಟೇ ಕಮ್ಮಿಯಾದರೂ ಇನ್ನೂ ಸಮಯವಿದೆ. ಪ್ರತಿಯೊಬ್ಬ ವಿವೇಕಯುತ ವ್ಯಕ್ತಿ ಆತ್ಮಪರೀಕ್ಷೆ ಮಾಡಿಕೊಳ್ಳಬೇಕು.

ಟೈಂ ಬಾಂಬು ಟಿಕ್ ಟಿಕ್ ಎನ್ನುತ್ತಿದೆ. ಅದು ಸ್ಫೋಟಗೊಂಡಾಗ ಕೋಮು ಸೌಹಾರ್ದ ಮತ್ತು ರಾಷ್ಟ್ರೀಯ ಸಮಗ್ರತೆ ಅದಕ್ಕೆ ಪ್ರಧಾನ ಬಲಿಗಳು. ಅದರಿಂದ ದೇಶ ಬಲಶಾಲಿಯಾಗಿ ಹೊರಹೊಮ್ಮುವುದಿಲ್ಲ, ದುರ್ಬಲವಾಗುತ್ತದೆ, ಹೇಳತೀರದಷ್ಟು ಅಂಗವಿಕಲಗೊಳಿಸುತ್ತದೆ. ಶ್ರೀಯುತ ಎಲ್.ಕೆ. ಅಡ್ವಾಣಿ ಒಬ್ಬ ಸಂಸತ್ ಸದಸ್ಯರು. ಅವರು ಕಾನೂನು ಮತ್ತು ಸಂವಿಧಾನವನ್ನು ಎತ್ತಿ ಹಿಡಿಯುವ ಪ್ರತಿಜ್ಞೆ ಸ್ವೀಕರಿಸಿದ್ದಾರೆ.

"ತಾನು ಕಾನೂನು ಭಂಜಕರ ಸಭೆಗೆ ನೇತೃತ್ವ ನೀಡುವಾಗ ಉತ್ತರ ಪ್ರದೇಶ ಸರಕಾರ ಏನು ಮಾಡಬೇಕು ಎಂದು ಅವರು ನಿರೀಕ್ಷಿಸುತ್ತಾರೆ? ಆ ಸರಕಾರದ ಮಂತ್ರಿಗಳು ಕಾನೂನು ಮತ್ತು ಸಂವಿಧಾನವನ್ನು ಎತ್ತಿ ಹಿಡಿಯುವ ಪ್ರತಿಜ್ಞೆ ಸ್ವೀಕರಿಸಿದ್ದಾರೆ. ಮುಂದೊತ್ತುತ್ತಿರುವ ಜನಜಂಗುಳಿ ಸಾಧುಗಳು, ಆಚಾರ್ಯರುಗಳು ಅಥವಾ ಬೇರೆ ರೀತಿಯ ಗೌರವಾರ್ಹರಾದ ರಾಜಕೀಯ ಮುಖಂಡರದ್ದೇ ಆಗಿದ್ದರೂ ಪೋಲೀಸ್ ಪಡೆ ಶಾಸನದ ಪ್ರಕಾರ ಅವರನ್ನು ತಡೆಯಲೇಬೇಕು. ಈ ಬಗ್ಗೆ ಕಾನೂನಿನಲ್ಲಿ ಅಸಮಂಜತೆಯಾಗಲೀ ಇಲ್ಲ"

ಮೇ 22ರಂದು ವಿಶೇಷ ನ್ಯಾಯಾಲಯ ಈ ಬಾಬ್ರಿ ಮಸೀದಿ ಧ್ವಂಸದ ಕೇಸ್‌ನಲ್ಲಿ ಚಾರ್ಜ್‌ಶೀಟ್ ಮಾಡಿದರೂ ಅಡ್ವಾಣಿ, ಜೋಷಿ, ಉಮಾಭಾರತಿಯವರು ರಾಜೀನಾಮೆ ಕೊಡಬೇಕಿಲ್ಲ ಎಂದು ಬಿ.ಜೆ.ಪಿ. ಮುಖಂಡರ ಹೇಳಿಕೆಯ ಬಗ್ಗೆ ಈ ಕಾನೂನು ಪಂಡಿತರು ಈಗ ದಿವ್ಯ ಮೌನತಾಳಿರು ವುದೇತಕ್ಕೆ? ಮತದಾರರಿಗೆ ತಿಳಿಸುವರೆ? ಅಥವಾ ಮತದಾರರು ಅವರ ಕಾನೂನು ಪಾಂಡಿತ್ಯ, ಪ್ರಾಮಾಣಿಕತೆಯನ್ನು ಪ್ರಶ್ನಿಸಬೇಕೆ?

KRNM/BGS-405 MAG(2) PRB DECR 319-79/79
ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಪಿ. ರಾಮಚಂದ್ರರಾವ್
ಸಂಪಾದಕರು: ಪಿ. ರಾಮಚಂದ್ರರಾವ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ವ್ಯವಸ್ಥಾಪಕ ಕಛೇರಿ: ನಂ.24, 5ನೇ ಮುಖ್ಯರಸ್ತೆ, ಗಾಂಧಿನಗರ, ಬೆಂಗಳೂರು-9 ಮುದ್ರಣ: ಕಂಠೀರವ ಆಫ್‌ಸೆಟ್, ನಂ.6, 7ನೇ ಮುಖ್ಯರಸ್ತೆ, ಎಸ್.ಆರ್. ನಗರ, ಬೆಂ.27